ಚರಿತ್ರ ವಿಭಾಗ ಮಾಲೆ-೧

ಗತಿ ಚಳವಳಿಗಳು

ಏಕೀಕರಣೋತ್ತರ ಕರ್ನಾಟಕ ಚಳವಳಿ ಸಂಪುಟ-೧

ಎನ್. ಚಿನ್ನಸ್ವಾಮಿ ಸೋಸಲೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗಡಿ ಚಳವಳಿಗಳು

ಸಂಪುಟ ೧

ಕಾವೇರಿಯಿಂದಮಾ ಗೋ ।
ದಾವರಿವರಮಿರ್ದ ನಾಡದಾ ಕನ್ನಡದೊಳ್ ।
ಭಾವಿಸಿದ ಜನಪದಂ ವಸು ।
ಧಾವಲಯವಿಲೀನ ವಿಶವ ವಿಷಯ ವಿಶೇಷಂ ।

ಅದರೊಳಗಂ ಕಿಸುವೊಳಲಾ ।
ವಿದಿತ ಮಹಾಕೊಪಣನಗರದಾ ಪುಲಿಗೆರೆಯಾ ।
ಸದಭಿಸ್ತುತಮಪ್ಪೊಂಕುಂ ।
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ।

– ಕವಿರಾಜಮಾರ್ಗ

ಚರಿತ್ರೆ ವಿಭಾಗ ಮಾಲೆ - ೧

ಗಡಿ ಚಳವಳಿಗಳು

ಏಕೀಕರಣೋತ್ತರ ಕರ್ನಾಟಕ ಚಳವಳಿ ಸಂಪುಟ - ೧

ಎನ್. ಚಿನ್ನಸ್ವಾಮಿ ಸೋಸಲೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

GADI CHALAVALIGALU
A Study of Border Dispute Movements
by N. Chinnaswamy Sosale
Lecturer, Department of History
Kannada University, Hampi

(Post Unification Karnataka Movements Series- Vol. 1)

Published by
Prof. A. V. Navada
Director, Prasaranga
Kannada University, Hampi
Vidyaranya - 583 276

Pages : xii+ 96

First Edition 1999

Price : Rs. 50/-

ಪ್ರಕಾಶಕರು
ಪ್ರೊ. ಎ. ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಬೆಲೆ : ರೂ. ೫೦/-

ಮುಖಪುಟ : ಕೆ. ಕೆ. ಮಕಾಳಿ

ಮುದ್ರಣ
ಲಕ್ಷ್ಮಿ ಮುದ್ರಣಾಲಯ
೧೧೭/೨, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು - ೧೮
✆ ೬೬೧೩೧೨೩, ೬೬೧೮೭೫೨

*

ದೇಸಿಯೊಳ್ ಪುಗುವುದು

ಡಾ. ಎಂ.ಎಂ.ಕಲಬುರ್ಗಿ
ಕುಲಪತಿಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಶಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂಥ ಜೀವನಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನ ಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶಿ ಚಳವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶ ಗಳನ್ನು ಗುರುತಿಸುವುದು; ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳುವುದು. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ

ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆಯ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ 'ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರಮಾಧ್ಯಮ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ 'ಪುಸ್ತಕ ಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಪ್ರಕಟಣೆಯಾಗಿದೆ 'ಗಡಿ ಚಳವಳಿಗಳು'.

ಅನ್ಯಾಯವನ್ನು ಸಹಿಸಿಕೊಂಡು ಹೋಗುತ್ತಲಿರುವ ಸ್ವಭಾವದ ಭಾರತೀಯರು ಇತ್ತೀಚೆ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಮನೋಧರ್ಮವನ್ನು ರೂಢಿಸಿಕೊಂಡಿರುವ ಫಲ 'ಚಳವಳಿ'. ಏಕೀಕರಣೋತ್ತರ ಕರ್ನಾಟಕದಲ್ಲಿ ತಲೆದೋರಿದ ಇಂಥ ಆರು ಮುಖ್ಯ ಚಳವಳಿಗಳನ್ನು ಕುರಿತು ಚರಿತ್ರೆ ವಿಭಾಗವು ಯೋಜನೆಯೊಂದನ್ನು ಕೈಗೆತ್ತಿಕೊಂಡಿದೆ. ಇದರ ಅಂಗವಾಗಿ ಪ್ರಕಟವಾಗುತ್ತಲಿರುವ ಆರು ಕೃತಿಗಳಲ್ಲಿ 'ಗಡಿ ಚಳವಳಿಗಳು' ಒಂದು. ಇದನ್ನು ರಚಿಸಿದ ಶ್ರೀ ಎನ್. ಚಿನ್ನಸ್ವಾಮಿ ಸೋಸಲೆ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

□□

ಲೇಖಕರ ಮಾತು

ಸುಮಾರು ಎರಡು ಸಾವಿರ ವರ್ಷಗಳ ಭವ್ಯ ಚರಿತ್ರೆ ಹಾಗೂ ದಿವ್ಯ ಸಂಸ್ಕೃತಿಯನ್ನು ಪಡೆದಿರುವಂತಹ ಕರ್ನಾಟಕವನ್ನು ಆಳಿಹೋದ ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಹಾಗೂ ವಿಜಯನಗರದರಸರು ಈ ಪ್ರಾಚೀನ ನಾಡಿನ ಶೌರ್ಯ-ಸಾಹಸ- ಸ್ವಾತಂತ್ರ್ಯಪ್ರೇಮವನ್ನು ಮೆರೆಸಿ ಹೋಗಿದ್ದಾರೆ. ಇಮ್ಮಡಿ ಪುಲಿಕೇಶಿ, ವಿಕ್ರಮಾದಿತ್ಯ, ನೃಪತುಂಗ, ಧ್ರುವ, ಇಮ್ಮಡಿ ಪ್ರೌಢದೇವರಾಯ ಹಾಗೂ ಕೃಷ್ಣದೇವರಾಯ ಮೊದಲಾದಂತಹ ನಾಡಿನ ಚಕ್ರವರ್ತಿಗಳು ಪ್ರಪಂಚದ ಮಹಾನ್ ಚಕ್ರವರ್ತಿಗಳಿಗೆ ಸರಿಸಮಾನರಾಗಿದ್ದಾರೆ. ಇವರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕದ ಗಡಿ ಹಿಮಾಲಯದ ವರೆಗೂ ಹಬ್ಬಿತ್ತು. ಸಿಂಹಳವೂ ಕರ್ನಾಟಕದ ಒಂದು ಭಾಗವಾಗಿತ್ತು. ಔರಂಗಜೇಬನನ್ನು ಎದುರಿಸಿದ ಶಿವಾಜಿ ಮಹಾರಾಜನ ಸೈನ್ಯವನ್ನೇ ಎದುರಿಸಿದ ಬೆಳವಡಿ ಮಲ್ಲಮ್ಮ; ಸ್ವತಃ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯವಿತ್ತ ಕೆಳದಿ ಚೆನ್ನಮಾಜಿ; ಆಂಗ್ಲರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಿದ ಪ್ರಥಮ ಸ್ವತಂತ್ರ್ಯಯೋಧೆ ಕಿತ್ತೂರು ಚೆನ್ನಮ್ಮ ಇವರು ಕನ್ನಡದ ವೀರರಮಣಿಯಾಗಿದ್ದಾರೆ. ಕರ್ನಾಟಕದ ಮಣ್ಣಿನಲ್ಲಿ ಬೆಳಗಿದಂತಹ ಈ ವೀರಸ್ತ್ರೀ-ಪುರುಷರು ಪರಾಕ್ರಮದಲ್ಲಿ, ಪ್ರತಾಪದಲ್ಲಿ, ಪರಧರ್ಮ ಸಹಿಷ್ಣುತೆಯಲ್ಲಿ, ಪರೋಪಕಾರದಲ್ಲಿ, ಪ್ರಜಾಪಾಲನೆಯಲ್ಲಿ, ಧರ್ಮ-ಸಾಹಿತ್ಯ-ಕಲೆ ಹಾಗೂ ಸಂಸ್ಕೃತಿಗಳ ಪೋಷಣೆಯಲ್ಲಿ ಹೆಸರಾಗಿದ್ದಾರೆ.

ಹಿಂದೊಮ್ಮೆ ಮಹಾವೈಭವದಿಂದ ಭರತಖಂಡದ ಬೆಳಕಾಗಿ ಬೆಳಗಿದಂತಹ ಕನ್ನಡನಾಡು ಕಾಲದ ಚಕ್ರಕ್ಕೆ ಸಿಲುಕಿ ನೆರೆಯ ರಾಜ್ಯಗಳಲ್ಲಿ ಹಾಗೂ ಬ್ರಿಟೀಷರ ಅಧೀನದಲ್ಲಿ ಹಂಚಿಹೋದದ್ದು ಐತಿಹಾಸಿಕ ದುರಂತವೇ ಸರಿ! ಇದರಿಂದಾಗಿ ಕನ್ನಡಿಗರ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಕೃಷಿ, ಕೈಗಾರಿಕೆಗಳ ಪ್ರಗತಿ ಕುಂಠಿತಗೊಂಡು ಕನ್ನಡದ ಜನರು ಕನ್ನಡನಾಡಿನಲ್ಲಿಯೇ ಅಲ್ಪಸಂಖ್ಯಾತರಾಗಿ ಬಾಳುವಂತಾಗಿತ್ತು. ಅಂದು ಅವರ ಕೊರಗನ್ನು ಕೇಳುವವರೇ ಇಲ್ಲವಾಗಿದ್ದರು. ೧೯೪೭ರಲ್ಲಿ ಭಾರತ ಸ್ವತಂತ್ರವಾದ ಮೇಲೆ ಸ್ವಾತಂತ್ರ್ಯಕ್ಕಾಗಿ ನಡೆಸಿದಂತಹ ಚಳವಳಿಯ ಗುಂಗಿನಲ್ಲಿಯೇ ನಮ್ಮ ನಾಡಿನ ಹಿರಿಯ ಚೇತನಗಳು ಕರ್ನಾಟಕದ ಏಕೀಕರಣಕ್ಕೆ ಪಣತೊಟ್ಟರು. ಇದರ ಫಲವಾಗಿಯೇ ೧೯೫೬ ನವೆಂಬರ್ ೧ ರಂದು ಸಂಪೂರ್ಣವಾಗಿ ಅಲ್ಲವಾದರೂ ಕರ್ನಾಟಕ ಏಕೀಕರಣಗೊಂಡಿತು.

ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದುಕೊಡಲು ಹೋರಾಡಿದ ಹಾಗೆಯೇ ಕರ್ನಾಟಕದ ಏಕೀಕರಣಕ್ಕಾಗಿಯೂ ಸಹಸ್ರಾರು ಜನ ಹೋರಾಡಿದ್ದಾರೆ; ಅಸಂಖ್ಯಾತ ಜನ ಕಷ್ಟ-ನಷ್ಟಗಳನ್ನು ಅನುಭವಿಸಿದ್ದಾರೆ. ಅವರೆಲ್ಲರ ತ್ಯಾಗ, ಪರಿಶ್ರಮಗಳ ಫಲವಾಗಿ ಇಂದಿನ ಏಕೀಕೃತ ಕರ್ನಾಟಕ ನಿರ್ಮಾಣವಾಯಿತು. ಇಂತಹ ವೀರಪುರುಷರು ಹಾಗೂ ವೀರ

ಮಹಿಳೆಯರಿಗೆಲ್ಲ ನಾವು ಕೃತಜ್ಞರಾಗಿರಬೇಕು. ಆದರೆ ಅಂದು ಅವರು ಮನದಲ್ಲಿಟ್ಟುಕೊಂಡು ಹೋರಾಡಿದಂತಹ ಸಂಪದ್ಭರಿತ ಹಾಗೂ ಸಮೃದ್ಧ ಕರ್ನಾಟಕದ ಕನಸು ಇಂದಿಗೂ ಕನಸಾಗಿಯೇ ಇದೆ. ಭಾಷಾವಾರು ಪ್ರಾಂತ್ಯರಚನೆಯ ಆಧಾರದ ಮೇಲೆ ರಾಜ್ಯಗಳನ್ನು ನಿರ್ಮಿಸುವಾಗ ಕನ್ನಡ ಮಾತನಾಡುವ ಜನ, ಕನ್ನಡ ಪ್ರದೇಶವೇ ಆಗಿದ್ದಂತಹ ಅನೇಕ ಪ್ರದೇಶಗಳು ನೆರೆಯ ರಾಜ್ಯಗಳಲ್ಲಿ ಸೇರಿಹೋದವು. ಇವುಗಳನ್ನು ಕನ್ನಡನಾಡಿನೊಳಗೆ ಪಡೆಯಲು ಹೋರಾಟ ನಡೆಯುತ್ತಲೇ ಇದೆ.

ಕನ್ನಡದ ಪ್ರಥಮ ಗ್ರಂಥವೆಂದು ಕರೆಸಿಕೊಳ್ಳುವ 'ಕವಿರಾಜಮಾರ್ಗ'ವು ಕರ್ನಾಟಕದ ಮೇರೆಗಳು ಉತ್ತರದಲ್ಲಿ ಗೋದಾವರಿ ನದಿ, ದಕ್ಷಿಣದಲ್ಲಿ ಕಾವೇರಿ ನದಿಗಳು ಕನ್ನಡನಾಡಿನ ಗಡಿಗಳೆಂದು ಸೂಚಿಸುತ್ತದೆ. ಹಾಗೆಯೇ ಪ್ರಾಚೀನ ಕರ್ನಾಟಕದ ವಿಸ್ತಾರವನ್ನು ಹೇಳುವಾಗ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡು' ಎಂದು ಸಾಮಾನ್ಯವಾಗಿ ನಾವೆಲ್ಲರೂ ಒಪ್ಪಿಕೊಂಡು ಅಂದಿನ ಅದರ ವ್ಯಾಪ್ತಿಗೆ ನಾವೆಲ್ಲರೂ ಹೆಮ್ಮೆ ಪಟ್ಟುಕೊಳ್ಳುವುದೂ ಉಂಟು. ಏಕೆಂದರೆ ಇಂದು ಗೋದಾವರಿ ಪರಿಸರ ಕರ್ನಾಟಕದ ಸೀಮೆಯಾಗಿ ಉಳಿದಿಲ್ಲ, ಅದೇ ರೀತಿ ಕಾವೇರಿ ನದಿಯ ಆಚೆಗೂ ಕನ್ನಡನಾಡು ಬೆಳೆದಿರುವುದು ಕಂಡುಬರುತ್ತದೆ. ಇಂತಹ ವಿಶಾಲ ಕರ್ನಾಟಕದ ಸಾಂಸ್ಕೃತಿಕ ಅಧ್ಯಯನಕ್ಕಾಗಿಯೇ ಸ್ಥಾಪಿತವಾಗಿರುವ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗ ೧೯೯೮-೯೯ನೇ ಸಾಲಿನಲ್ಲಿ ಕೈಗೆತ್ತಿಕೊಂಡಂತಹ ಏಕೀಕರಣೋತ್ತರ ಕರ್ನಾಟಕದ ಪ್ರಮುಖ ಚಳವಳಿಗಳು ಎಂಬ ವಿಷಯದಡಿಯಲ್ಲಿ ನಾನು ಗಡಿಸಂಬಂಧಿ ಚಳವಳಿಗಳನ್ನು ಕುರಿತು ಸಂಶೋಧನೆ ನಡೆಸಿರುತ್ತೇನೆ.

ಮುಖ್ಯವಾಗಿ ಇಲ್ಲಿ ಆರು ಅಧ್ಯಾಯಗಳನ್ನು ಅಳವಡಿಸಿಕೊಂಡಿರುತ್ತೇನೆ. ಮೊದಲನೆಯ ಭಾಗ, ಏಕೀಕರಣೋತ್ತರ ಕರ್ನಾಟಕದಲ್ಲಿ ಹೊರಗುಳಿದ ಕನ್ನಡದ ನೆಲೆ ಹಾಗೂ ಅವುಗಳ ಹಿನ್ನೆಲೆಯನ್ನು ಹೊಂದಿದ್ದರೆ, ಎರಡನೆಯ ಭಾಗ ಹೊರನಾಡಿನ ಕನ್ನಡಿಗರು ಗಡಿಯ ರಕ್ಷಣೆಗಾಗಿ ನಡೆಸಿದ್ದಂತಹ ಹೋರಾಟವನ್ನು ಸೂಚಿಸುತ್ತದೆ. ಮೂರನೆಯ ಭಾಗದಲ್ಲಿ ಕಾಸರಗೋಡು ನೆರೆಯ ಕೇರಳಕ್ಕೆ ಸೇರಿದಾಗಿನಿಂದ ಇಂದಿನವರೆಗೆ ಅದರ ವಿಮೋಚನೆಗಾಗಿ ನಡೆಸಲಾದ ಹೋರಾಟದ ವಿಷಯವನ್ನು ತಿಳಿಸಬಯಸಿರುತ್ತೇನೆ. ನಾಲ್ಕನೆಯ ಭಾಗ, ಗಡಿ ಪ್ರದೇಶಗಳ ಮೂಲಭೂತ ಸಮಸ್ಯೆಯನ್ನು; ಐದನೆಯ ಭಾಗ, ಗಡಿನಾಡಿನ ಬಗ್ಗೆ ಗಣ್ಯವ್ಯಕ್ತಿಗಳ ಅಭಿಪ್ರಾಯವನ್ನು; ಆರನೆಯ ಭಾಗ, ಪ್ರಸ್ತುತ ಕರ್ನಾಟಕದ ಜಿಲ್ಲೆಗಳು, ತಾಲ್ಲೂಕುಗಳು ಹಾಗೂ ೧೯೯೭ರಲ್ಲಿ ಸ್ಥಾಪಿಸಲಾದಂತಹ ೭ ಹೊಸ ಜಿಲ್ಲೆಗಳ ಪರಿಚಯವನ್ನು ಅಳವಡಿಸಿಕೊಂಡಿವೆ.

ನನ್ನನ್ನು ಈ ಸಂಶೋಧನ ಕೆಲಸಕ್ಕೆ ತೊಡಗಿಸಿ ಸೂಕ್ತ ಸಮಯದಲ್ಲೆಲ್ಲ ಸೂಚನೆ ಹಾಗೂ ಸಲಹೆಯನ್ನು ನೀಡಿ ಮುನ್ನಡೆಯಲು ಪ್ರೇರಣೆ ನೀಡುತ್ತಿರುವ ನೆಚ್ಚಿನ ಕುಲಪತಿಗಳಾದ ಮಾನ್ಯ ಡಾ. ಎಂ. ಎಂ. ಕಲಬುರ್ಗಿಯವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಕೃತಿ ರೂಪುಗೊಳ್ಳುವಾಗ ಪ್ರತಿಯೊಂದು ಹಂತದಲ್ಲಿಯೂ ಚರ್ಚಿಸಿ ಸೂಕ್ತ ಸಲಹೆಗಳನ್ನು ನೀಡಿ ಸಹಕರಿಸಿದಂತಹ ನನ್ನ ವಿಭಾಗದ ಪ್ರೀತಿಯ ಸಹೋದ್ಯೋಗಿಗಳಿಗೆ ಕೃತಜ್ಞನಾಗಿರುತ್ತೇನೆ. ನನ್ನ ಈ ಕೆಲಸಕ್ಕೆ ಪ್ರೇರಣೆಯಾಗಿ ಕಾಣದ ಶಕ್ತಿಯಾಗಿ ನನ್ನೊಳಗೆ

ಕೆಲಸ ಮಾಡುತ್ತಿರುವ ಪೂಜ್ಯ ತಂದೆ-ತಾಯಿಯವರಿಗೆ, ದೊಡ್ಡಪ್ಪ ಎಸ್. ಎಂ. ಸಿದ್ದಯ್ಯ (ಮಾಜಿ ಲೋಕಸಭಾ ಸದಸ್ಯರು), ವಿದ್ಯಾಗುರುಗಳಾದ ಪ್ರೊ. ಓ. ಅನಂತರಾಮಯ್ಯ ಅವರುಗಳಿಗೆ ಕೃತಜ್ಞನಾಗಿದ್ದೇನೆ.

ಈ ಕೃತಿ ಅಂದವಾಗಿ ಹೊರಬರಲು ಕಾರಣರಾದಂತಹ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎ. ವಿ. ನಾವಡರಿಗೆ ಹಾಗೂ ಸಹಾಯಕ ನಿರ್ದೇಶಕರಾದ ಹೆಚ್. ಪಿ. ರವೀಂದ್ರರಿಗೆ ನಮಸ್ಕಾರಗಳು. ಈ ಕೃತಿಗೆ ಸಂಬಂಧಿಸಿದ ಭೂಪಟಗಳನ್ನು ರಚಿಸಿಕೊಟ್ಟು, ಮುದ್ರಣ ಸಮಯದಲ್ಲಿ ಪುಸ್ತಕಕ್ಕೆ ಅಂತಿಮ ಸ್ವರೂಪವನ್ನು ನೀಡಿ ಸಹಕರಿಸಿದಂತಹ ಗೆಳೆಯ ಕೆ. ಎಲ್. ರಾಜಶೇಖರ್‌ರವರಿಗೆ, ಮುಖಪುಟವನ್ನು ರಚಿಸಿಕೊಟ್ಟಿರುವ ಕಲಾವಿದ ಕೆ. ಕೆ. ಮಕಾಳಿಯವರಿಗೆ, ಕೃತಿಯನ್ನು ಅಂದವಾಗಿ ಮುದ್ರಿಸಿದಂತಹ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ್‌ಕುಮಾರ್ ಹಾಗೂ ಸಿಬ್ಬಂದಿ ವರ್ಗಕ್ಕೆ ನನ್ನ ನಮಸ್ಕಾರಗಳು ಸಲ್ಲುತ್ತವೆ.

ಎನ್. ಚಿನ್ನಸ್ವಾಮಿ ಸೋಸಲೆ

ಪರಿವಿಡಿ

೧. ಪೀಠಿಕೆ ೧

೨. ಏಕೀಕರಣೋತ್ತರ ಕರ್ನಾಟಕದಲ್ಲಿ ಹೊರಗುಳಿದ ಕನ್ನಡದ ನೆಲೆ ಹಾಗೂ ಅವುಗಳ ಹಿನ್ನೆಲೆ ೧೦
- ೨.೧. ನೆರೆಯ ರಾಜ್ಯದಲ್ಲಿ ಸೇರಿರುವ ಕನ್ನಡ ಪ್ರದೇಶಗಳು
- ೨.೨. ಕರ್ನಾಟಕ ಮತ್ತು ಮಹಾರಾಷ್ಟ್ರ
- ೨.೩. ಕರ್ನಾಟಕ ವಿದ್ಯಾವರ್ಧಕ ಸಂಘ
- ೨.೪. ಕನ್ನಡ ಸಾಹಿತ್ಯ ಪರಿಷತ್ತು

೩. ಹೊರನಾಡಿನಲ್ಲಿ ಕನ್ನಡದ ಗಡಿಯ ರಕ್ಷಣೆಗಾಗಿ ಚಳವಳಿ ೩೦
- ೩.೧. ಕಪ್ಪುದಿನ ಬಿಳಿದಿನವಾಗುತ್ತಿರುವುದು
- ೩.೨. ಗಡಿ ರಕ್ಷಣೆಗೆ ಹೊರನಾಡ ಕನ್ನಡ ಪತ್ರಿಕೆಗಳ ಪಾತ್ರ
- ೩.೩. ಕರ್ನಾಟಕ ಮತ್ತು ಆಂಧ್ರಪ್ರದೇಶ
- ೩.೪. ಕನ್ನಡ ಅಭಿವೃದ್ಧಿ ಪ್ರಾಧಿಕಾರ
- ೩.೫. ಬೆಳಗಾವಿಯಲ್ಲಿ ಕನ್ನಡ ರಾಜಕಾರಣಿಗಳ ಸ್ಥಿತಿ
- ೩.೬. ಬೆಳಗಾವಿಯಲ್ಲಿ ಕನ್ನಡಗರ ಸ್ಥಿತಿ

೪. ಕಾಸರಗೋಡು ತಾಲ್ಲೂಕಿಗಾಗಿ ಹೋರಾಟ ೪೩
- ೪.೧. ಕಾಸರಗೋಡಿನಲ್ಲಿರುವ ಕನ್ನಡ ಸಂಘಗಳು
- ೪.೨. ಇಂದಿನ ಕಾಸರಗೋಡು

೫. ಗಡಿಪ್ರದೇಶಗಳ ಮೂಲಭೂತ ಸಮಸ್ಯೆಗಳು ೫೪
- ೫.೧. ಗಡಿನಾಡಿನ ಜನತೆ ಮತ್ತು ಶಿಕ್ಷಣ
- ೫.೨. ಗಡಿಪ್ರದೇಶಗಳಲ್ಲಿ ಸರ್ಕಾರದ ನಿರ್ಲಕ್ಷ್ಯ
- ೫.೩. ಗಡಿಪ್ರದೇಶದಲ್ಲಿನ ಸಾಮಾಜಿಕ ತೊಂದರೆಗಳು
- ೫.೪. ಗಡಿಪ್ರದೇಶಗಳು ಹಾಗೂ ದ್ವಿಭಾಷಿಕತೆ
- ೫.೫. ಕೋಲಾರ ಜಿಲ್ಲಾಗಡಿ ಸಮಸ್ಯೆ ಮತ್ತು ಚಳವಳಿ

೬. ಗಡಿನಾಡಿನ ಬಗ್ಗೆ ಗಣ್ಯರ ಅಭಿಪ್ರಾಯಗಳು ೬೦

೭. ರಾಜ್ಯದ ಒಟ್ಟು ಜಿಲ್ಲೆಗಳು ಮತ್ತು ತಾಲ್ಲೂಕುಗಳು : ಏಳು ಹೊಸ ಜಿಲ್ಲೆಗಳ ಪರಿಚಯ ೬೬
- ೭.೧. ಚಾಮರಾಜನಗರ
- ೭.೨. ಉಡುಪಿ

೭.೩. ದಾವಣಗೆರೆ
೭.೪. ಕೊಪ್ಪಳ
೭.೫. ಬಾಗಲಕೋಟೆ
೭.೬. ಗದಗ
೭.೭. ಹಾವೇರಿ

೮. **ಉಪಸಂಹಾರ** ೭೯

ಗ್ರಂಥಋಣ ೮೫

ಅನುಬಂಧಗಳು ೮೭

೧. ಪೀಠಿಕೆ

ನಮ್ಮ ನಾಡಿಗೆ ಸ್ವಾತಂತ್ರ್ಯ ದೊರಕಿ ಐದು ದಶಕಗಳೇ ಕಳೆದಿವೆಯಾದರೂ, ಕರ್ನಾಟಕ ರಾಜ್ಯ ಅಸ್ತಿತ್ವದಲ್ಲಿ ಬಂದ ಸಂಭ್ರಮದ ನೆನಪಿನಿಂದ ನಾವು ಪ್ರತಿವರ್ಷವೂ ಆಚರಿಸಿಕೊಂಡು ಬರುತ್ತಿರುವ ಕನ್ನಡ ರಾಜ್ಯೋತ್ಸವಕ್ಕೆ ಮೂವತ್ತು ವಸಂತಗಳು ಕಳೆದಿದ್ದರೂ, ರಾಜ್ಯದ ಭೌಗೋಳಿಕ ಗಡಿಗಳು ಮಾತ್ರ ಚರ್ಚೆಗೆ, ವಿವಾದಕ್ಕೆ ಇನ್ನೂ ಕಾರಣವಾಗುತ್ತಿರುವುದು ವಿಪರ್ಯಾಸವೇ ಸರಿ. ಉತ್ತಮ ಸಂಸ್ಕೃತಿಗೆ, ಸಂಸ್ಕಾರಕ್ಕೆ ಕಾರಣವಾಗಬೇಕಾದ ಭಾಷೆಗೆ ಎಲ್ಲಿಯೂ ಯಾವ ಬಗ್ಗೆಯ ಲಕ್ಷ್ಮಣ ರೇಖೆಯೂ ಇರುವುದು ಕಂಡುಬರುವುದಿಲ್ಲ. ಇತಿಹಾಸದಲ್ಲಿ ನಾವೆಲ್ಲ ತಿಳಿದಿರುವ ಹಾಗೆ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿದ್ದ ಕನ್ನಡದ ನೆಲಕ್ಕೆ ಈಗಿನ ಭೌಗೋಳಿಕ ಗಡಿಗಳು ಬೇರೆಯೆ. ಇದಕ್ಕೆ ಮೂಲಕಾರಣ ಇತಿಹಾಸ. ಆದರೆ ಕನ್ನಡದ ಪ್ರಾದೇಶಿಕ ಪರಿಸರದಲ್ಲಿ ಮೂಡಿಬಂದ ಸಂಸ್ಕೃತಿಯ ಬೆಳಕನ್ನು, ನಾವು ಈ ಭೌಗೋಳಿಕ ಗಡಿಯನ್ನು ಸ್ವಲ್ಪವೂ ಗಮನಿಸದೇನೇ ಗುರುತಿಸುವುದು ಸಾಧ್ಯ.

ದೂರದ ದೆಹಲಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷೆಯ ಅಧ್ಯಯನ ಉತ್ತಮವಾಗಿ ನಡೆಯುವಾಗ ಅವರಿಗ್ಯಾರಿಗೂ ಪರಕೀಯ ಭಾಷೆಯ ಸಂಪರ್ಕವೆಂದು ಅವರು ಮೂಗು ಮುರಿಯುವುದಿಲ್ಲ. ಕನ್ನಡದ ಹಿರಿಯ ಸಾಹಿತ್ಯ ಕೃತಿಗಳಿಗೆ ಏಳನೇ ಸರ್ವೋಚ್ಚ ಸಾಹಿತ್ಯ ಪ್ರಶಸ್ತಿಯಾದ 'ಜ್ಞಾನಪೀಠ'ವನ್ನು ದೂರದ ದೆಹಲಿಯಲ್ಲಿ ಘೋಷಿಸುವಾಗ ಇದು ಸರಿಯೇ, ಇದರಿಂದ ದೇಶದ ಬೇರೆ ಭಾಷೆಗೆ ಅನ್ಯಾಯವಾಗಿದೆಯೇ ಎಂದು ಯಾರೂ ಚಿಂತಿಸುವುದಿಲ್ಲ. ನಮ್ಮ ನಾಡಿನ ಪ್ರಕೃತಿ, ಜಾನಪದ, ನೃತ್ಯ, ಸಂಗೀತ, ನಾಟಕಗಳ ಆಳವಾದ ಅಧ್ಯಯನ ನಡೆಸಬೇಕು ಎಂದುಕೊಂಡು ಬರುವಂತಹ ದೇಶಿ ಹಾಗೂ ವಿದೇಶಿಯರ್ಯಾರಿಗೂ ಇಲ್ಲಿ ಭಾಷೆಯ ಗಡಿಯಿದೆಯೇ ಎಂಬ ಭಯದ ಅರಿವೇ ಇರುವುದಿಲ್ಲ. ಆದರೆ ಇದೇ ಭಾಷೆಗೆ ನಮ್ಮ ಪ್ರದೇಶ, ನಮ್ಮ ಭಾಷೆ ಎಂಬ ಸ್ವಾಭಿಮಾನದ ಕಾವು ತಾಗುವಾಗ ನಾವು ನಮ್ಮ ನಮ್ಮಲ್ಲಿಯೇ ಎಚ್ಚರಿಕೆಯ ಪ್ರಜ್ಞೆಯನ್ನು ತಂದುಕೊಂಡು ವ್ಯವಹಾರದ ನಿತ್ಯ ಬದುಕಿನತ್ತ ಮುಖಮಾಡಿ ರಾಜ್ಯದ, ರಾಷ್ಟ್ರದ ಗಡಿಗಳ ವಿಚಾರವನ್ನು ಚಿಂತಿಸತೊಡಗುತ್ತೇವೆ. ನಮ್ಮ ಗಡಿ ಪ್ರದೇಶದ ಬಂಧುಗಳ ದಿನನಿತ್ಯದ ವ್ಯವಹಾರದ ಅಂದರೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ- ಪ್ರಮುಖವಾಗಿ ರಾಜಕೀಯವಾಗಿ ಅವರ ಸ್ಥಾನಮಾನದ ತೊಡಕುಗಳನ್ನು ನೆನೆಸಿಕೊಂಡು ಮರುಗುತ್ತೇವೆ.

ಈ ಪ್ರಬಂಧ ಬರೆಯುತ್ತಿರುವ ಸಂದರ್ಭದಲ್ಲಿಯೇ ದೇಶದ ಉತ್ತರದ ಗಡಿ ಪ್ರದೇಶವಾದಂತಹ ಕಾಶ್ಮೀರದ ಕಾರ್ಗಿಲ್ ಪ್ರದೇಶದಲ್ಲಿ ಪಾಕಿಸ್ತಾನದ ಆಕ್ರಮಣವನ್ನು ವಿರೋಧಿಸಿ ಯುದ್ಧ ನಡೆಯುತ್ತಿದ್ದು ಯುದ್ಧ ಕಾರ್ಗಿಲ್‌ನಲ್ಲಾದರೆ, ದೇಶದ ಜನತೆಯಲ್ಲಿ

ಪ್ರತಿಯೊಂದು ಕ್ಷಣ ಎಂದೆಂದಿಗೂ ಇದು ನಮ್ಮ ಅಸ್ತಿತ್ವದ. ಇದರಿಂದಾಗಿ ಉದ್ವೇಗಕ್ಕೊಳಗಾಗಿಯೂ ಬೆಂಕಿಯಾಗುತ್ತೇವೆ, ಸ್ವಾಭಿಮಾನಿಗಳಾಗುತ್ತೇವೆ. ಅದೇ ರೀತಿಯಲ್ಲಿ ನಮ್ಮ ಇಂದು ನಮ್ಮ ರಾಜ್ಯದ ಗಡಿಗೆ ಸಂಬಂಧಿಸಿದ ವಿಷಯದಲ್ಲಿಯೂ ಪ್ರಮುಖ ಪಾತ್ರವಹಿಸುತ್ತದೆ. ಇಲ್ಲಿ ನಾವು ನೆರೆಯ ನೆರೆಹೊರೆಯ ರಾಜ್ಯಗಳನ್ನು ಕಂಡು ಅವರ ದುರಭಿಮಾನವನ್ನು ನಮ್ಮ ಅಭಿಮಾನ ಶೂನ್ಯತೆಯನ್ನು ನೆನೆಸಿಕೊಂಡು ಕೆಂಡವಾಗುವಂಥ ಪ್ರಸಂಗಗಳಿಗೆ ಒಳಗಾಗುತ್ತೇವೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ರಾಜ್ಯದ ಭೌಗೋಳಿಕ ಗಡಿಯು ಪ್ರತಿಯೊಬ್ಬ ಪ್ರಜೆಯ ಮನಸ್ಸಿನ ಗಡಿಯಾಗುತ್ತದೆ.

೧೯೫೬ರ ರಾಜ್ಯ ಪುನರ್ವಿಂಗಡಣಾ ಆಯೋಗದ ಶಿಫಾರಸ್ಸಿನಂತೆ ಭಾರತದ ಭೂಪಟದಲ್ಲಿ ಅನೇಕ ಗಡಿ ಹೊಂದಾಣಿಕೆಗಳು ಭಾಷಾವಾರು ಪ್ರಾಂತಗಳ ರಚನೆಯ ಮೂಲಕ ಇತ್ಯರ್ಥವಾದವೆಂದುಕೊಂಡೆವು. ಅದರಂತೆ ನ್ಯಾಯ-ಅನ್ಯಾಯಗಳನ್ನು ಪರಿಗಣಿಸದಂತೆ ಭಾರತದ ಅನೇಕ ರಾಜ್ಯಗಳು ಪುನರ್ವಿಂಗಡಣಾ ಆಯೋಗದ ಶಿಫಾರಸ್ಸುಗಳನ್ನು ಮನ್ನಿಸಿ ಅಂದು ಜಾರಿಗೊಂಡ ಕಾನೂನಿಗೆ ತಲೆ ಬಾಗಿದವು. ರಾಷ್ಟ್ರೀಯ ಪುನರ್ವಿಂಗಡಣಾ ಆಯೋಗದ ಶಿಫಾರಸ್ಸಿನಿಂದಾಗಿ ಕರ್ನಾಟಕಕ್ಕೆ ಆದ ನಷ್ಟ ತುಂಬಿದ್ದರೂ ಸಹ ಅದನ್ನು ಮೊದಲು ಸ್ವಾಗತಿಸಿದ್ದು ಕರ್ನಾಟಕವೇ. ಆದರೆ ನೆರೆಯ ಮಹಾರಾಷ್ಟ್ರ ಮಾತ್ರ ಎಂದಿನಂತೆ ದುರಾಗ್ರಹದ ಬೇಡಿಕೆಗಳನ್ನು ಮುಂದಿಟ್ಟು ಸಂವಿಧಾನಾತ್ಮಕ ಘಟನೆಯನ್ನು ಅವಮಾನಗೊಳಿಸಿತು. ಪ್ರಪಂಚದಲ್ಲಿಯೇ ಬೃಹತ್ ಪ್ರಜಾಪ್ರಭುತ್ವದ ಉನ್ನತ ಮಟ್ಟದ ಸಂಕೇತವಾದ ಲೋಕಸಭೆಯ ಅಂತಿಮ ತೀರ್ಮಾನವನ್ನು ಧಿಕ್ಕರಿಸಿ, ತನ್ನ ಕಿಡಿಗೇಡಿತನದ ಮೂಲಕ ಕರ್ನಾಟಕದ ಕೆಲ ಭಾಗಗಳನ್ನು ಇಂದಿಗೂ ಕಬಳಿಸಲು ಕಂಕಣ ತೊಟ್ಟು ನಿಂತಿರುವುದು ನಾಡಿನ ಸ್ವಾಭಿಮಾನಿಗಳಿಗೆ ದುಃಖ ತರುವ ಸಂಗತಿಯೇ.

ರಾ. ಪು. ಆಯೋಗದ ವಿರುದ್ಧ ಮಹಾರಾಷ್ಟ್ರೀಯರ ಪ್ರತಿಭಟನೆ ಮುಗಿಲು ಮುಟ್ಟುತ್ತಿದ್ದಂತೆ, ಮೊದಲು ಸುಮ್ಮನಿದ್ದ ಕರ್ನಾಟಕವೂ ಸಹ ತನ್ನ ನೆಲದ ಉಳಿವಿಗಾಗಿ ರಾಜ್ಯವ್ಯಾಪಿ ಉಗ್ರ ಪ್ರತಿಭಟನೆಯನ್ನು ನಡೆಸಿದ್ದ ಕಾರಣ, ೧೯೬೬ರಲ್ಲಿ ಮುಂಬೈಯ ಮುಖ್ಯಮಂತ್ರಿಗಳ ಸರಕಾರಿ ನಿವೇಶನದ ಆವರಣದಲ್ಲಿ ಆಮರಣಾಂತರ ಉಪವಾಸ ಸತ್ಯಾಗ್ರಹ ಕೈಗೊಳ್ಳಲು ಕಾಂಗ್ರೆಸ್ಸೇತರರೊಬ್ಬರನ್ನು ಕೂರಿಸುವ ನಾಟಕ ಹೂಡಿತು. ಮಹಾರಾಷ್ಟ್ರೀಯರ ಈ ಆಮರಣಾಂತರ ಉಪವಾಸಕ್ಕೆ ಹೆದರಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಅಲ್ಲಿಗೆ ಭೇಟಿಕೊಡುವಂತೆಯೂ ಮಾಡಿತು. ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಮೇ ೨೩, ೧೯೬೬ರಂದು ಸಭೆ ಸೇರಿ ಮಹಾರಾಷ್ಟ್ರೀಯರ ಮನೋಗುಣಕ್ಕನುಗುಣವಾಗಿ ಒಂದು ಆಯೋಗದ ರಚನೆಯ ನಿರ್ಣಯವನ್ನು ಕೈಗೊಳ್ಳುವಂತೆ ಮಾಡಿದ್ದು ಒಂದು ದುರಾದೃಷ್ಟಕರ ಘಟನೆಯೆಂದು ಹೇಳಬಹುದು.

ಅಂತೆಯೇ ಆಗಿನ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಂತಹ ವಿ. ಪಿ. ನಾಯಕ್ ಅವರು ಗಡಿ ಸಮಸ್ಯೆಯನ್ನು ಬಗೆಹರಿಸಲು ಏಕ ಸದಸ್ಯ ಆಯೋಗದ ರಚನೆಗೆ ಒಪ್ಪಿಗೆ ನೀಡಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಅಭಿನಂದಿಸುತ್ತಾ, ಆಯೋಗವು ನೀಡುವ ತೀರ್ಮಾನಕ್ಕೆ ಬದ್ಧರಿರುವುದಾಗಿ ಹೇಳಿದರಲ್ಲದೆ, ಕೇಂದ್ರ ಸರ್ಕಾರವೂ ಸಹ ಆಯೋಗದ ನಿರ್ಣಯವನ್ನು ಒಪ್ಪಿಕೊಳ್ಳಬೇಕೆಂದು ನಿರ್ಧಾರಪೂರ್ಣ ಭಾಷಣ ಮಾಡಿದರು. ಇವರು

ರಾಜ್ಯಗಳ ಒಪ್ಪಿಗೆಯ ಮೇಲೆ ಕೇಂದ್ರ ಸರ್ಕಾರವು ೧೯೬೬ ಅಕ್ಟೋಬರ್ ೨೫ ರಂದು ಮೆಹರ್ ಚಂದ್ ಮಹಾಜನ್ ಅವರನ್ನು ಆಯೋಗದ ಏಕ ಸದಸ್ಯರನ್ನಾಗಿ ನೇಮಕ ಮಾಡಿತು.

ಬೆಳಗಾವಿ-ಕಾರವಾರಗಳನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸುವ ಔದಾರ್ಯವನ್ನು ಮಹಾಜನ್ ಅವರು ತೋರಬಹುದೆಂಬ ಆಸೆಯಿಂದ ಮಹಾರಾಷ್ಟ್ರದ ಒಬ್ಬ ಅಪ್ರಯೋಜಕ ಮನುಷ್ಯನಿಂದ ಹಿಡಿದು ಪ್ರತಿಯೊಬ್ಬ ರಾಜಕೀಯ ನಾಯಕರೂ ಸಹ ಮಹಾಜನ್‌ರವರ ಮೇಲೆ ಪ್ರಭಾವವನ್ನು ಬೀರಲು ಪ್ರಯತ್ನಿಸಿದರು. ಇದೇ ವೇಳೆಗೆ ರಾಜ್ಯ ಪುನರ್‌ವಿಂಗಡಣಾ ಆಯೋಗದ ವರದಿಗೆ ಅಸಂಗತವಾದ ರೀತಿಯಲ್ಲಿ ಕೆಲವು ಸಣ್ಣಪುಟ್ಟ ಗಡಿ ಹೊಂದಾಣಿಕೆಗಳನ್ನು ಮಹಾಜನ್ ಆಯೋಗವು ಸೂಚಿಸಿತು. ಮಹಾಜನ್ ಅವರು ವರದಿಯನ್ನು ಸಿದ್ಧಪಡಿಸಲು ಸಂಬಂಧಪಟ್ಟ ಗಡಿ ಪ್ರದೇಶಗಳಲ್ಲಿ ಸಂಚರಿಸಿದಾಗ ೮೫೭೨ ಜನರಿಂದ ಸಂದರ್ಶನ ಪಡೆದು, ೩೨೪೦ ಬೇಡಿಕೆಗಳನ್ನು ಸ್ವೀಕರಿಸಿದರು. ಅಂತಿಮವಾಗಿ ನಿರ್ಣಯಿಸಿದ ತಮ್ಮ ವರದಿಯ ಪ್ರತಿಯನ್ನು ೧೯೬೭ನೇ ಆಗಸ್ಟ್ ೨೮ರಂದು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದರು. ಸುಮಾರು ಮೂರು ತಿಂಗಳಕಾಲ ಮೂಲೆಯಲ್ಲಿಯೇ ಬಿದ್ದಿದ್ದಂತಹ ವರದಿಯು ಮಹಾರಾಷ್ಟ್ರದವರ ಒತ್ತಾಯದ ಮೇರೆಗೆ ೧೯೬೭ನೇ ನವೆಂಬರ್ ೪ ರಂದು ಪ್ರಕಟವಾಯಿತು. ವರದಿಯಲ್ಲಿ ಕರ್ನಾಟಕಕ್ಕೆ ಅನೇಕ ಹಾನಿಗಳಾಗಿದ್ದರೂ ಸಹ ಕೊಟ್ಟ ಭಾಷೆಗೆ ತಪ್ಪಬಾರದೆಂಬ ಸದುದ್ದೇಶದಿಂದ ಕರ್ನಾಟಕವು ವರದಿಯನ್ನು ಸ್ವಾಗತಿಸಿತು. ಆದರೆ ನೆರೆಯ ಮಹಾರಾಷ್ಟ್ರವು ಮತ್ತೆ ಕಾಳ ಸರ್ಪದಂತೆ ಹೆಡೆಯೆತ್ತಿ ನಿಂತಿತ್ತು. ಮುಷ್ಕರ, ಪ್ರತಿಭಟನೆ, ಸಭೆ, ಮೆರವಣಿಗೆ, ಘೇರಾವೋ, ಗೂಂಡಾತನ, ಅವಾಚ್ಯಾ ಘೋಷಣೆ ಹಾಗೂ ಅವಿವೇಕತನದ ಪ್ರದರ್ಶನಕ್ಕೆ ಅನುವು ಮಾಡಿ ಶಿವಸೇನೆಯನ್ನು ಎತ್ತಿ ಕಟ್ಟುವ ಮೂಲಕ ಕನ್ನಡಿಗರನ್ನು ಚಿತ್ರಹಿಂಸೆಗೆ ಗುರಿಮಾಡಿದರು. ಬೆಳಗಾವಿ-ಕಾರವಾರಗಳನ್ನು ಮಹಾರಾಷ್ಟ್ರಕ್ಕೆ ಸೇರಿಸದ ವರದಿಗೆ ಹಾಗೂ ವ್ಯಕ್ತಿಗೆ ಧಿಕ್ಕಾರ ಎಂದು ಸತ್ಯಕ್ಕೆ ಅಪ್ಪಟ ಚರಮಗೀತೆ ಹಾಡಿದರು. ಇಷ್ಟೇ ಅಲ್ಲದೆ ಯಾವ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕ ಸದಸ್ಯ ಆಯೋಗದ ತೀರ್ಪನ್ನು ಒಪ್ಪುವುದಲ್ಲದೆ ಕೇಂದ್ರ ಸರ್ಕಾರವೂ ಸಹ ಅನುಷ್ಠಾನಕ್ಕೆ ತರಬೇಕೆಂದು ಹೇಳಿಕೆಯ ನೀಡಿದ್ದರೊ ಅವರೇ ಬೆಳಗಾವಿ-ಕಾರವಾರಗಳು ತಮಗೆ ದೊರೆಯಲಿಲ್ಲವೆಂಬ ಕಾರಣದಿಂದ ನಾಗಪುರದಲ್ಲಿ ನಡೆದ ಶಾಸನಸಭೆಯ ಉಭಯ ಅಧಿವೇಶನದಲ್ಲಿ ಆಯೋಗದ ವರದಿಯನ್ನು ತಿರಸ್ಕರಿಸುವ ನಿರ್ಣಯವನ್ನು ಮಂಡಿಸಿದ್ದು ಅವರ ಹೊಣೆಗೇಡಿತನವಾಗಿತ್ತು.

ಏಕ ಸದಸ್ಯ ಆಯೋಗದ ಮುಂದೆ ಕರ್ನಾಟಕವು ಮಹಾರಾಷ್ಟ್ರದಿಂದ ೫೧೬ ಹಳ್ಳಿಗಳು ನಮ್ಮ ರಾಜ್ಯಕ್ಕೆ ಬರಬೇಕೆಂದು ಬೇಡಿಕೆ ಸಲ್ಲಿಸಿತ್ತು. ಆದರೆ ಮಹಾರಾಷ್ಟ್ರದಿಂದ ಅವರು ಸ್ವಯಂ ನಿರ್ಣಯದ ಆಧಾರದ ಮೇಲೆ ೨೧೬ ಹಳ್ಳಿಗಳನ್ನು ಬಿಟ್ಟುಕೊಡಲು ಒಪ್ಪಿತು. ಆದರೆ ಆಯೋಗದ ಶಿಫಾರಸ್ಸಿನ ಅನ್ವಯ ೨೧೬ ಹಳ್ಳಿಗಳು ಮಾತ್ರ ಕರ್ನಾಟಕಕ್ಕೆ ಪುನರ್ ವಿಲೀನಗೊಳ್ಳಲು ಶಿಫಾರಸ್ಸಾಗಿ, ಸೊಲ್ಲಾಪುರ ನಗರವನ್ನು ಒಳಗೊಂಡು ೨೫೬ ಹಳ್ಳಿಗಳ ಪ್ರಶ್ನೆಯನ್ನು ಕೈ ಬಿಡಲಾಗಿರುವುದು ತಿಳಿದಿರುವ ವಿಷಯ. ಪರಿಸ್ಥಿತಿಯು ಮೇಲಿನ ರೀತಿಯಲ್ಲಿದ್ದರೂ ಸಹ ಆಯೋಗವು ಶಿಫಾರಸ್ಸು ಮಾಡದೇ ಇರುವ ಕಾರಣ ಕರ್ನಾಟಕವು

ಆ ಪ್ರಶ್ನೆಯನ್ನು ಎತ್ತಲಿಲ್ಲ. ಆದರೆ ಕಾರವಾರ ಮತ್ತು ೩೦೦ ಹಳ್ಳಿಗಳು, ಸೂಪಾ, ಹಳಿಯಾಳ ತಮಗೆ ಸೇರಬೇಕೆಂದು ಮಹಾರಾಷ್ಟ್ರವು ತನ್ನ ಬೇಡಿಕೆಯನ್ನು ಸಲ್ಲಿಸಿತ್ತು. ಭಾಷೆಯ ದೃಷ್ಟಿಯಿಂದ ಈ ಭಾಗದಲ್ಲಿ ಕೊಂಕಣಿ ಮಾತನಾಡುವವರಿದ್ದರೂ ಸಹ ಕೊಂಕಣಿ ಭಾಷೆಯನ್ನು ಮರಾಠಿ ಭಾಷೆಯ ಒಂದು ಉಪಭಾಷೆಯೆಂದು ಪರಿಗಣಿಸಿ ಆ ಭಾಗವನ್ನೆಲ್ಲ ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಮೊಂಡುವಾದವನ್ನು ಹೂಡಿತ್ತು. ಆದರೆ ಆಯೋಗವು ಕೊಂಕಣಿ ಭಾಷೆಯು ಮರಾಠಿ ಉಪಭಾಷೆಯಲ್ಲ, ಅದೊಂದು ಸ್ವತಂತ್ರ್ಯ ಭಾಷೆ ಎಂದು ನಿರ್ಣಯಿಸಿತ್ತಲ್ಲದೆ, ಜಾತಿವಾದಿತ್ವದ ಹಾಗೂ ಭಾಷಾದುರಾಭಿಮಾನದ ಪ್ರಶ್ನೆಯನ್ನು ತಿರಸ್ಕರಿಸಿತು. ನಂತರ ಮಹಾರಾಷ್ಟ್ರವು ಕೇಳಿದ ೮೧೪ ಹಳ್ಳಿಗಳಲ್ಲಿ ೫೧೩ ಹಳ್ಳಿಗಳ ಪ್ರಶ್ನೆ ಇತ್ಯರ್ಥವಾಗದೇ ಉಳಿದು ನಿಪ್ಪಾಣಿಯನ್ನೊಳಗೊಂಡ ೨೬೨ ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸುವ ಶಿಫಾರಸ್ಸು ಮಾಡಿತ್ತು. ನಿಪ್ಪಾಣಿ ನಗರವು ಕರ್ನಾಟಕದ ಅತ್ಯಂತ ಆದಾಯವನ್ನು ತರುವ ನಗರಗಳಲ್ಲೊಂದಾಗಿದೆ. ನಿಪ್ಪಾಣಿ ಹಾಗೂ ಸುತ್ತಮುತ್ತಲಿನ ಪ್ರದೇಶವು ಅತ್ಯಂತ ಫಲವತ್ತಾದ ಭೂಮಿಯನ್ನೊಳಗೊಂಡಿದ್ದು ತಂಬಾಕಿನ ಬೆಳೆಗೆ ಭಾರತದಲ್ಲಿಯೇ ಹೆಸರುವಾಸಿಯಾಗಿದೆ. ಇಲ್ಲಿ ಉತ್ಕೃಷ್ಟವಾಗಿ ಬೆಳೆಯಲಾಗುವ ತಂಬಾಕು, ಮೆಣಸಿನಕಾಯಿ, ಕಬ್ಬು ಕರ್ನಾಟಕದ ಯಾವ ಭಾಗದಲ್ಲಿಯೂ ಬೆಳೆಯಲು ಸಾಧ್ಯವಾಗುವುದಿಲ್ಲ. ಇದರಿಂದಾಗಿಯೇ ನಿಪ್ಪಾಣಿ ನಗರವು ಅತ್ಯಂತ ದೊಡ್ಡ ವ್ಯಾಪಾರಿ ಸ್ಥಳವೆಂದು ಭಾರತದಲ್ಲಿಯೇ ಪ್ರಸಿದ್ಧಿ ಪಡೆದಿತ್ತು. ಈ ಭಾಗದಲ್ಲಿ ಈಗ ಮಹಾರಾಷ್ಟ್ರಕ್ಕೆ ವರ್ಗಾಯಿಸಿರುವ ನಾಗಪುರ ಮತ್ತು ಬೆಳಗಾವಿ ತಾಲ್ಲೂಕುಗಳ ಹಳ್ಳಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭತ್ತ ಹಾಗೂ ಕಬ್ಬನ್ನು ಬೆಳೆಯಲಾಗುತ್ತಿದೆ. ಆಯೋಗದ ಶಿಫಾರಸ್ಸಿನಂತೆ ಈ ಭಾಗಗಳನ್ನು ಮಹಾರಾಷ್ಟ್ರಕ್ಕೆ ಕೊಟ್ಟಿದ್ದೆ ಆದರೆ, ಕರ್ನಾಟಕಕ್ಕೆ ತುಂಬ ಹಾನಿಯುಂಟಾಗುತ್ತದೆ.

ಅದೇ ರೀತಿಯಲ್ಲಿ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕೊಡಲು ಶಿಫಾರಸ್ಸು ಮಾಡಲ್ಪಟ್ಟ ಜತ್ತಿ ತಾಲ್ಲೂಕಿನ ಭೂಭಾಗದಲ್ಲಿ ೪೪ ಹಳ್ಳಿಗಳಿವೆ. ಇವು ವ್ಯವಸಾಯಕ್ಕೆ ಯೋಗ್ಯವಾಗಿರದೆ ಹಳ್ಳ ದಿಣ್ಣೆಗಳಿಂದ ಕೂಡಿತ್ತು. ಈ ಹಿನ್ನೆಲೆಯನ್ನು ಪರಿಶೀಲಿಸಿದರೆ ತಮ್ಮದಲ್ಲದ ನಿಪ್ಪಾಣಿಯನ್ನು ಪಡೆಯುವ ಮೂಲಕ ಬೆಳಗಾವಿಯ ಮೇಲೆ ಹಕ್ಕು ಸ್ಥಾಪಿಸುತ್ತಿರುವ ಮಹಾರಾಷ್ಟ್ರೀಯರು ಬೆಳಗಾವಿ ದೊರೆತ ಮೇಲೆ, ಬೆಂಗಳೂರು ಕೂಡ ಮಹಾರಾಷ್ಟ್ರದ ರಾಜಧಾನಿ, ಮಹಾರಾಷ್ಟ್ರದ ಮಹಾರಾಜ ಶಿವಾಜಿಯ ತಂದೆ ಷಹಜಿಯು ಬೆಂಗಳೂರಿನಲ್ಲಿ ನೆಲೆಸಿದ್ದನೆಂದು ತಮ್ಮ ವಾದವನ್ನು ಆರಂಭಿಸುವುದರಲ್ಲಿ ಎರಡು ಮಾತಿಲ್ಲ. ಇದರಿಂದ ಮಹಾರಾಷ್ಟ್ರಿಯರ ಈ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಅಖಂಡ ಕರ್ನಾಟಕದ ಜನತೆ ದಿಟ್ಟತನದಿಂದ ಖಂಡಿಸಬೇಕಾಗಿದೆ. ಎಳೆತೋರಿದರೆ ಅಚಡ ನುಂಗುವ, ದಾರಿ ತೋರಿದರೆ ಊರೇ ನನ್ನದೆನ್ನುವ ಇವರ ನೀತಿಯನ್ನು ಅತ್ಯಂತ ಉಗ್ರವಾಗಿ ಕರ್ನಾಟಕದ ಜನತೆಯು ಪ್ರತಿಭಟಿಸುತ್ತಲೆ ಬಂದಿದ್ದಾರೆ. ನಾವು ಇಂದಿಗೂ ಅವರ ವಿರುದ್ಧ ಗಡಿಗೆ ಸಂಬಂಧಿಸಿದ ವಿಷಯದಲ್ಲಿ ಯಾವ ರೀತಿಯ ರಾಜಿಗೂ ಒಪ್ಪದೆ ಚಳವಳಿಯನ್ನು ನಡೆಸಿಕೊಂಡು ಬರುತ್ತಿದ್ದೇವೆ.

ಏಕೆಂದರೆ ೧೯೦ಲರಿಂದ ೧೯೫೬ರ ವರೆಗೆ ಭಾಷಾವಾರು ಪ್ರಾಂತರಚನೆಗಳಿಗಾಗಿ ನಿರ್ಮಿಸಲ್ಪಟ್ಟಂತಹ ಕಮಿಟಿಯಾದ (ಅ) ನೆಹರೂ ಕಮಿಟಿ (ಆ) ಧಾರ್ ಕಮಿಷನ್ (ಇ) ವಾಂಚೂ ಸಮಿತಿ (ಈ) ಎಸ್. ಆರ್. ಕಮಿಷನ್ (ಉ) ಜಿ.ವಿ.ಪಿ ಕಮಿಷನ್ (ಊ) ಖೇಳಕರ್ ಅವಾರ್ಡ್‌ಗಳಲ್ಲದೆ ಗಡಿ ಹೊಂದಾಣಿಕೆಗೆ ಸಂಬಂಧಿಸಿದ ಮಹಾಜನ ಆಯೋಗದವರೆಗೆ ಮಹಾರಾಷ್ಟ್ರಿಯರ ಮಹತ್ವಾಕಾಂಕ್ಷೆಯ ಬೆಳಗಾವಿ-ಕಾರವಾರಗಳ ಬೇಡಿಕೆಯನ್ನು ತಿರಸ್ಕರಿಸಿದ್ದರೂ ಇಂದಿಗೂ ಸಹ ಮಹಾರಾಷ್ಟ್ರದ ರಾಜಕೀಯ ಹಾಗೂ ಸಾಹಿತಿ ಮುಖಂಡರು ಕಿಂಚಿತ್ತು ನಾಚಿಕೆಯಿಲ್ಲದ ತಮ್ಮ ಕೆಟ್ಟ ಬೇಡಿಕೆಯ ಹೋರಾಟವನ್ನು ಮುಂದುವರಿಸಿಕೊಂಡು ಬರುತ್ತಲೇ ಇದ್ದಾರೆ. ಆದರೆ ಮಹಾರಾಷ್ಟ್ರದ ಹಿಂದಿನ ಮುಖಂಡರು ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಬೇಕೆಂಬ ಬೇಡಿಕೆಯನ್ನಾಗಲಿ, ಪ್ರದರ್ಶನ, ಪ್ರತಿಭಟನೆಗಳನ್ನಾಗಲಿ ಅವರು ವ್ಯಕ್ತಪಡಿಸಿರಲಿಲ್ಲ. ಅಷ್ಟೆ ಅಲ್ಲದೆ ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಲಾಗದ ಭಾಗವೆಂದೂ, ನಾವೇನಾದರು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಕೇಳಲು ಪ್ರೇರೇಪಿಸುವುದು ಅನ್ಯಾಯದ ಬೇಡಿಕೆಯಾಗುತ್ತದೆಂದೂ ಅವರಿಗೆ ತಿಳಿದಿತ್ತು.

ಬಾಲಗಂಗಾಧರ ತಿಲಕರು ಕರ್ನಾಟಕದ 'ಬೆಳಗಾವಿಯು ರಾಷ್ಟ್ರೀಯತೆಯ ಭದ್ರಕೋಟೆ ಇದ್ದಂತೆ' ಎಂದು ೧೯೧೬ರಲ್ಲಿ ಡಿ. ವಿ. ಬೆಳವಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದರು. ಅವರು ಬೆಳಗಾವಿಯು ಕರ್ನಾಟಕದ್ದೇ ಎನ್ನುವ ಖಚಿತ ಅಭಿಪ್ರಾಯವನ್ನು ತಾಳಿದ್ದರು. ಈ ಮೇಲಿನ ಆಧಾರಗಳನ್ನು ತಿಲಕರ 'ಕೇಸರಿ' ಎಂಬ ಪ್ರಸಿದ್ಧ ವಾರಪತ್ರಿಕೆಯಿಂದ ಸಾಕಷ್ಟು ಪ್ರಮಾಣದಲ್ಲಿ ಪ್ರಕಟವಾಗಿರುವುದನ್ನು ನೋಡಬಹುದಾಗಿದೆ.

೧೯೨೪ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ನಡೆದಾಗ ಅದಕ್ಕೆ "Karnataka Session" ಎಂದು ಕರೆಯಲಾಗಿತ್ತು. ಅಷ್ಟೆ ಅಲ್ಲದೆ, ಗಾಂಧೀಜಿಯವರು ಬೆಳಗಾವಿಯಲ್ಲಿರುವ ತಮ್ಮ ಅನುಯಾಯಿಗಳಿಗೆ ಕಾಗದ ಬರೆಯುತ್ತಿದ್ದಾಗ 'ಬೆಳಗಾವಿ' ಎಂಬುದರ ಕೆಳಗೆ 'ಕರ್ನಾಟಕ' ಎಂದು ವಿಳಾಸ ಬರೆಯುವಾಗ ಉಪಯೋಗಿಸುತ್ತಿದ್ದದ್ದು ದಾಖಲೆಗಳ ಮೂಲಕ ತಿಳಿದು ಬರುತ್ತದೆ. ಅದೇ ರೀತಿ ೧೯೫೭ರಲ್ಲಿ ಜವಾಹರಲಾಲ್ ನೆಹರೂರವರು ಬೆಳಗಾವಿಗೆ ಭೇಟಿಯನ್ನಿತ್ತಾಗ "ಬೆಳಗಾವಿಗೆ ಅಂದರೆ ಕರ್ನಾಟಕಕ್ಕೆ ಭೇಟಿ ನೀಡುವುದರಿಂದ ನನಗೆ ಅತ್ಯಂತ ಸಂತೋಷವಾಗುತ್ತಿದೆ, ಮತ್ತೆ ಬರುತ್ತೇನೆ" ಎಂದು ಭಾಷಣ ಮಾಡಿರುವುದು ದಾಖಲೆಗಳಲ್ಲಿ ಉಲ್ಲೇಖವಾಗಿದೆ.

ಆಂಧ್ರ-ಕರ್ನಾಟಕ ಗಡಿ ನಿರ್ಣಾಯಕ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ, ಲೋಕಮಾನ್ಯ ತಿಲಕರ ಕಟ್ಟಾ ಅನುಯಾಯಿಗಳೂ ಆದ ಎನ್.ಸಿ. ಖೇಳಿಕರ್ (ಖೇಳ್‌ಕರ್ ಅವಾರ್ಡ್) ಅವರು ತಮ್ಮ ವರದಿಯಲ್ಲಿ ತಿಳಿಸಿರುವುದೇನೆಂದರೆ; ಬಳ್ಳಾರಿ ಜಿಲ್ಲೆಯ ಒಂಬತ್ತು ತಾಲ್ಲೂಕುಗಳಲ್ಲಿ ಕನ್ನಡವೇ ಪ್ರಧಾನ ಭಾಷೆಯಾಗಿರುವ ಆರು ತಾಲ್ಲೂಕುಗಳನ್ನು ಆಡಳಿತ ಕೇಂದ್ರವಾಗಿ ವಿಜೃಂಭಿಸುತ್ತಿರುವ ಬಳ್ಳಾರಿಗೆ ಜಿಲ್ಲಾ ಸ್ಥಳವೆಂಬ ಕಾರಣದಿಂದ ಸೇರಿಸಿ, ಆರು ತಾಲ್ಲೂಕುಗಳನ್ನೊಳಗೊಂಡ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು

ಶಿಫಾರಸ್ಸು ಮಾಡಿದೆ. ಆಡಳಿತ ಕೇಂದ್ರ ಸ್ಥಳವಾಗಿರುವ, ಕನ್ನಡವೇ ಪ್ರಧಾನ ಭಾಷೆಯಾಗಿರುವ ಬಹು ಸಂಖ್ಯಾತವಾದ ಕನ್ನಡ ತಾಲ್ಲೂಕುಗಳನ್ನೊಳಗೊಂಡಿರುವ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸುವ ಶಿಫಾರಸ್ಸನ್ನು ಹೇಗೆ ಮಾಡಲು ತಾನೇ ಸಾಧ್ಯವೆಂದು ಪ್ರಶ್ನಿಸಿದ್ದಾರೆ.

ಮೇಲಿನ ಅಭಿಪ್ರಾಯಗಳನ್ನು ಗಮನಿಸಿದರೆ ಬಹುಸಂಖ್ಯಾತ ಪ್ರಜ್ಞಾಶೀಲ ಮಹಾರಾಷ್ಟ್ರೀಯರು ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಬೇಕೆಂಬ ಅಭಿಪ್ರಾಯಕ್ಕೆ ವಿರೋಧವಾಗಿರುವುದು ತಿಳಿಯುತ್ತದೆ. ಅದೇ ರೀತಿ ಇಂದಿನ ವಾಸ್ತವಾಂಶಗಳನ್ನು ಪರಿಶೀಲಿಸಿದರೆ ಯಾವ ಮೂರ್ಖನೂ ಸಹ ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಬೇಕೆಂಬ ವಾದವನ್ನು ಸಹ ಮಂಡಿಸುವುದಿರಲಿ, ಕನಸು ಮನಸ್ಸಿನಲ್ಲಿಯೂ ಸಹ ನೆನೆಸಿಕೊಳ್ಳುವುದಿಲ್ಲ.

ಭಾಷಾವಾರು ಪ್ರಾಂತ್ಯರಚನೆಗಾಗಿ ಹೋರಾಟ

ಭಾಷಾವಾರು ಪ್ರಾಂತರಚನೆಗೆ ಪ್ರಮುಖವಾಗಿ ಕಾರಣರಾದಂಥ ಆಂಧ್ರಪ್ರದೇಶದ ಪೊಟ್ಟಿಸೀತಾರಾಮುಲು ಅವರು ಉಪವಾಸ ಮಾಡಿ ಉಪವಾಸದ ಸ್ಥಳದಲ್ಲಿಯೇ ಕೋಟಿ ಕೋಟಿ ಅಭಿಮಾನಿಗಳ ಮುಂದೆಯೇ ಮಡಿದರು. ಅವರ ಬಲಿದಾನವು ಕುಳಿತಿದ್ದವರನ್ನು ನಿಲ್ಲುವಂತೆಯೂ, ಮಲಗಿದ್ದವರನ್ನು ಕುಳಿತುಕೊಳ್ಳುವಂತೆಯೂ ಮಾಡಿತು ಎಂದರೆ ತಪ್ಪಾಗಲಾರದು. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಭಾಷಾವಾರು ಪ್ರಾಂತ್ಯ ರಚನೆಗೆ ಮೂರು ಸದಸ್ಯರ ಒಂದು ನಿಯೋಗವನ್ನು ನೇಮಿಸಿತು. ನಿಯೋಗದಲ್ಲಿ ಮಧ್ಯಪ್ರದೇಶದ ರಾಜ್ಯಪಾಲರಾಗಿದ್ದ ಹೆಚ್. ವಿ. ಪಾಟಸ್ಕರ್‌ರವರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು. ಮಿಕ್ಕ ಸದಸ್ಯರುಗಳೆಂದರೆ-

೧. ಹೆಚ್. ವಿ. ಪಾಟಸ್ಕರ್ (ಅಧ್ಯಕ್ಷರು)
೨. ಹೃದಯನಾಥ ಕುಂಜ್ರು
೩. ಸರದಾರ ಫಣಿಕ್ಕರ್

ಈ ಮೂರು ಸದಸ್ಯರ ನಿಯೋಗದ ಮುಂದೆ ಉಭಯ ರಾಜ್ಯಗಳು ತಮ್ಮ ತಮ್ಮ ಗಡಿಯ ಹಕ್ಕುಗಳನ್ನು ಸಾಧಿಸಿಕೊಳ್ಳಲು ತಮ್ಮದೇ ಆದ ಕೆಲ ಸಿದ್ಧಾಂತಗಳನ್ನು ಮುಂದೊಡ್ಡಿ ಹೋರಾಡಿದವು. ಕೊನೆಗೆ ಎಲ್ಲ ರಾಜ್ಯಗಳೂ ಸಹ ಒಂದು ಒಪ್ಪಂದಕ್ಕೆ ಬಂದು ರಾಜಿ ಸೂತ್ರವನ್ನು ಅನುಸರಿಸಿ ಒಪ್ಪಂದ ಮಾಡಿಕೊಂಡವು.

೧೯೫೩ ರಲ್ಲಿ ಭಾರತದಲ್ಲಿಯೇ ಪ್ರಥಮವಾಗಿ ಆಂಧ್ರಪ್ರದೇಶವು ಭಾಷೆ ಆಧಾರದ ಮೇಲೆ ಪ್ರತ್ಯೇಕ ರಾಜ್ಯವಾಗಿ ರೂಪಿತವಾಯಿತು. ಇದಾದ ನಂತರ ೧೯೫೬ರಲ್ಲಿ ರಾಷ್ಟ್ರೀಯ ಪುನರ್‌ರಚನಾ ಆಯೋಗದ ಅನ್ವಯ ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳ ಉದಯವಾಯಿತು. ಆದರೂ ಸಹ ಆಂಧ್ರ ಮತ್ತು ತಮಿಳುನಾಡು ರಾಜ್ಯಗಳ ನಡುವೆ, ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಗಡಿ ಹೊಂದಾಣಿಕೆಯ ಪ್ರಶ್ನೆ ವಾದಗ್ರಸ್ತವಾಗಿತ್ತು. ಇಂತಹ ಸಂದರ್ಭದಲ್ಲಿ ಮಧ್ಯಸ್ಥಿಕೆಗಾರರಾಗಿ ಪುನಃ ಹೆಚ್. ವಿ. ಪಾಟಸ್ಕರ್ ಅವರನ್ನು ಕೇಂದ್ರ ಸರ್ಕಾರ ನೇಮಿಸಿತು. ಆವರೆ (ಆಂಧ್ರ ಮತ್ತು ತಮಿಳುನಾಡು) ಎರಡು ರಾಜ್ಯಗಳೂ ಸಹ ಒಂದು ಒಪ್ಪಂದಕ್ಕೆ ಬಂದು ತಾವೇ ರಾಜಿಸೂತ್ರವನ್ನು ಅನುಸರಿಸಿಕೊಂಡು ವಿವಾದಗ್ರಸ್ತವಾಗಿದ್ದಂತಹ ಕೆಲವು ಪ್ರದೇಶಗಳನ್ನು

ಚರ್ಚೆಯ ಮೂಲಕ ಒಪ್ಪಂದ ಮಾಡಿಕೊಂಡವು. ಇದಕ್ಕೆ ಮಧ್ಯಸ್ಥಿಕೆದಾರರಾಗಿದ್ದ ಪಾಟಸ್ಕರರು 'ಒಪ್ಪಿಗೆ' ಎಂದರು. ಇದನ್ನೇ ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ ಇರುವ ಗಡಿ ಸಮಸ್ಯೆಗೆ ಮಹಾರಾಷ್ಟ್ರೀಯರು ಗಡಿ ಹೊಂದಾಣಿಕೆಯ ಸಮಗ್ರಸೂತ್ರವೆಂದು ವಾದಿಸುತ್ತಿದ್ದಾರೆ. ನಾವು ಇಲ್ಲಿ ಗಮನಿಸ ಬೇಕಾದ ಮುಖ್ಯ ವಿಷಯವೆಂದರೆ ಇದುವರೆಗೂ ಸಹ ಆಂಧ್ರ ಮತ್ತು ತಮಿಳುನಾಡಿಗೆ ನಡೆದ ಒಪ್ಪಂದದ ರೀತಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಮಧ್ಯೆ ಆಗಿದಿಯೇ? ಇಲ್ಲ. ಹೀಗೆ ಮುಂದುವರಿದುಕೊಂಡು ಬಂದ ಆಂಧ್ರ-ತಮಿಳರು ಪ್ರೀತಿಯು ಒಪ್ಪಂದ ಮಾಡಿ ಕೊಳ್ಳುವ ದೃಷ್ಟಿಯಿಂದ ೧೯೫೬ರಲ್ಲಿ ಪುನಃ ಪಾಟಸ್ಕರ್ ಅವರನ್ನು ಬರಮಾಡಿಕೊಂಡು ತಮ್ಮ ಗಡಿ ಹೊಂದಾಣಿಕೆಯ ವಾದಕ್ಕೆ ಕೊನೆಯ ತೆರೆ ಎಳೆಯಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದರು. ಹೀಗೆ ಮೊದಲೇ ನಿರ್ಣಯಗೊಂಡಿದ್ದ ಆಂಧ್ರ ಮತ್ತು ತಮಿಳುನಾಡಿನ ರಾಜ್ಯಗಳ ಸೂತ್ರವೊಂದಕ್ಕೆ ಪಾಟಸ್ಕರರು ಸಹಿ ಹಾಕಿದರು. ಈ ರೀತಿಯ ಮಹತ್ವದ ಒಪ್ಪಂದವೇನೋ ಮಾಡಿಕೊಳ್ಳಲು ಪಾಟಸ್ಕರರೇನೋ ಸೂಚಿಸಿರಲಿಲ್ಲ. ಎರಡು ರಾಜ್ಯಗಳು ಸ್ವಯಂಪೂರ್ಣವಾಗಿ ಕೈಗೊಂಡಿದ್ದಂತಹ ನಿರ್ಣಯಕ್ಕೆ ತಮ್ಮ ಒಪ್ಪಿಗೆ ಇದೆ ಎಂದು ಅವರು ಸಹಿ ಹಾಕಿದ್ದರು. ಪರಿಸ್ಥಿತಿಯು ಈ ರೀತಿ ಇರುವಾಗ ಪ್ರಸ್ತುತ ಗಡಿ ಹೊಂದಾಣಿಕೆಯ ವಾದಗ್ರಸ್ತ ಪ್ರದೇಶಗಳಿಗೆಲ್ಲ ಪಾಟಸ್ಕರ ಸೂತ್ರವು ಅನ್ವಯವಾಗುವುದೆಂಬ ಮಹಾರಾಷ್ಟ್ರೀಯರ ತಿರುಳಿಲ್ಲದ ವಾದದಲ್ಲಿ ಅರ್ಥವೇನಾದರೂ ಇದೆಯೇ?

ಕೇವಲ ಭಾಷೆಯ ಆಧಾರದ ಮೇಲೆ ಯಾವುದೇ ರಾಜ್ಯಗಳ ಗಡಿ ಹೊಂದಾಣಿಕೆಗಳನ್ನು ನಿರ್ಣಯಿಸದೆ ರಾಷ್ಟ್ರೀಯ ಸುಭದ್ರತೆ, ಸಾಮಾಜಿಕ ನೆಮ್ಮದಿ, ಆರ್ಥಿಕ ಅಭಿವೃದ್ಧಿ, ಆಡಳಿತ ಅನುಕೂಲತೆಯ ದೃಷ್ಟಿಯಿಂದ ನಿರ್ಣಯಿಸಬೇಕೆಂಬುದು ಕೇಂದ್ರ ಸರ್ಕಾರದ ಆದೇಶ ಹಾಗೂ ಎಲ್ಲ ಸಮಿತಿಗಳ ಅಭಿಪ್ರಾಯವಾಗಿದೆ. ಇದಲ್ಲದೆ ಭಾರತದಲ್ಲಿಯ ಯಾವುದೇ ರಾಜ್ಯಗಳಾಗಲಿ ಎಲ್ಲವೂ ಸಹ ಭಾರತೀಯ ಕಾನೂನು ಹಾಗೂ ಶಿಸ್ತಿಗೆ ಒಳಪಟ್ಟವುಗಳೇ ಆಗಿವೆ. ರಾಜ್ಯಗಳು ಬೇರೆ ಬೇರೆಯಾಗಿದ್ದರೂ ರಾಷ್ಟ್ರವು ಒಂದೇ, ಭಾಷೆಗಳು ಬೇರೆ ಬೇರೆಯಾಗಿದ್ದರೂ ಅದರ ಭಾವ ಮಾತ್ರ ಒಂದೇ ಎಂದು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂರವರು ಲೋಕಸಭೆಯಲ್ಲಿ ಭಾಷಣ ಮಾಡುವಾಗ ತಿಳಿಸಿದ್ದಾರೆ. ಇದನ್ನು ಇಂದಿನ ಜನರು ಮನನ ಮಾಡಿಕೊಳ್ಳಬೇಕಾಗಿದೆ. ಮಹಾರಾಷ್ಟ್ರೀಯರ ಪ್ರಕಾರ ಪಾಟಸ್ಕರ್ ಸೂತ್ರವನ್ನು ಮನ್ನಿಸುವುದಾದರೆ ಇಡೀ ಮಹಾರಾಷ್ಟ್ರವೇ ಕರ್ನಾಟಕದಲ್ಲಿ ವಿಲೀನವಾಗಬೇಕಾಗುವುದು ಎಂದು ಎಚ್ಚರಿಸಬೇಕಾಗಬಹುದು. ಕರ್ನಾಟಕಕ್ಕೆ ತನ್ನದೆಯಾದ ಒಂದು ಚಾರಿತ್ರಿಕ ಹಿನ್ನೆಲೆಯಿದೆ. ಇದರ ಚರಿತ್ರೆಯನ್ನು ಅವಲೋಕಿಸಿದರೆ ಈಗಿನ ಮಹಾರಾಷ್ಟ್ರದ ಬಹುಸಂಖ್ಯಾತ ಪ್ರದೇಶಗಳು ಕರ್ನಾಟಕಕ್ಕೆ ಸೇರುವುದರಲ್ಲಿ ಎರಡು ಮಾತಿಲ್ಲ. ಠಾಣ, ಕುಲಾಬಾ, ರತ್ನಗಿರಿ, ಪುಣೆ, ಮುಂತಾದ ಬಹುಸಂಖ್ಯಾತ ಭಾಗಗಳು ಅಚ್ಚಕನ್ನಡದ ಪ್ರದೇಶಗಳೆಂದು ತಿಳಿದುಬರುತ್ತದೆ. ಪ್ರಸ್ತುತ ಆ ಭಾಗಗಳಲ್ಲಿ ಜನ ಮರಾಠಿ ಭಾಷೆಯನ್ನು ಮಾತನಾಡುತ್ತಿದ್ದರೆ, ಅದೇರೀತಿ ಅಲ್ಪ ಸಂಖ್ಯಾತರಾದ ಕನ್ನಡಿಗರು ಬಹು ಸಂಖ್ಯಾತರ ಪ್ರಾಬಲ್ಯಕ್ಕೆ ಸಿಲುಕಿ ಮಹಾರಾಷ್ಟ್ರದ ಪ್ರಜೆಗಳಾಗಿ ಪರಿವರ್ತನೆಯಾಗಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

"ಮಹಾರಾಷ್ಟ್ರ ಬೇರೆ - ಕರ್ನಾಟಕ ಬೇರೆಯಲ್ಲ. ಎರಡೂ ಒಂದೆ. ಎರಡು ರಾಜ್ಯಗಳ ಭಾಷೆಯು ಮೊದಲು ಒಂದೇ ಅಂದರೆ ಕನ್ನಡವೇ ಆಗಿತ್ತು. ನಂತರ ಭಾಷೆಯ ವಿಷಯದಲ್ಲಿ ಮಹಾರಾಷ್ಟ್ರವು ತನ್ನ ಮೊದಲಿನ ಭಾಷೆಯನ್ನು (ಕನ್ನಡ) ಬಿಟ್ಟು ಮರಾಠಿಯಾಗಿದೆ" ಎಂದು ೨೬-೧೧-೧೯೦೭ನೇ ಇಸ್ವಿಯಲ್ಲಿ ಬೆಳಗಾವಿ ಜಿಲ್ಲೆಯ ಗುರ್ಲಹೊಸೂರಿನಲ್ಲಿ ತಿಲಕರು ಭಾಷಣ ಮಾಡುತ್ತಾ ತಿಳಿಸಿದ್ದಾರೆ. ಇದು ಇಂದಿಗೂ ಒಂದು ಐತಿಹಾಸಿಕ ಹೇಳಿಕೆಯಾಗಿ ಉಳಿದುಬಂದಿದೆ.

ಮೇಲಿನ ಕೆಲವು ಮಾತುಗಳಿಂದ ಇಲ್ಲಿ ಹೇಳಲು ಬಯಸುವುದೇನೆಂದರೆ ಒಳನಾಡಿನ ಕನ್ನಡದ ನೆಲದಲ್ಲಾಗಲೀ, ಹೊರನಾಡಿನಲ್ಲಾಗಲೀ ಕನ್ನಡತನವನ್ನು ಉಳಿಸಿಕೊಳ್ಳುವುದೂ ಅಳಿಸಿಕೊಳ್ಳುವುದೂ ಕನ್ನಡಿಗರಾದಂತಹ ನಮ್ಮೆಲ್ಲರ ಕನ್ನಡಾಭಿಮಾನದ ಪ್ರಮಾಣವನ್ನೇ ಹೊಂದಿಕೊಂಡಿದೆ. ಈ ಅಭಿಮಾನಕ್ಕೆ ಕೊರತೆ ಬಂದಾಗ ಒಳನಾಡಿನಲ್ಲಿದ್ದರೂ ಸಹ ಕನ್ನಡಿಗರೇ ಕನ್ನಡಿಗರಾಗಿ ಉಳಿಯುವುದಿಲ್ಲ.

ಉದಾ: **ಕೋಲಾರ ಜಿಲ್ಲೆ:-** ಕೋಲಾರ ಜಿಲ್ಲೆಯು ಕರ್ನಾಟಕದ ದಕ್ಷಿಣದ ತುದಿಯಲ್ಲಿದೆ. ಇದು ತಮಿಳುನಾಡು ಮತ್ತು ಆಂಧ್ರವನ್ನು ತನ್ನ ಸುತ್ತಲೂ ಮೇರೆಯಾಗಿ ಹೊಂದಿದ್ದು ಬಹುತೇಕ ಇಲ್ಲಿನ ಎಲ್ಲ ತಾಲ್ಲೂಕುಗಳೂ ಹಾಗೂ ಹಳ್ಳಿಗಳೂ ಸಹ ಹೆಚ್ಚಾಗಿ ತೆಲುಗನ್ನು ತಮ್ಮ ಮಾತೃಭಾಷೆಯಾಗಿ ಹೊಂದಿರುವರು. ಇಲ್ಲಿರುವ ಜನರಿಗೆ ತೆಲುಗು ಭಾಷೆಯ ಅರಿವಿದೆ ಆದರೆ ಅದರ ಲಿಪಿಯ ಅರಿವಿಲ್ಲ. ತೆಲುಗು ಭಾಷೆಯನ್ನು ಕನ್ನಡದಲ್ಲಿಯೇ ಬರೆದು ಓದಿಕೊಳ್ಳುತ್ತಾರೆ. ಆದರೆ ಈ ಗಡಿ ಪ್ರದೇಶದಲ್ಲಿ ಕನ್ನಡ ನೆಲದಲ್ಲಿಯೇ ಯಾವುದೇ ರೀತಿಯ ಕನ್ನಡ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಮಾಡಿಕೊಡುವುದಿಲ್ಲ. ಕನ್ನಡ ಕಾರ್ಯಕ್ರಮಗಳ ವಿರುದ್ಧ ಉಗ್ರಪ್ರತಿಭಟನೆ ಮಾಡಿರುವುದಕ್ಕೆ-ಮಾಡಿಕೊಂಡು ಬರುತ್ತಿರುವುದಕ್ಕೆ ಅನೇಕ ನಿದರ್ಶನಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡ ನಾಡಿನಲ್ಲಿಯೇ ಕನ್ನಡಾಭಿಮಾನ ಕುಂದಿ ಕೇವಲ ಯಾವುದೋ ಬಲವಂತದಿಂದ ಕರ್ನಾಟಕದಲ್ಲಿ ಉಳಿಯುವಂತಾಗಬಹುದು. ಕೋಲಾರವನ್ನು ರಾಷ್ಟ್ರೀಯ ಪುನರ್ ರಚನಾ ಆಯೋಗವು ಮೈಸೂರು ಸಂಸ್ಥಾನದವರು ಕೋಲಾರದಲ್ಲಿ ಚಿನ್ನದ ಗಣಿಯನ್ನು ನಿರ್ಮಿಸಿ ಅನೇಕ ಪ್ರಗತಿಪರ ಕೆಲಸಗಳನ್ನು ಕೈಗೊಂಡಿದ್ದರು. ಈ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ತೆಲುಗರಿದ್ದರೂ ಸಹ ಮೈಸೂರು ಪ್ರಾಂತ್ಯಕ್ಕೆ ಸೇರಿಸಲಾಯಿತು ಎಂದು ತಿಳಿದು ಬರುತ್ತದೆ. ಇವರಿಂದ ಕರ್ನಾಟಕದ ಪ್ರಗತಿ ಹೇಗೆ? ಈ ಅಭಿಮಾನ ತುಂಬಿಕೊಂಡಾಗ ಹೊರನಾಡಿನಲ್ಲಿದ್ದರೂ ಅವರು ದೆಹಲಿಯಲ್ಲಿರಲಿ, ದೂರದ ಬೇರೆಬೇರೆ ರಾಷ್ಟ್ರಗಳಲ್ಲಿರಲಿ ಕನ್ನಡಿಗರಾಗಿಯೇ ಉಳಿಯುತ್ತಾರೆ. ಅವರಿಗೆ ಕನ್ನಡದ ಸಂಬಂಧವನ್ನು ಉಳಿಸಿಕೊಳ್ಳಲು ಎಷ್ಟು ಸಾಧ್ಯವೋ ಅಷ್ಟೆಲ್ಲವೂ ಸಹ ತಮ್ಮ ಪ್ರಯತ್ನವನ್ನಾಗಿಸಿಕೊಂಡಿರುತ್ತಾರೆ. ಇಂಥ ಅಭಿಮಾನವು ದುರಾಭಿಮಾನವಾದಾಗ ಮಾತ್ರ ಯಾವ ಭಾಷೆಯ ಮಾತನ್ನಾಡುವ ಜನರೇ ಆಗಲಿ ಗುಂಪುಗಾರಿಕೆ, ಆಕ್ರೋಶ ಮನೋವೃತ್ತಿಯು ಸಹಜವಾಗಿಯೇ ಸೃಷ್ಟಿಯಾಗುತ್ತದೆ. ಈ ದೃಷ್ಟಿಯಿಂದಲೇ ನಾವು 'ಗಡಿ-ಹೊರನಾಡು'ಗಳಲ್ಲಿರುವ ಕನ್ನಡಿಗರ ಸಮಸ್ಯೆಗಳೇನೆಂದು ಚರ್ಚಿಸಬೇಕಾಗುವುದು.

ಕನ್ನಡ ನಾಡಿನ ಸರ್ವಾಂಗೀಣ ಏಳಿಗೆಗೆ ಭಾಷೆ, ಸಂಸ್ಕೃತಿಗಳ ವಿಕಾಸಕ್ಕೆ, ಕನ್ನಡ ಮಾತನಾಡುವ ಜನರೆಲ್ಲ ಒಂದೇ ರಾಜ್ಯದ ಆಡಳಿತದ ಅಡಿಯಲ್ಲಿ ಬರುವುದು ಒಳ್ಳೆಯದೆಂದು ಕರ್ನಾಟಕ ಉದಯವಾಯಿತು. ಆದರೆ ನಾವು ಕನ್ನಡದ ನೆಲವೆಂದು ಭಾವಿಸಿರುವ ಕೆಲವು ಪ್ರದೇಶಗಳು ನೆರೆಯ ರಾಜ್ಯಗಳಲ್ಲಿ ಸೇರಿಕೊಂಡು ತಮ್ಮದ್ರೆಯಾದ ಸಂಕಷ್ಟದಲ್ಲಿ ಸಿಲುಕಿಕೊಂಡಿವೆ. ಅದೇ ರೀತಿ ಕನ್ನಡದ ನೆಲದಲ್ಲೇ ಇರುವ ಬೆಳಗಾವಿಯು ಇಂದು ವಿವಾದದ ಕೇಂದ್ರಬಿಂದುವಾಗಿದೆ. ಈ ಚರ್ಚೆ, ವಿವಾದಗಳಿಗೆ ಕೊನೆಯ ಮಾತು ಹೇಳಲು ಬಂದಂತಹ ಮಹಾಜನ್ ಅವರ ಸಲಹೆಗಳನ್ನು ಅನುಷ್ಠಾನಕ್ಕೆ ತರುವುದು ಈತನಕ ಸಾಧ್ಯವಾಗಿಲ್ಲ. ಇಂದಿಗೂ ಸಹ ಹುಯಿಲಗೋಳ ನಾರಾಯಣರ ಕವಿವಾಣಿಯಾಗಿರುವ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಪದಕ್ಕೆ ಅರ್ಥ ಸಿಕ್ಕಿ ಅದನ್ನು ಧೈರ್ಯವಾಗಿ ಹಾಡುವಂತಾಗುವುದೋ ಕಾದು ನೋಡೋಣ.

❑❑

೨. ಏಕೀಕರಣೋತ್ತರ ಕರ್ನಾಟಕದಲ್ಲಿ ಹೊರಗುಳಿದ ಕನ್ನಡದ ನೆಲೆ ಹಾಗೂ ಅವುಗಳ ಹಿನ್ನೆಲೆ

ಭರತಖಂಡದ ದಕ್ಷಿಣ ಭಾಗದಲ್ಲಿ ಕನ್ನಡ ಭಾಷೆಯನ್ನಾಡುವ ಜನರು ವಿಶೇಷವಾಗಿ ವಾಸಮಾಡುತ್ತಿರುವ ಪ್ರದೇಶವನ್ನು ಕನ್ನಡನಾಡು ಎಂದು ಕರೆಯುತ್ತಿದ್ದೇವೆ. ಈ ನಾಡಿಗೆ ಪ್ರಾಚೀನವೂ, ಪ್ರಸಿದ್ಧವೂ ಆದ ಇತಿಹಾಸವಿದೆ. ಸಂಸ್ಕೃತಿ, ಸಾಹಿತ್ಯಗಳ ಪರಂಪರೆಯಿದೆ. ಇಂಥ ಹಿರಿಮೆಯ ನಾಡಿನ ಭೂರಚನೆ, ಭೌಗೋಳಿಕ ವ್ಯಾಪ್ತಿ, ಅದರಲ್ಲಿ ಕಾಲಕಾಲಕ್ಕೆ ಉಂಟಾದ ಸಂಕೋಚ ವಿಸ್ತಾರಗಳು, ಅಂತರ್ಗತ ಪ್ರದೇಶಗಳು, ಆ ಪ್ರದೇಶಗಳ ಹೆಸರು, ಹಿನ್ನೆಲೆಗಳು, ಆಳಿದ ಮನೆತನಗಳು ನಂತರ ಸ್ವಾತಂತ್ರ್ಯ ಭಾರತವು ಸ್ಥಳೀಯವಾಗಿ ಏಕೀಕರಣಗೊಂಡಾಗ ಕರ್ನಾಟಕದ ನಾಡು, ನುಡಿ, ಪರಿಸರ, ಜಲ, ಸಾಮಾಜಿಕ ವಿಷಯದ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡುವುದಲ್ಲದೆ ಏಕೀಕರಣದ ನಂತರವೂ ಕರ್ನಾಟಕದಿಂದ ಹೊರಗುಳಿದ ಕನ್ನಡದ ನೆಲೆಗಳು ಹಾಗೂ ಅವುಗಳ ಹಿನ್ನೆಲೆಯ ಬಗ್ಗೆ ತಿಳಿಯುವುದು ಮುಖ್ಯವಾಗಿದೆ.

೧೯೫೩ರ ಆಗಸ್ಟ್ ೧೦ ರಂದು ಪಾರ್ಲಿಮೆಂಟ್‌ನಲ್ಲಿ ಮಂಜೂರಾದ ಕಾಯ್ದೆ ಅನ್ವಯ ಬೃಹತ್ ಆಂಧ್ರರಾಜ್ಯದ ನಿರ್ಮಾಣವಾಯಿತು. ಇದರ ಆಧಾರದ ಮೇಲೆಯೇ ಭಾರತದಾದ್ಯಂತ ಜನರುಗಳು ತಮ್ಮ ತಮ್ಮ ಮಾತೃಭಾಷೆಯವರೆಲ್ಲರೂ ಒಂದು ಪ್ರದೇಶದಲ್ಲಿ ವಾಸಿಸುವುದು ಸೂಕ್ತವೆಂದು ಪರಿಗಣಿಸಿ ಪ್ರಧಾನಿ ಜವಹಾರ ಲಾಲ್ ನೆಹರೂ ಅವರಲ್ಲಿ ಬೇಡಿಕೆ ಸಲ್ಲಿಸಿದರು. ಇದರ ಪರಿಣಾಮವಾಗಿ ನೆಹರೂ ಅವರು ಭಾಷಾವಾರು ಪ್ರಾಂತ್ಯರಚನೆಗೆ ಸೂಚನೆ ನೀಡಿ ಇದಕ್ಕೆ ಸಂಬಂಧಿಸಿದಂತೆ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಿದ್ದಂತಹ ಫಜ್ಲಾಲಿ ಅವರ ಅಧ್ಯಕ್ಷತೆಯಲ್ಲಿ ಮೂರು ಸದಸ್ಯರ ಒಂದು ಸಮಿತಿಯನ್ನು ರೂಪಿಸಿ, ಅದನ್ನು ಶೀಘ್ರವಾಗಿ ಭಾಷಾವಾರು ಬಗೆಗೆ ಅಧ್ಯಯನ ಮಾಡಿ ಸೂಕ್ತವಾದ ವರದಿ ಸಲ್ಲಿಸಲು ತಿಳಿಸಿದರು. ಅದರಂತೆಯೇ ಫಜ್ಲಾಲಿ ನೇತೃತ್ವದ ಸಮಿತಿಯು ಸುಮಾರು ೨೮ ಸಾವಿರ ಮೈಲು ಸಂಚರಿಸಿ, ೧೦೪ ಸ್ಥಳಗಳಲ್ಲಿ ವಿಚಾರಣೆ ನಡೆಸಿ ಸುಮಾರು ಒಂಬತ್ತು ಸಾವಿರ ಜನರನ್ನು ಸಂದರ್ಶಿಸಿತು. ಈ ವೇಳೆಯಲ್ಲಿ ಕರ್ನಾಟಕದ ರಾಜಕಾರಣಿಗಳು, ಸಾಹಿತಿಗಳು, ಸ್ವಾಮಿಗಳು, ವ್ಯಾಪಾರಿಗಳು, ಕಾರ್ಮಿಕರು ಹಾಗೂ ಅಲ್ಪಸಂಖ್ಯಾತರು ಏಕೀಕೃತ ಕರ್ನಾಟಕ ರಾಜ್ಯದ ನಿರ್ಮಾಣವನ್ನು ಬೆಂಬಲಿಸಿದರು. ಇದರ ಆಧಾರದ ಮೇಲೆ ಹಾಗೂ ಸಲ್ಲಿಸಿದ ವರದಿಯ ಆಧಾರದ ಮೇಲೆಯೇ ೧೯೫೬ರ ನವೆಂಬರ್ ೧ ರಂದು -

೧. ಮೈಸೂರು (ಇಂದಿನ ಕರ್ನಾಟಕ)

೨. ಕೇರಳ

೩. ತಮಿಳುನಾಡು

೪. ಮಹಾರಾಷ್ಟ್ರ ಎಂಬ ಹೊಸ ರಾಜ್ಯಗಳು ಉದಯವಾದವು.

ಇಷ್ಟೆಲ್ಲಾ ಆದರೂ ಸಹ ಸಮಿತಿಯಲ್ಲಿದ್ದ ಸದಸ್ಯರುಗಳು ಹಾಗೂ ರಾಜಕೀಯದವರ ಪ್ರಭಾವದಿಂದಾಗಿ ಭಾಷಾವಾರು ಪ್ರಾಂತ್ಯರಚನೆಯು ತೃಪ್ತಿಕರವಾಗಿ ನಡೆದಿಲ್ಲದಿರುವುದು ಕಂಡುಬಂದ ಕಾರಣ, ಇಲ್ಲಿಯ ಜನಕ್ಕೆ ತಮಗೆ ಸೇರಬೇಕಾದ ಗಡಿ ಪ್ರದೇಶಗಳ ಬಗ್ಗೆ, ಫಲವತ್ತಾದ ಪ್ರದೇಶಗಳ ಬಗ್ಗೆ ವಿವಾದವೆಬ್ಬಿಸುತ್ತಾ ಅವುಗಳನ್ನು ಮತ್ತೆ ಪಡೆಯುವ ಹೋರಾಟದಲ್ಲಿ ತಲ್ಲೀನರಾದರು. ಈ ಕಾರ್ಯದಲ್ಲಿ ಕನ್ನಡಿಗರು ಹೊರತಾಗಿಲ್ಲ.

ದಿನಾಂಕ ೨೯.೦೨.೧೯೫೩ ರಂದು ಕೇಂದ್ರ ಸರ್ಕಾರದವರು ಭಾಷಾವಾರು ರಾಜ್ಯಗಳ ಪುನರ್ವಿಂಗಡಣೆಗಾಗಿ ತ್ರಿಸದಸ್ಯರ ಆಯೋಗವು ತನ್ನ ವರದಿಯನ್ನು ಒಪ್ಪಿಸಿದ ಕೂಡಲೆ ಅದನ್ನು ಸಾರ್ವಜನಿಕರ ತಿಳುವಳಿಕೆಗಾಗಿ ದಿನಾಂಕ. ೧೦.೧೦.೧೯೫೫ರಂದು ರಾಜ್ಯದ ಗ್ಯಾಜೇಟ್‌ಗಳಲ್ಲಿ ಪ್ರಕಟಿಸಿತು. ಅಂದಿನಿಂದಲೇ ಪ್ರತ್ಯೇಕ ಕರ್ನಾಟಕದ ನಿರ್ಮಾಣದ ಚಳವಳಿಗಳು ಹೊಸಹೊಸ ಹುಮ್ಮಸ್ಸಿನಿಂದ ಮುನ್ನಡೆದವು. ಇದು ಒಂದು ರೀತಿಯಲ್ಲಿ ಆಯಾ ರಾಜ್ಯಗಳಲ್ಲಿನ ರಾಜಕೀಯ ಮುಖಂಡರ ಸಾಧನೆಯ ಆಶಾದಾಯಕ ಪ್ರಯತ್ನ ವಾಗಿತೆಂದರೆ ತಪ್ಪಾಗಲಾರದು. ಇಲ್ಲಿಯವರೆಗೂ ಶೀತಲ ಸಮರವಾಗಿದ್ದಂತಹ ಗಡಿಸಮಸ್ಯೆಗಳು ಬೈಲಾಗಿ ಅವು ತಾತ್ವಿಕ ಮನ್ನಣೆ ಪಡೆದು ರಾಜ್ಯ ಸರ್ಕಾರಗಳ ನಿಲುವಿನ ಮಾರ್ಗವನ್ನು ಸುಗಮಗೊಳಿಸುವ ಸೂಚನೆಯಾಗಿ ಕಂಡುಬಂದಿತು. ಇದರಿಂದಾಗಿ ರಾಜ್ಯಗಳ ರಾಜಕಾರಣಕ್ಕೆ ತಿಳಿಯಾದ ವಾತಾವರಣವುಂಟಾಗಿ ಹೆದ್ದಾರಿಗಳನ್ನು ತೆರೆದಂತಾಯಿತು.

ಅಂತೆಯೇ ಕನ್ನಡಿಗರು ಸುಮಾರು ಅರ್ಧ ಶತಮಾನದಿಂದ ಕಂಡ ಕನಸು ನನಸಾಯಿತೆಂದು ಸಂತಸಪಡುವಂತೆ ಮೇಲುನೋಟದಲ್ಲಿ ಕಂಡುಬಂದರೂ ತ್ರಿಸದಸ್ಯರ ಆಯೋಗದಿಂದ ಕರ್ನಾಟಕಕ್ಕೆ ಆದ ನಷ್ಟ ತುಂಬಲಾರದಾಯಿತು. ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಎನ್ನುವ ಗೀತೆಯು ತನ್ನ ಜನನದ ಸಮಯದಲ್ಲಿಯೇ ಮರಣವನ್ನಪ್ಪಿತು. (ಆದರೆ ಈ ಮರಣಕ್ಕೆ ಪುನರ್ಜನ್ಮವಿದೆ ಎಂದು ನನ್ನ ಭಾವನೆ) ಏಕೆಂದರೆ ಸುಮಾರು ೧೦,೦೦೦ ಚ.ಕಿ.ರಷ್ಟು ಕನ್ನಡ ಪ್ರದೇಶವು ನೆರೆಯ ರಾಜ್ಯಗಳಾದಂತಹ ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರಗಳಲ್ಲಿ ಸೇರಿಹೋಗಿದ್ದವು. ಈ ಪ್ರದೇಶಗಳನ್ನು ಇಂದಿಗೂ ಸಹ ನಾವು ಪಡೆಯಲು ಸಾಧ್ಯವಾಗಿಲ್ಲ. ಇಂದು ನೆರಯ ರಾಜ್ಯದಲ್ಲಿ ಉಳಿದ ಪ್ರದೇಶಗಳು ಮರಳಿ ಬರುವ ಹಾಗೆಯೂ ಕಾಣುತ್ತಿಲ್ಲ . ಏಕೆಂದರೆ ಆ ಪ್ರದೇಶಗಳೆಲ್ಲವೂ ಸೇರಿರುವ ರಾಜ್ಯದ ಸಂಸ್ಕೃತಿಗೆ ಸಂಪೂರ್ಣವಾಗಿ ಹೊಗ್ಗಿಕೊಂಡಿರುವುದು ಸಮೀಕ್ಷೆಯಿಂದ ತಿಳಿದುಬರುತ್ತದೆ.

೨.೧. ನೆರೆಯ ರಾಜ್ಯದಲ್ಲಿ ಸೇರಿರುವ ಕನ್ನಡ ಪ್ರದೇಶಗಳು

ರಾಷ್ಟ್ರೀಯ ಪುನರ್‌ರಚನಾ ಆಯೋಗವು ೧೯೫೬ರಲ್ಲಿ ತನ್ನ ವರದಿಯಲ್ಲಿ ಪ್ರಕಟಗೊಂಡಾಗ ದಕ್ಷಿಣದ ಕೊಯಮತ್ತೂರು ಜಿಲ್ಲೆಯಿಂದ (ತಮಿಳುನಾಡು) ಕೊಳ್ಳೇಗಾಲ ತಾಲ್ಲೂಕನ್ನು ಮಾತ್ರ ಕರ್ನಾಟಕದ ಮೈಸೂರು ಜಿಲ್ಲೆಗೆ ಸೇರಿಸಿ ಮಿಕ್ಕ ಕನ್ನಡದ ಪ್ರದೇಶಗಳನ್ನು

ಕನ್ನಡ ನಾಡಿಗೆ ಸೇರಿಸುವ ವರದಿ ನೀಡದೆ ರಾಜ್ಯಕ್ಕೆ ಅತಿಯಾದ ನಷ್ಟ ಉಂಟುಮಾಡಿತು. ಈ ವರದಿಯಿಂದ ರಾಜ್ಯಕ್ಕಾದ ನಷ್ಟವನ್ನು ಈ ರೀತಿ ಪಟ್ಟಿ ಮಾಡಬಹುದು:

ಕರ್ನಾಟಕ – ಆಂಧ್ರಪ್ರದೇಶ

ಅಚ್ಚಕನ್ನಡ ಪ್ರದೇಶಗಳಾದಂತಹ ಅದವಾನಿ, ಆಲೂರು, ರಾಯದುರ್ಗ, ತಾಲ್ಲೂಕುಗಳಷ್ಟೆ ಅಲ್ಲದೆ ಮಡಕಶಿರಾ, ಕಲ್ಯಾಣದುರ್ಗ, ಹಿಂದೂಪುರದ ಕೆಲವು ಭಾಗ ಕನ್ನಡ ಮಾತನಾಡುವ ಪ್ರದೇಶಗಳು ಆಂಧ್ರಕ್ಕೆ ಸೇರಿಹೋಗಿದ್ದವು. ಇಂದಿಗೂ ಸಹ ಅವು ಆಂಧ್ರದಲ್ಲಿಯೇ ಇದ್ದರೂ ಸಹ ಕನ್ನಡಾಭಿಮಾನವನ್ನು ತಮ್ಮ ಮನದಲ್ಲಿ ಮನೆ ಮಾಡಿಕೊಂಡು ಮುನ್ನಡೆಯುತ್ತಿವೆ.

ಕರ್ನಾಟಕ – ಮಹಾರಾಷ್ಟ್ರ

ರಾ. ಪು. ಆಯೋಗದಂತೆ ಬೆಳಗಾವಿ-ಕಾರವಾರಗಳು ಕರ್ನಾಟಕದಲ್ಲಿಯೇ ಉಳಿದರೂ ಸಹ ಸೊಲ್ಲಾಪುರ, ಅಕ್ಕಲಕೋಟೆ, ಜತ್ತಿ ತಾಲ್ಲೂಕುಗಳಲ್ಲದೆ ಉಸ್ಮಾನಬಾದ್ ಜಿಲ್ಲೆಯ ನೆಳದುರ್ಗ, ಉದುರ್ಗ ತಾಲ್ಲೂಕುಗಳು, ಮಂಗಳವೇಡೆಯ ಒಂದು ಭಾಗವೆಲ್ಲವೂ ಸಹ ಮಹಾರಾಷ್ಟ್ರದಲ್ಲಿಯೇ ಉಳಿದುಕೊಂಡವು.

ಕರ್ನಾಟಕ – ತಮಿಳುನಾಡು

ರಾಜ್ಯದ ದಕ್ಷಿಣದ ತುತ್ತತುದಿಗೆ ಅಂದರೆ ಮೈಸೂರು ಜಿಲ್ಲೆಗೆ ತಾಗಿದಂತೆ ನೈರುತ್ಯ ದಿಕ್ಕಿನಲ್ಲಿರುವ ನೀಲಗಿರಿ, ಗೂಡಲೂರು, ಉದಕಮಂಡಲ (ಊಟಿ) ಕೊನೂರು, ಬೆರಂಗೂರುಗಳೆಲ್ಲವೂ ಸಹ ರಾಷ್ಟ್ರೀಯ ಪುನರ್‌ರಚನೆಯ ಆಯೋಗದ ಶಿಫಾರಸ್ಸಿನಂತೆ ತಮಿಳುನಾಡಿಗೆ ಸೇರಲ್ಪಟ್ಟವು. ಇಷ್ಟು ಮಾತ್ರವಲ್ಲದೆ ಬೆಂಗಳೂರು ಜಿಲ್ಲೆಗೆ ತಾಗಿದಂತೆ ಇರುವಂತಹ, ಇಂದಿಗೂ ಸಹ ತಮ್ಮ ದಿನನಿತ್ಯದ ವ್ಯವಹಾರಗಳನ್ನು ಬೆಂಗಳೂರೊಂದಿಗೆ ಸಂಪರ್ಕ ಹೊಂದಿರುವ ಸೇಲಂ ಜಿಲ್ಲೆಯ ಕನ್ನಡ ಭಾಗಗಳಾದ ಹೊಸೂರು, ಕೃಷ್ಣಗಿರಿ ಪ್ರದೇಶಗಳೂ ಸಹ ತಮಿಳುನಾಡಿನಲ್ಲಿಯೇ ಉಳಿದವು.

ಕರ್ನಾಟಕ – ಕೇರಳ

ಇಂದಿಗೂ ಸಹ ಕನ್ನಡ ಪ್ರದೇಶವೇ ಆಗಿರುವ ತನ್ನ ಎಲ್ಲ ಸಂಪರ್ಕವನ್ನು ನೆರೆಯ ಮಂಗಳೂರಿನೊಂದಿಗೆ ಹೊಂದಿರುವಂತಹ ಕಾಸರಗೋಡು ತಾಲ್ಲೂಕು ಮತ್ತು ಮೈನಾಡು ತಾಲ್ಲೂಕುಗಳು ಕೇರಳದಲ್ಲಿ ಉಳಿದವು.

ಹಳೆ ಮೈಸೂರಿನ ಸೀಮಿತ ೯ ಜಿಲ್ಲೆಗಳಲ್ಲಿ ಆಡಳಿತ ಮಾಡುತ್ತಿದ್ದಂತಹ ರಾಜಕೀಯ ಧುರೀಣರಿಗೆ, ಹಾಗೆಯೇ ಹಳೇ ಮೈಸೂರಿನ ಸೀಮೆಯನ್ನು ತಮ್ಮ ಸಾಹಿತ್ಯದಲ್ಲಿ ರಸವತ್ತಾಗಿ ವರ್ಣಿಸುತ್ತಿದ್ದಂತಹ ಸಾಹಿತಿಗಳಿಗೆ ವಿಶಾಲ ಕರ್ನಾಟಕವು ಕೈಸೇರಿದ ಮೇಲೆ ಇದೆ ದೊಡ್ಡದೆಂದು ತೃಪ್ತಿಪಟ್ಟಿರಬೇಕು. ಇದು ಒಂದು ದೃಷ್ಟಿಯಲ್ಲಿ ಕನ್ನಡಿಗರ ದೌರ್ಭಾಗ್ಯವೋ ಏನೋ ಕರ್ನಾಟಕಕ್ಕೆ ಸೇರಬೇಕಾದ ಎಷ್ಟೋ ಪ್ರದೇಶಗಳು ಇಂದಿಗೂ ಸಹ ನೆರೆಯ ರಾಜ್ಯದಲ್ಲಿ ಉಳಿಯುವಂತಾಗಿದೆ. ಆದರೆ ರಾಜ್ಯದ ಅನೇಕ ಪ್ರಜ್ಞಾವಂತರು ಮೇಲ್ಕಂಡ ಪ್ರದೇಶಗಳು ಕರ್ನಾಟಕಕ್ಕೆ ಸೇರಿಸಬೇಕೆಂದು ರಾಜ್ಯದಾದ್ಯಂತ ಉಗ್ರ ಪ್ರತಿಭಟನೆ ಮಾಡಲು

ಪ್ರಾರಂಭಿಸಿದರು. ಈ ಪ್ರತಿಭಟನೆಯು ಕೇವಲ ಕರ್ನಾಟಕಕ್ಕೆ ಮೀಸಲಾಗಿರಲಿಲ್ಲ. ನೆರೆಯ ಮಹಾರಾಷ್ಟ್ರದಲ್ಲಿ 'ಮಹಾರಾಷ್ಟ್ರ ಏಕೀಕರಣ ಸಮಿತಿ' ಎಂಬ ಹೋರಾಟ ಸಮಿತಿಯನ್ನು ಸ್ಥಾಪಿಸಿಕೊಂಡು ಬೆಳಗಾವಿ ಮತ್ತು ಕಾರವಾರಗಳಿಗಾಗಿ ಚಳವಳಿ ನಡೆಸಲು ಪ್ರಾರಂಭಿಸಿದರು. ಆಂಧ್ರದವರು ಬಳ್ಳಾರಿಗಾಗಿ ಚಳವಳಿಗೆ ಇಳಿದರು. ಕೇರಳದಲ್ಲಿ ಕಾಸರಗೋಡಿನ ಜನರು ಕೇರಳಕ್ಕೆ ಕಾಸರಗೋಡನು ಸೇರಿಸಿರುವುದರ ವಿರುದ್ಧ ಉಗ್ರ ಪ್ರತಿಭಟನೆ ನಡೆಸಲು ಆರಂಭಿಸಿದರು. ಇದನ್ನೆಲ್ಲ ಗಮನಿಸಿದ ಕೇಂದ್ರ ಸರ್ಕಾರವು ಗಡಿಸಮಸ್ಯೆಯ ತೀರ್ಮಾನಕ್ಕಾಗಿ ಇನ್ನೊಂದು ಸಮಿತಿಯನ್ನು ನೇಮಿಸುವುದಾಗಿ ಹೇಳಿಕೆ ನೀಡಿತು. ಮುಂಬಯಿಯಲ್ಲಿ ಕೇಂದ್ರ ವರಿಷ್ಠರು ಸಭೆ ಸೇರಿ ಚರ್ಚಿಸಿ ಆಯೋಗವನ್ನು ನೇಮಿಸಲು ನಿರ್ಣಯಿಸಿದರು. ಇದಕ್ಕೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳೂ ಸಹ ಸಮ್ಮತಿಸಿದ್ದಲ್ಲದೆ ಈ ಹೊಸ ಆಯೋಗವು ಕೊಡುವ ತೀರ್ಮಾನಕ್ಕೆ ಬದ್ಧರಾಗಿರುವುದಾಗಿ ನಿರ್ಣಯ ಕೈಗೊಂಡರು. ಈ ಆಧಾರದ ಮೇಲೆಯೇ ನಾನು ಮೊದಲೇ ತಿಳಿಸಿರುವ ಹಾಗೆ ಮಹಾಜನ್ ಅವರ ನೇತೃತ್ವದ ಏಕ ಸದಸ್ಯ ಆಯೋಗವನ್ನು ನೇಮಕ ಮಾಡಲಾಯಿತು. ಸೂಕ್ತ ಸಮಯದಲ್ಲಿ ತಮ್ಮ ಕ್ಷೇತ್ರಕಾರ್ಯವನ್ನು ಮುಗಿಸಿ ಮಹತ್ವದ ವರದಿಯನ್ನು ಸಿದ್ಧಪಡಿಸಿ ಮಹಾಜನ್ ಅವರು ಕೇಂದ್ರ ಸರ್ಕಾರಕ್ಕೆ ದಿನಾಂಕ ೨೫ನೇ ಆಗಸ್ಟ್ ೧೯೬೭ರಂದು ಒಪ್ಪಿಸಿದರು.

ಮಹಾಜನ್‌ರವರು ತಮ್ಮ ವರದಿಯಲ್ಲಿ ಬೆಳಗಾವಿಯು ಕರ್ನಾಟಕದಲ್ಲಿಯೇ ಇರಬೇಕೆಂದು, ನಿಪ್ಪಾಣಿಯು ಅಕ್ಕಪಕ್ಕದ ಕೆಲವು ಹಳ್ಳಿಗಳ ಸಮೇತ ಮಹಾರಾಷ್ಟ್ರಕ್ಕೆ ಸೇರುವಂತೆಯೂ, ಕಾಸರಗೋಡು ಕೇರಳಕ್ಕೆ ಸೇರಿಸಿರುವುದು ಸ್ವಲ್ಪವೂ ಸರಿಯಲ್ಲವೆಂದೂ ಅದನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಸೂಚಿಸಿದ್ದರು. ವರದಿಯಿಂದ ಕರ್ನಾಟಕಕ್ಕೆ ಅನ್ಯಾಯವಾಗಿದ್ದರೂ ಸಹ ಮಾತಿಗೆ ತಪ್ಪದೆ ವರದಿಯನ್ನು ಕರ್ನಾಟಕವು ಒಪ್ಪಿಕೊಂಡಿತು. ಇದರಿಂದ ಕಾಸರಗೋಡಿನ ಕನ್ನಡ ಪ್ರೇಮಿಗಳಿಗೆ ನ್ಯಾಯ ದೊರೆಯುವುದೆಂಬ ಆಶಾಭಾವನೆ ಮೂಡಿಬಂತು. ಆದರೆ ಮಹಾಜನ ವರದಿಯು ಹೊರಬಂದು ೩೦ ವರ್ಷಗಳೇ ಕಳೆದಿವೆ. ಇಂದಿಗೂ ಸಹ ಅದು ಜಾರಿಗೆ ಬಂದಿರುವುದಿಲ್ಲ. ಗಡಿ ಸಮಸ್ಯೆಯು ಸಮಸ್ಯೆಯಾಗಿಯೇ ಮುಂದುವರಿಯುತ್ತಿದೆ. ಸರ್ಕಾರಗಳು ಈ ಅವ್ಯವಸ್ಥೆಯಿಂದ ಕಾಸರಗೋಡಿನ ಜನತೆ ಹಾಗೂ ಉತ್ತರದ ಕನ್ನಡ ಪ್ರದೇಶಗಳ ಜನತೆಯು ದುಃಖ ದುಮ್ಮಾನಗಳಿಂದ ಬಳಲಿ ಹೋಗಿದ್ದಾರೆ.

ಇಂದು ನಾವು ಕರ್ನಾಟಕದ ಗಡಿ ಸಂಬಂಧಿತ ಚಳವಳಿಗಳನ್ನು ಕುರಿತು ಬರೆಯುವಾಗ ಪ್ರಮುಖವಾಗಿ ಎರಡು ಅಂಶಗಳನ್ನು ಗಮನಿಸಬೇಕಾಗುತ್ತದೆ.

೧. ಪ್ರಾಕೃತಿಕವಾಗಿ ಹಾಗೂ ಮಾನಸಿಕವಾಗಿ ಕರ್ನಾಟಕದಲ್ಲಿಯೇ ಇರುವ ಕೆಲವು ರಾಜಕಾರಣಿಗಳ ಸ್ವಾರ್ಥದಿಂದ ನೆರೆಯ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಚಳವಳಿ ನಡೆಸುತ್ತಿರುವ ಬೆಳಗಾವಿಯಂತಹ ಗಡಿ ಪ್ರದೇಶ.

೨. ಶತಮಾನಗಳ ಇತಿಹಾಸವನ್ನು ತಿರುಗಿಸಿದರೆ ಅಂದಿನಿಂದಲೂ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದಂತಹ ಕಾಸರಗೊಡು ಕೇರಳಕ್ಕೆ ಸೇರಿಸಿರುವುದನ್ನು ವಿರೋಧಿಸಿ ಕರ್ನಾಟಕಕ್ಕೆ ಸೇರಿಸಬೇಕೆಂದು ಹೋರಾಡುತ್ತಿರುವ ಕಾಸರಗೋಡು, ಆದವಾನಿ, ಆಲೂರು, ಮಡಕಶಿರಾ, ರಾಯದುರ್ಗಗಳಂಥ

ಗಡಿನಾಡುಗಳಿಗೆ ಸಂಬಂಧಿಸಿದ ವಿಚಾರ. ಉತ್ತರದ ಮಹಾರಾಷ್ಟ್ರಕ್ಕೆ ಸೇರಿರುವ ಸೊಲ್ಲಾಪುರ, ಜತ್ತಿ ತಾಲ್ಲೂಕುಗಳೂ ಇದರಿಂದ ಹೊರತಾಗಿಲ್ಲ.

ಇರುವುದನ್ನು ಉಳಿಸಿಕೊಳ್ಳುವ ಜಾಣ್ಮೆಯೊಂದಾದರೆ ಬರಬೇಕಾದುದನ್ನು ಪಡೆದುಕೊಳ್ಳುವ ಧೀಮಂತ ಸಾಹಸ ಇನ್ನೊಂದು ಕಡೆ. ಈ ಎರಡು ಸಫಲತೆಯನ್ನು ಪಡೆಯಲು ಕನ್ನಡಿಗರಾದ ನಾವು ತುಂಬ ಎಚ್ಚರಿಕೆಯಿಂದಲೂ, ಬುದ್ಧಿವಂತಿಕೆಯಿಂದಲೂ ಶಕ್ತಿ ಮೀರಿ ಕಾರ್ಯಪ್ರವೃತ್ತರಾಗುವುದು ಅವಶ್ಯಕವಾಗಿದೆ. ಈ ಸಮಸ್ಯೆಗಳು ಹೆಚ್ಚಾಗಿ ರಾಜಕೀಯಕ್ಕೆ ಹತ್ತಿರವಾಗಿದ್ದು ಯಾವುದೇ ಸನ್ನಿವೇಶದಲ್ಲಿಯೂ ರಾಜಕೀಯದಿಂದ ಭಿನ್ನವಾಗಿರುವುದಿಲ್ಲ. ಈ ದೃಷ್ಟಿಯಿಂದ ನಮ್ಮ ರಾಜಕಾರಣಗಳು ಪ್ರತಿಯೊಂದು ಸನ್ನಿವೇಶದಲ್ಲಿಯೂ ಮಹತ್ವದ ನಿರ್ಣಯ ಕೈಗೊಂಡು ಮುನ್ನಡೆಯಬೇಕಾಗಿದೆ.

೨.೨. ಕರ್ನಾಟಕ ಮತ್ತು ಮಹಾರಾಷ್ಟ್ರ

ಮಹಾರಾಷ್ಟ್ರೀಯರ ಹಾಗೆ ನಾವೇ ನೋಡುವುದಾದರೆ ಮಹಾಜನ ವರದಿಯಂತೆ ಕರ್ನಾಟಕಕ್ಕೆ ಬರಬೇಕಾದ ಕನ್ನಡದ ಗಡಿಭಾಗಗಳು ಸೊಲ್ಲಾಪುರದ ಪ್ರದೇಶದಲ್ಲಿಯೇ ಇವೆ. ಆದರೆ ನಾವು ಅವುಗಳನ್ನು ಪಡೆಯಲು ಉಗ್ರವಾದ ಹೋರಾಟ ಮಾಡುವುದಿರಲಿ ಆ ಪ್ರದೇಶಗಳಿಗೆ ಹೊರನಾಡ ಕನ್ನಡ ಪ್ರದೇಶಗಳೆಂದು ಕರೆಯುತ್ತಿದ್ದೇವೆ. ಆದರೆ ಮಹಾರಾಷ್ಟ್ರೀಯರು ಕರ್ನಾಟಕದಿಂದ ಅವರು ತಮ್ಮದೆಂದು ಕೇಳುತ್ತಿರುವ ಪ್ರದೇಶಗಳಿಗೆ ಹೊರಮಹಾರಾಷ್ಟ್ರ ಎಂದು ಹೆಸರಿಡದೆ 'ಸೀಮಾ' ಭಾಗಗಳೆಂದು ಕರೆದುಕೊಳ್ಳುತ್ತಿದ್ದಾರೆ. ಇದೇ ನಮ್ಮ ಹಾಗೂ ಅವರ ದೃಷ್ಟಿಕೋನಗಳಿಗಿರುವ ಪ್ರಮುಖ ವ್ಯತ್ಯಾಸ ಅಂತ ನನ್ನ ಅನಿಸಿಕೆ. ಇದು ತಪ್ಪಲ್ಲವೆ? ಇಂದು ನಾವು ನಮ್ಮ ಕರ್ನಾಟಕವನ್ನು ನಾಲ್ಕು ಪ್ರದೇಶಗಳ ಹೆಸರಿನಲ್ಲಿ ಕರೆಯುತ್ತಿದ್ದೇವೆ. ೧. ಹೈದ್ರಾಬಾದ್ ಕರ್ನಾಟಕ, ೨. ಬಾಂಬೆ ಕರ್ನಾಟಕ, ೩. ಮದ್ರಾಸ್ ಕರ್ನಾಟಕ, ೪. ಹಳೇ ಮೈಸೂರು ಪ್ರಾಂತ್ಯ ಎಂದು ಇದು ಸರಿಯೇ? ಏಕೆ ಹಿಂದಿಗು ಸಹ ನಾವು ಈ ಮೇಲಿನ ನೆರೆಯ ರಾಜ್ಯಗಳ ಹೆಸರನ್ನು ಸೂಚಿಸುವ ಹಾಗೆ ಕರೆಯಬೇಕು. ಅದನ್ನು ಬಿಟ್ಟು ಉತ್ತರ ಕರ್ನಾಟಕ, ದಕ್ಷಿಣ, ಆಗ್ನೇಯ, ಕೊಂಕಣ ಎಂದು ದಿಕ್ಕನ್ನು ಸೂಚಿಸುವ ಹಾಗೆ ಕರೆಯುವುದರಿಂದ ನಮ್ಮ ರಾಜ್ಯ ಎಂಬ ಭಾವನೆಯನ್ನು ಮೂಡಿಸಬಹುದು.

ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ, ಜತ್ತಿ ತಾಲ್ಲೂಕುಗಳು ಕರ್ನಾಟಕಕ್ಕೆ ಸೇರಬೇಕೆಂದು ಸ್ವತಃ ಮಹಾರಾಷ್ಟ್ರ ಸರ್ಕಾರವೇ ಒಪ್ಪಿಕೊಂಡಿರುವುದಲ್ಲದೆ ಮಹಾಜನ ವರದಿಯು ಕಾರ್ಯರೂಪಕ್ಕೆ ಬಂದರೆ ಮೇಲಿನ ಎಲ್ಲ ಭಾಗಗಳೂ ಸಹ ಕರ್ನಾಟಕಕ್ಕೆ ಬರಲಿವೆ. ಆದರೆ ಈ ಮಧ್ಯೆ ದುರ್ದೈವದ ಸಂಗತಿಯೊಂದನ್ನು ಇಲ್ಲಿ ಹೇಳಬಯಸುತ್ತೇನೆ. ಕರ್ನಾಟಕ ಸರ್ಕಾರವು ಈ ದಿಶೆಯಲ್ಲಿ ತೆಗೆದುಕೊಂಡಂತಹ ನಿರ್ಣಯದಿಂದಾಗಿ ಕನ್ನಡಿಗರೆನ್ನುವವರ ಆ ಪ್ರದೇಶವು ಕರ್ನಾಟಕದೊಂದಿಗೆ ವಿಲೀನವಾಗಬೇಕೆಂದು ಹೋರಾಡುತ್ತಿದ್ದಂತಹ ಕನ್ನಡಾಭಿಮಾನಿಗಳಿಗೆ ಮನ ನೋಯುವಂತಾಯಿತು. ಅದೇನೆಂದರೆ ಮುಖ್ಯಮಂತ್ರಿ ಡಿ. ದೇವರಾಜ ಅರಸುರವರು 'ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ, ಜತ್ತಿ ಈ ಮೂರು ತಾಲ್ಲೂಕುಗಳು ಫಲವತ್ತಾಗಿಲ್ಲದ ಪ್ರದೇಶಗಳು, ಇದರಿಂದ ಕರ್ನಾಟಕಕ್ಕೆ ಯಾವುದೇ ರೀತಿಯ ಲಾಭದಾಯಕವಾಗುವುದಿಲ್ಲ. ಆದ್ದರಿಂದ ಮಹಾರಾಷ್ಟ್ರಕ್ಕೆ ಬೇಡವಾದ

ಮಹಾಜನ್ ವರದಿಯು ಕರ್ನಾಟಕಕ್ಕೂ ಬೇಡ' ಎಂದು ಹಾಡಿದ ಮಾತು ಮೇಲ್ಕಂಡ ಪ್ರದೇಶದ ಜನರ ಜೊತೆಗೆ ಕಾಸರಗೋಡಿನ ಕನ್ನಡಿಗರ ಅಂತಃಕರಣವನ್ನು ಅಲುಗಾಡಿಸಿತು. 'ಮನೆಗೆ ಮಾರಿ ಊರಿಗೆ ಉಪಕಾರಿ' ಎಂಬ ಧೋರಣೆಯಿಂದಲೇ ನಾವು ಸಾಕಷ್ಟು ಕನ್ನಡ ಪ್ರದೇಶಗಳನ್ನು ಮರಾಠರಿಗೆ, ತೆಲುಗರಿಗೆ, ತಮಿಳರಿಗೆ, ಕೇರಳೀಯರಿಗೆ ಅವರು ಬೇಡದೇ ಅರ್ಪಿಸಿದ ಉದಾಹರಣೆಗಳಿಗೆ ಇತಿಹಾಸದಲ್ಲಿ ಕೊರತೆಯಿಲ್ಲ.

ನಾನು ಕ್ಷೇತ್ರಕಾರ್ಯಕ್ಕಾಗಿ ಬೆಳಗಾವಿಯಿಂದ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ವಿಜಯದುರ್ಗದವರೆಗೂ ಪ್ರವಾಸಮಾಡಿ ಅಲ್ಲಲ್ಲಿಯ ಜನರನ್ನು ಕಂಡು ಮಾತನಾಡಿಸಿದೆ. ಅವರ ಜನಜೀವನವನ್ನು ವಿಕ್ಷಿಸಿದೆ. ವಿಜಯದುರ್ಗದವರೆವಿಗೂ ಸಹ ಕನ್ನಡ ಮಾತನಾಡುವ ಕನ್ನಡ ಸಂಸ್ಕೃತಿಯನ್ನೆ ಎತ್ತಿ ಹಿಡಿಯುತ್ತಿರುವ ಜನರೇ ಇದ್ದಾರೆ. ಅದೆಲ್ಲವೂ ಇಂದಿಗೂ ಕನ್ನಡದ ನೆಲವೇ ಆಗಿದೆ. ಅಂದರೆ ೧೭೫ ವರ್ಷಗಳಲ್ಲಿ ವರ್ಷಕ್ಕೆ ಸರಾಸರಿ ಒಂದು ಮೈಲಿನಂತೆ ಕನ್ನಡದ ನೆಲವನ್ನು ಕಳೆದುಕೊಂಡು ಇಂದು ಬೆಳಗಾವಿಯ ಹೆಬ್ಬಾಗಿಲಿಗೆ ಬಂದು ನಿಂತಿದ್ದೇವೆ. ಈ ದೃಷ್ಠಿಯಿಂದಲಾದರೂ ನಾವು ಮಹಾಜನ ವರದಿಯನ್ನು ಜಾರಿಗೆ ತರುವಂತೆ ಒತ್ತಾಯ ಮಾಡಲೇಬೇಕು. ಇಲ್ಲದಿದ್ದರೆ ಹೊರಗಿರುವ ಪ್ರದೇಶಗಳನ್ನು ಪಡೆಯುವುದಾದರೂ ಹೇಗೆ? ಹಲವಾರು ವರ್ಷಗಳಿಂದ ಈ ಭಾಗದ ಕನ್ನಡಿಗರು ನಡೆಸಿಕೊಂಡು ಬರುತ್ತಿರುವ ಹೋರಾಟದ ಗತಿ ಹೇಗಾಗಬೇಕು.

ಮಹಾರಾಷ್ಟ್ರದವರು ಮೇಲಿನದಷ್ಟೇ ಅಲ್ಲದೆ ಗಡಿಯಲ್ಲಿರುವ ಕನ್ನಡಿಗರ ಜನಗಣತಿಯಲ್ಲಿ ತಮ್ಮ ಕೈಚಳಕ ತೋರಿಸುತ್ತಿರುವುದು ಕಂಡುಬರುತ್ತಿದೆ. ಉದಾಹರಣೆಗೆ: ೧೯೫೧ರ ಜನಗಣತಿಯಂತೆ ದಕ್ಷಿಣ ಸೊಲ್ಲಾಪುರ ತಾಲ್ಲೂಕಿನಲ್ಲಿಯ ಮಹತ್ವದ ಫಲವತ್ತಾದ ಗ್ರಾಮವಾದ ಖಾನಾಪುರವು ನೂರಕ್ಕೆ ನೂರರಷ್ಟು ಕನ್ನಡ ಪ್ರದೇಶ. ಮರಾಠಿಗರು ಶೂನ್ಯ. ಆದರೆ ೧೯೬೧ರಲ್ಲಿ ಅದೇ ಕನ್ನಡಿಗರು ೦.ಲಕ್ಕೆ ಇಳಿಯಿತು. ಮರಾಠಿಗರು ೧೦೦ಕ್ಕೆ ೯೧.೫ಕ್ಕೆ ಏರಿತು. ಮುಂದಿನ ಜನಗಣತೆಯಲ್ಲಿ ೧೯೭೧ ರಲ್ಲಿ ೧೦೦ಕ್ಕೆ ೧೦೦ರಷ್ಟು ಮರಾಠಿ, ಕನ್ನಡ ಶೂನ್ಯ. ಅದರಂತೆ ತೆಳೆಗಾವ ಎಂಬ ಫಿರ್ಕದಲ್ಲಿ ೧೯೫೧ರಲ್ಲಿ ಕನ್ನಡ ೧೦೦ಕ್ಕೆ ೮೪.೩, ಅದೇ ಮರಾಠಿ ೦.೫ ಮಾತ್ರ. ಮುಂದೆ ೧೯೬೧ರಲ್ಲಿ ಕನ್ನಡ ೧೦೦ಕ್ಕೆ ೭೮.೭ ಇಳಿದರೆ ಮರಾಠಿ ೬೭.೫ಕ್ಕೆ ಏರಿತು. ಕುಸೂರು ಎಂಬುವುದು ಒಬ್ಬ ಮರಾಠಿ ಮುಂದಾಳು ಇದ್ದಂತಹ ಊರು, ಇದು ಭೀಮಾನದಿಯ ದಂಡೆಯ ಮೇಲಿನ ಫಲವತ್ತಾದ ಪ್ರದೇಶವಾಗಿದೆ. ಇಲ್ಲಿ ೧೯೫೧ರಲ್ಲಿ ಮರಾಠಿಜನ ೧೦೦ಕ್ಕೆ ೪೧.೧, ಕನ್ನಡದ ಜನ ೭೦.೯, ೧೯೬೧ರ ಜನಗಣತಿಯಲ್ಲಿ ಮರಾಠಿ ೧೦೦ಕ್ಕೆ ೭೦.೯ ಆದರೆ ಕನ್ನಡ ೨೩.೩. ಇದಕ್ಕೇನು ಕಾರಣವೆಂದರೆ ಮೋಸ ಮಾಡಿಯಾದರೂ ಅಕ್ಕಲಕೋಟೆಯನ್ನು ದಕ್ಕಿಸಿಕೊಳ್ಳಬೇಕೆಂದು ಅಷ್ಟೆ ಅಲ್ಲದೆ ಅಲ್ಲಿರುವ ಭಂಡಾರ ಕೋಟೆಯ ಮೇಲೆ ಕಣ್ಣು ಮರಾಠಿಗರದು.

ಸಣ್ಣ ಹಳ್ಳಿಯಿಂದ ಹಿಡಿದು ದೊಡ್ಡ ಪಟ್ಟಣಗಳವರೆಗೆ ಸಮಯ ಸಿಕ್ಕಾಗಲೆಲ್ಲಾ ಜನಗಣತಿಯ ಅಂಕಿಸಂಖ್ಯೆಗಳನ್ನೆಲ್ಲಾ ಬದಲಾಯಿಸುತ್ತಾ, ಸರ್ಕಾರಿ ಅಧಿಸೂಚಿಗಳಲ್ಲಿ ಕನ್ನಡಿಗರ ಸಂಖ್ಯೆಯನ್ನು ದಿಢೀರನೆ ಕಡಿಮೆ ತೋರಿಸುತ್ತಾ ಬರುತ್ತಿರುವುದು ದಾಖಲೆಗಳಿಂದ ಹೆಚ್ಚಾಗಿ ತಿಳಿದುಬರುತ್ತದೆ. ಇದಕ್ಕಾಗಿಯೇ ಕರ್ನಾಟಕ ಸರ್ಕಾರವು ಸೊಲ್ಲಾಪುರ ನಗರದ

(ಸೋಲಾಪುರ ಜಿಲ್ಲೆಯ ಪ್ರದೇಶಗಳನ್ನೆಲ್ಲ ಸೇರಿ) ಜನಗಣತಿಯನ್ನು ಮಹಾರಾಷ್ಟ್ರ ಸರ್ಕಾರಕ್ಕೆ ವಹಿಸದೆ ಕೇಂದ್ರ ಸರ್ಕಾರವೇ ಖುದ್ದಾಗಿ ವಹಿಸಿಕೊಂಡು ಜನಗಣತಿಯನ್ನು ನಡೆಸಬೇಕೆಂದು ಕೇಳುತ್ತಾ ಬರುತ್ತಿದೆ.

ಸೋಲ್ಲಾಪುರ ಜಿಲ್ಲೆಯಲ್ಲಿ ಸೊಲ್ಲಾಪುರ ನಗರ ಸಹಿತ ಕನ್ನಡ ಮಾತನಾಡುವವರ ಸಂಖ್ಯೆ ಇಂದಿಗೂ ಸಹ ನೂರಕ್ಕೆ ಎಪ್ಪತ್ತೈದರಷ್ಟು ಆದುದರಿಂದ ಮಹಾರಾಷ್ಟ್ರೀಯರು ಸೊಲ್ಲಾಪುರ ನಗರವನ್ನು ಆ ತಾಲ್ಲೂಕಿನಿಂದ ಬೇರ್ಪಡಿಸಿ ನಗರದ ಸುತ್ತಲೂ ಇರುವ ಸುಮಾರು ಇಪ್ಪತ್ತು ಗ್ರಾಮಗಳ ಸಹಿತ ನೆರೆ ತಾಲ್ಲೂಕಿನಲ್ಲಿಯ ಮರಾಠಿ ಪ್ರಾಧಾನ್ಯವಿರುವ ನಲ್ವತ್ತು ಗ್ರಾಮಗಳೊಂದಿಗೆ ಸೊಲ್ಲಾಪುರ ನಗರವನ್ನು ಸೇರಿಸಿ ಅದಕ್ಕೆ ಉತ್ತರ ಸೊಲ್ಲಾಪುರ ತಾಲ್ಲೂಕೆಂದು ಹೆಸರಿಸಲಾಗಿತ್ತು. ಈ ರೀತಿಯಲ್ಲಿ ಮರಾಠಿಗರು ಕನ್ನಡದ ಪ್ರದೇಶಗಳನ್ನು ತನ್ನ ಪ್ರದೇಶವನ್ನಾಗಿ ಪರಿವರ್ತಿಸಿಕೊಳ್ಳಲು ಎಷ್ಟು ಬೇಗ ಸಾಧ್ಯವೂ ಅಷ್ಟು ಬೇಗ ಮೇಲಿನ ರೀತಿಯಲ್ಲಿ ನಿರ್ಣಯ ಕೈಗೊಳ್ಳುತ್ತಾ ಬರುತ್ತಿದ್ದಾರೆ. ಈ ಮೇಲಿನ ಎರಡು ತಾಲ್ಲೂಕುಗಳ ಆಡಳಿತ ಕಚೇರಿಗಳು ಇಂದಿಗೂ ಸಹ ಸೊಲ್ಲಾಪುರ ನಗರದಲ್ಲಿಯೇ ಇರುತ್ತವೆ. ಇವರ ಉದ್ದೇಶವೇನೆಂದರೆ ತಾಲ್ಲೂಕನ್ನು ಘಟಕವಾಗಿ ಹಿಡಿದಿದ್ದಾದರೆ ಸೋಲ್ಲಾಪುರವು ಕರ್ನಾಟಕಕ್ಕೆ ಸೇರದಂತೆ ಎಚ್ಚರಿಕೆ ವಹಿಸುವುದು. ೧೯೫೬ರ ಭಾಷಾವಾರು ಪ್ರಾಂತ ರಚನೆಯ ನಂತರ ಈ ನಗರದಲ್ಲಿ ಕನ್ನಡದ ಬೇರನ್ನೇ ಕಿತ್ತು ಒಗೆಯುವ ಕೆಲಸ ನಡೆಯಿತು. ಇದಕ್ಕೆ ಸಾಕ್ಷಿಯಾಗಿ ಇಲ್ಲಿ ಕೆಲವು ಉದಾಹರಣೆ ನೀಡಬಯಸುತ್ತೇನೆ. ಸೋಲ್ಲಾಪುರದಲ್ಲಿ ಆಗಬೇಕಾಗಿದ್ದಂತಹ ಇಂಜಿನಿಯರಿಂಗ್ ಕಾಲೇಜನ್ನು ಕಿತ್ತು ಸತಾರಾ ಜಿಲ್ಲೆಯ ಕರಾಡಕ್ಕೆ ಕೊಂಡೊಯ್ದರು, ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯನವರು ಮುಂಬಯಿ ಸರಕಾರದ ಇಂಜಿನಿಯರಿಂಗ್ ಹುದ್ದೆಯಲ್ಲಿದ್ದಾಗ ಯೋಜಿತಗೊಂಡಿದ್ದಂತಹ ಅಕ್ಕಲಕೋಟೆ ತಾಲ್ಲೂಕಿನ ಬೋರಿ ನದಿಗೆ ಅಣೆಕಟ್ಟು ಕಟ್ಟುವುದನ್ನು ನಳದುರ್ಗಕ್ಕೆ ವರ್ಗಾಯಿಸಲಾಯಿತು. ಈ ಯೋಜನೆಯಿಂದ ಸೊಲ್ಲಾಪುರದ ಎರಡು ಕನ್ನಡ ತಾಲ್ಲೂಕುಗಳು ಸಂಪೂರ್ಣವಾಗಿ ನೀರುಂಡು ಸಮೃದ್ಧವಾಗಿ ಬೆಳೆ ಕೊಡುವಂತಿದ್ದು ಅವರಿಗೆ ಸಹಿಸಿಕೊಳ್ಳಲಾಗಲಿಲ್ಲ. ಈ ಬಗ್ಗೆ ಸೊಲ್ಲಾಪುರದ ಕನ್ನಡಿಗರು 'ಸೊಲ್ಲಾಪುರ ಕನ್ನಡಾಭಿಮಾನಿಗಳ ಸಂಘ' ಎಂಬ ಸಂಘ ಸ್ಥಾಪಿಸಿಕೊಂಡು ಮರಾಠಿಗರ ವಿರುದ್ಧ ಉಗ್ರಹೋರಾಟಕ್ಕೆ ಇಳಿದರು. ಕನ್ನಡದ ಜನರು ಈ ರೀತಿಯ ಉಗ್ರಹೋರಾಟಕ್ಕೆ ಇಳಿಯಲು ಮತ್ತೊಂದು ಪ್ರಮುಖ ಕಾರಣವಿತ್ತು. ಅದೆಂದರೆ ಸೊಲ್ಲಾಪುರದ ರೈಲ್ವೆ ಭಾಗವು ಮೊನ್ನೆಮೊನ್ನೆಯವರೆಗೆ ಸಿಕಂದರಾಬಾದ್-ಹುಬ್ಬಳ್ಳಿ ವಿಭಾಗಗಳಿಗೆ ಜೋಡಿಸಲಾಗಿತ್ತು. ಮಹಾರಾಷ್ಟ್ರಿಯರು ಅದನ್ನು ಕಿತ್ತು ಮುಂಬಯಿಯಿಂದ ಮಧ್ಯ ರೈಲ್ವೆ ವಿಭಾಗಕ್ಕೆ ಜೋಡಿಸಿಕೊಂಡರು. ಇಲ್ಲಿ ಸ್ಥಾಪಿಸಬೇಕೆಂದಿದ್ದ ರೈಲ್ವೆ ಲೋಕೋಮೋಟಿವ್ ಕಾರ್ಖಾನೆಯನ್ನು ಸಹ ಪುಣೆಯ ಹತ್ತಿರದ ಧೊಂಡದಲ್ಲಿ ಪ್ರಾರಂಭಿಸಲಾಯಿತು. ಇದಕ್ಕೆಲ್ಲ ಕಾರಣ ಸೊಲ್ಲಾಪುರ ನಗರವನ್ನು ಮೂರನೆ ದರ್ಜೆಯ ನಗರವನ್ನಾಗಿ ಮಾರ್ಪಡಿಸುವುದೆ ಆಗಿತ್ತು. ಅಧಿಕ ಸಂಖ್ಯೆಯಲ್ಲಿ ಕನ್ನಡಿಗರೇ ಇರುವ ಸೊಲ್ಲಾಪುರವು ಮುಂದೆ ಯಾವುದಾದರೂ ಆಯೋಗ ಬಂದು ಕರ್ನಾಟಕಕ್ಕೆ ಸೇರಿಸ ಬಹುದೆಂಬ ಭಯದಿಂದ ಈ ರೀತಿಯ ಕೆಲಸ ಮಾಡುತ್ತಾ ಬರುತ್ತಿದ್ದಾರೆ. (ಈಗಾಗಲೇ ಮಹಾಜ ವರದಿಯ ಪ್ರಕಾರ ಸೊಲ್ಲಾಪುರವು ಕರ್ನಾಟಕಕ್ಕೆ ಸೇರಿಸಲು ಆದೇಶ ಪಡೆದಿರುತ್ತದೆ.)

ನೆರೆಯ ಮಹಾರಾಷ್ಟ್ರದಲ್ಲಿರುವ ಸೊಲ್ಲಾಪುರದಲ್ಲಷ್ಟೆ ಅಲ್ಲದೆ ಸುತ್ತಲಿನ ಕನ್ನಡ ಗ್ರಾಮಗಳಲ್ಲಿ ಶೈಕ್ಷಣಿಕವಾಗಿ ಕನ್ನಡವನ್ನು ಬೆಳೆಸುವುದು ಸರಿಯಲ್ಲವೆಂದು ಸೊಲ್ಲಾಪುರ ನಗರದಲ್ಲೂ ಕೇವಲ ೧೪ ಕನ್ನಡ ಪ್ರಾಥಮಿಕ ಶಾಲೆಗಳನ್ನು ಮಾತ್ರ ಉಳಿಯುವಂತೆ ಮಾಡಿದರು. ೧೯೫೦, ೧೯೬೩ರಲ್ಲಿ ೮೪, ೯೦ ಇದ್ದಂತಹ ಕನ್ನಡದ ಶಾಲೆಗಳು ೧೯೯೮ರ ವೇಳೆಗೆ ಕೇವಲ ೧೪ಕ್ಕೆ ಇಳಿದಿದೆ ಎಂದರೆ ನಂಬಲು ಸಾಧ್ಯವೆ? ಆದರೆ ಇದಕ್ಕೆ ಕನ್ನಡಿಗರ ಪ್ರೋತ್ಸಾಹ ಹಾಗೂ ತಾತ್ಸಾರ ಮನೋಭಾವನೆಯೂ ಒಂದು ಕಡೆ ಕಾರಣವಾಗುತ್ತದೆ. ಕನ್ನಡದ ಶಿಕ್ಷಣದಿಂದ ತಮಗಾದ ಅನ್ಯಾಯದಿಂದ ನಿರಾಶೆಗೊಂಡ ಕನ್ನಡಿಗರು ಮಹಾರಾಷ್ಟ್ರದಲ್ಲಿ ಕನ್ನಡ ಕಲಿತವರಿಗೆ ನೌಕರಿ ದೊರೆಯಲಿಲ್ಲ, ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ವೈದ್ಯಕೀಯ, ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ದೊರೆಯ ದಂತಾಯಿತು. ಕರ್ನಾಟಕವು ಅವರನ್ನು ಹೊರನಾಡಿನವರೆಂದು ಜರಿದರು. ತಮ್ಮದೆಯಾದ ತಾಂತ್ರಿಕ ನ್ಯೂನತೆಗಳನ್ನು ಮುಂದೆ ಮಾಡತೊಡಗಿದರು. ಆದರೆ ಅದೇ ಕರ್ನಾಟಕದಲ್ಲಿ ಮರಾಠಿ ವಿದ್ಯಾರ್ಥಿಗಳಿಗೆ (ಬೆಳಗಾವಿಯಲ್ಲಿ) ಅನೇಕ ಸವಲತ್ತುಗಳು ದೊರೆಯುವಂತೆ ಅವಕಾಶಗಳನ್ನು ಮಾಡಿಕೊಟ್ಟಿದ್ದೇವೆ. ಇದರ ವಿರುದ್ಧ ರಾಜ್ಯದಲ್ಲಿರುವ ಕನ್ನಡಿಗರ ಜೊತೆ ಸೊಲ್ಲಾಪುರದ ಕನ್ನಡಿಗರೆಲ್ಲರೂ ಒಟ್ಟಿಗೆ ಸೇರಿ ಚಳವಳಿ ಪ್ರಾರಂಭಿಸಿದರು. ಈ ಚಳವಳಿಯು ವೀರೇಂದ್ರಪಾಟೀಲ್‌ರವರ ಸರ್ಕಾರಕ್ಕೆ ಒಂದು ಸವಾಲಾಗಿಯೇ ಮಾರ್ಪಟ್ಟಿತು. ಆಗ ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಗಳೆರಡಕ್ಕೂ ಮಾತುಕತೆಯು ನಡೆದು ಈ ಕೆಳಕಂಡ ಪ್ರದೇಶಗಳನ್ನು ಬಿಟ್ಟುಕೊಡಬೇಕೆಂದು ಮಹಾರಾಷ್ಟ್ರ ಕೇಳಿಕೊಂಡಿತು. ಆದರೆ ಅದು ಕೈಗೂಡಲಿಲ್ಲ. ಅಂದು ಮಂಡಿಸಿದ್ದ ಮಹಾರಾಷ್ಟ್ರೀಯರ ಬೇಡಿಕೆಗಳೆಂದರೆ :

೧. ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ೨೦.೩೮೯ ಜನಸಂಖ್ಯೆಯುಳ್ಳ ೮೪ ಹಳ್ಳಿಗಳು.

೨. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ೯೬.೯೨೦ ಜನಸಂಖ್ಯೆಯುಳ್ಳ ೨೦೬ ಹಳ್ಳಿಗಳು.

೩. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ೫೦.೬೭೦ ಜನ ಸಂಖ್ಯೆಯುಳ್ಳ ೧೦ ಗ್ರಾಮಗಳು.

೪. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ೧.೮೬.೬೦೧ ಜನಸಂಖ್ಯೆಯುಳ್ಳ ೪೧ ಹಳ್ಳಿಗಳು.

೫. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ೩೦.೪೨೦ ಜನಸಂಖ್ಯೆಯುಳ್ಳ ೧೮ ಹಳ್ಳಿಗಳು.

೬. ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ೯೦.೯೦೩ ಜನಸಂಖ್ಯೆಯುಳ್ಳ ೫೦ ಹಳ್ಳಿಗಳು.

೭. ಉತ್ತರ ಕನ್ನಡ ಜಿಲ್ಲೆಯ ಸೂಪಾ ತಾಲ್ಲೂಕಿನ ೨೮.೫೪೧ ಜನಸಂಖ್ಯೆಯುಳ್ಳ ೧೭೧ ಹಳ್ಳಿಗಳು.

೮. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ೯೧.೮೦೬ ಜನಸಂಖ್ಯೆಯುಳ್ಳ ೧೨೦ ಹಳ್ಳಿಗಳು.

೯. ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ೫೦.೩೦೩ ಜನಸಂಖ್ಯೆಯುಳ್ಳ ೨೮ ಹಳ್ಳಿಗಳು.

೧೦. ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ೭೨.೯೨೮ ಜನಸಂಖ್ಯೆಯುಳ್ಳ ೪೯ ಹಳ್ಳಿಗಳು.

೧೧. ಬೀದರ್ ಜಿಲ್ಲೆಯ ಸಂತಪೂರ್ ತಾಲ್ಲೂಕಿನ ೬೯.೯೯೬ ಜನಸಂಖ್ಯೆಯುಳ್ಳ ೬೯ ಹಳ್ಳಿಗಳು.

೧೨. ಗುಲ್ಬರ್ಗಾ ಜಿಲ್ಲೆಯ ಆಳಂದಾ ತಾಲ್ಲೂಕಿನ ೬.೯೭೮ ಜನಸಂಖ್ಯೆಯುಳ್ಳ ೮ ಹಳ್ಳಿಗಳು.

ಕರ್ನಾಟಕಕ್ಕೆ ಮಹಾರಾಷ್ಟ್ರೀಯರು ತಾವಾಗಿಯೇ ಬಿಟ್ಟುಕೊಡಲು ಒಪ್ಪಿಗೆ ನೀಡಿರುವ ಪ್ರದೇಶಗಳು ಕೇವಲ ಬಂಜರು ಭೂಮಿಗಳು ಮಾತ್ರ. ಇವು ಸದ್ಯಕ್ಕೆ ಯಾವುದೇ ರೀತಿಯ ಪ್ರಯೋಜನಕ್ಕೂ ಬಾರದ ಪ್ರದೇಶಗಳು. ಇವು ಪ್ರತಿವರ್ಷ ಬರಗಾಲಕ್ಕೆ ಒಳಗಾಗುವ ಪ್ರದೇಶಗಳಾಗಿರುತ್ತವೆ. ಅವುಗಳೆಂದರೆ :

೧. ಸೊಲ್ಲಾಪುರ್ ಜಿಲ್ಲೆಯ ಸೊಲ್ಲಾಪುರ ತಾಲ್ಲೂಕಿನ ೧ ಲಕ್ಷ ೨೦ ಸಾವಿರದ ೬೭೯ ಜನಸಂಖ್ಯೆ ಇರುವ ೬೫ ಹಳ್ಳಿಗಳು.

೨. ಸೊಲ್ಲಾಪುರ ಜಿಲ್ಲೆಯ ಮಂಗಳವಾಡ ತಾಲ್ಲೂಕಿನ ೮.೯೨೦ ಜನರಿರುವ ೯ ಹಳ್ಳಿಗಳು.

೩. ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆ ತಾಲ್ಲೂಕಿನ ೧.೭೦.೪೦೩ ಜನಸಂಖ್ಯೆಯಿರುವ ೯೯ ಹಳ್ಳಿಗಳು.

೪. ದಕ್ಷಿಣ ಸತಾರಾ ಜಿಲ್ಲೆಯ ಜಿತ್ ತಾಲ್ಲೂಕಿನ ೫೦,೮೬೭ ಜನಸಂಖ್ಯೆಯುಳ್ಳ ೪೪ ಹಳ್ಳಿಗಳು.

೫. ಕೊಲ್ಲಾಪುರ್ ಜಿಲ್ಲೆಯ ಶಿರೋಳ್ ತಾಲ್ಲೂಕಿನ ೭೦.೬೦೭ ಜನಸಂಖ್ಯೆಯುಳ್ಳ ೧೯ ಹಳ್ಳಿಗಳು.

೬. ಕೊಲ್ಲಾಪುರ್ ಜಿಲ್ಲೆಯ ಗಡಿಂಗ್ಲಜ್ ತಾಲ್ಲೂಕಿನ ೫೭.೦೨೯ ಜನಸಂಖ್ಯೆಯುಳ್ಳ ೨೪ ಗ್ರಾಮಗಳು.

ಆದರೆ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ನ್ಯಾಯವಾಗಿ ಸೇರಬೇಕಾದ ಪ್ರದೇಶಗಳ ಬಗ್ಗೆ ೧೯೫೭ ಮಾರ್ಚ್ ೩೧ ರಂದು ಕರ್ನಾಟಕ ಸರ್ಕಾರವು ಈ ಕೆಳಕಂಡ ಪ್ರದೇಶಗಳ ಬೇಡಿಕೆಯ ಪತ್ರವನ್ನು ಕೇಂದ್ರಕ್ಕೆ ಸಲ್ಲಿಸಿತು. ಅವುಗಳೆಂದರೆ :

೧. ಸೊಲ್ಲಾಪುರ ಪೂರ್ತಿ ನಗರ

೨. ಸಂಪೂರ್ಣವಾಗಿ ಜಿತ್ ತಾಲ್ಲೂಕು

೩. ಸಂಪೂರ್ಣ ದಕ್ಷಿಣ ಸೊಲ್ಲಾಪುರ ತಾಲ್ಲೂಕು

೪. ಕೊಲ್ಲಾಪುರ್ ಜಿಲ್ಲೆಯ ಚಂದಗಡ್ ತಾಲ್ಲೂಕು

೫. ಸಂಪೂರ್ಣ ಅಕ್ಕಲಕೋಟೆ ತಾಲ್ಲೂಕು

ಈ ಎರಡು ರಾಜ್ಯಗಳ ಗಡಿಸಮಸ್ಯೆಗೆ ಸಂಬಂಧಿಸಿದಂತೆ ಅಂತಿಮತೀರ್ಪು ನೀಡಲು ಕೇಂದ್ರ ಸರ್ಕಾರವು ೧೯೬೬ರಲ್ಲಿ ಮಹಾಜನ್‌ರವರ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಿ

ಆ ಸಮಿತಿಯು ೧೯೬೭ರಲ್ಲಿ ಸಲ್ಲಿಸಿದ ವರದಿಯನ್ನು ಪ್ರಕಟಿಸಿತು. ಮಹಾಜನ್ ಅವರು ಸೂಕ್ಷ್ಮವಾಗಿ ಕ್ಷೇತ್ರಕಾರ್ಯ ಮಾಡಿ ಸಲ್ಲಿಸಿದ ವರದಿಯಲ್ಲಿ ಕರ್ನಾಟಕಕ್ಕೆ ಅನೇಕ ಹಾನಿಗಳು ಇದ್ದವು. ಅವುಗಳಲ್ಲಿ ಫಲವತ್ತಾದ ಭೂ ಪ್ರದೇಶ, ಕಲ್ಲಿದ್ದಲಿನ ಗಣಿ ಪ್ರದೇಶ ಮುಂತಾದವುಗಳು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ತಿಳಿಸಿದರು. ಇವುಗಳನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಟ್ಟರೆ ಕರ್ನಾಟಕಕ್ಕೆ ಅಪಾರ ಹಾನಿ ಉಂಟಾಗುವುದರಲ್ಲಿ ಎರಡು ಮಾತಿಲ್ಲ. ಮಹಾಜನ್ ವರದಿಯ ಪ್ರಕಾರ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಬಿಟ್ಟುಕೊಡಲು ಶಿಫಾರಸ್ಸಾದ ಭೂ ಪ್ರದೇಶವೆಂದರೆ :

೧. ಖಾನಾಪುರ ತಾಲ್ಲೂಕಿನ ವ್ಯಾಪಾರಿ ಕೇಂದ್ರವಾದ ನಂದಗಡ ಅಲ್ಲದೆ ಅರಣ್ಯ ಹಾಗೂ ಕಬ್ಬು ಹೆಚ್ಚಾಗಿ ಬೆಳೆಯುವ ಪ್ರದೇಶ. ಈ ತಾಲ್ಲೂಕಿನ ಪಶ್ಚಿಮ ಹಾಗೂ ದಕ್ಷಿಣ ಭಾಗದ ಭತ್ತ ಬೆಳೆಯುವ ಭೂ ಪ್ರದೇಶ.

೨. ಬೆಳಗಾವಿ ತಾಲ್ಲೂಕಿನ ಪಶ್ಚಿಮ ಭಾಗ.

೩. ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಮತ್ತು ಸುತ್ತಮುತ್ತಲಿನ ಪ್ರದೇಶ.

೪. ಲೋಂಡಾ (ರೈಲ್ವೆಗೆ ಉಪಯೋಗಿಸುವ ಕಲ್ಲಿದ್ದಲಿನ ಗಣಿ ಪ್ರದೇಶ).

೫. ಪ್ರಮುಖವಾಗಿ ೭೫.೦೦೦ ಎಕರೆ ನೀರಾವರಿಯಾಗಬಹುದಾದ ಫಲವತ್ತಾದ ಭೂಮಿ ಹಾಗೂ ಮಲಪ್ರಭ ಮೇಲ್ದಂಡೆ ಯೋಜನೆ

೬. ೫.೯೦೦ ಎಕರೆ ನೀರಾವರಿಯಾಗಬಹುದಾದ ತಟ್ಟಿಹಳ್ಳಿ ಯೋಜನೆ.

೭. ೬೦೦ ಎಕರೆ ನೀರಾವರಿಯಾಗಬಹುದಾದ ಚೌನಕಟ್ಟಿ ಕೆರೆ ಯೋಜನೆ.

೮. ಬೆಳಗಾವಿ ತಾಲ್ಲೂಕು ರಕ್ಕಸಕೊಪ್ಪದಲ್ಲಿ ಒಂದು ಕೋಟಿ ರೂಪಾಯಿಯ ವೆಚ್ಚದಿಂದ ನೀರು ಸರಬರಾಜು ಕೇಂದ್ರವನ್ನು ನಿರ್ಮಿಸಿ ಅಲ್ಲಿಂದಲೇ ಬೆಳಗಾವಿ ನಗರಕ್ಕೆ ನೀರು ಪೂರೈಸಲಾಗುವುದು. ಈ ಹಳ್ಳಿಯು ಕರ್ನಾಟಕ ಮತ್ತು ಮಹಾರಾಷ್ಟ್ರಗಳೆರೆಡಕ್ಕೂ ಇಂದು ನೀರು ಸರಬರಾಜಿನ ಕೇಂದ್ರ. ಈ ಪ್ರದೇಶವು ಮಹಾರಾಷ್ಟ್ರಕ್ಕೆ ಸೇರಿಸಲು ಶಿಫಾರಸ್ಸಾಗಿರುತ್ತದೆ.

೯. ಆಗಿನ ಕಾಲದಲ್ಲಿಯೇ ಒಂದು ಕೋಟಿ ರೂಪಾಯಿಗೂ ಹೆಚ್ಚು ಖರ್ಚುಮಾಡಿ ಕಟ್ಟಿಸಿದ ಹಿಂಡಲಗಿ ಜೈಲು ಮಹಾರಾಷ್ಟ್ರಕ್ಕೆ.

೧೦. ನಿಪ್ಪಾಣಿ ನಗರ ಮತ್ತು ಸುತ್ತಮುತ್ತಲ ೪೦ ಹಳ್ಳಿಗಳು. ಮಹಾರಾಷ್ಟ್ರಕ್ಕೆ ಈ ಭಾಗದಲ್ಲಿ ಅಧಿಕವಾಗಿ ಬೆಳೆಯುವ ತಂಬಾಕು ಮತ್ತಿತರ ಬೆಳೆಗಳ ಮಾರಾಟದಿಂದ ನಿಪ್ಪಾಣಿ ಮಾರುಕಟ್ಟೆಯೊಂದರಿಂದಲೆ ರಾಜ್ಯಕ್ಕೆ ಸಂದಾಯವಾಗುವ ೩೦ ಕೋಟಿ ರೂ.ಗಳು ಮಹಾರಾಷ್ಟ್ರಕ್ಕೆ. (೧೯೯೮ರ ಅಂಕಿ ಅಂಶಗಳ ಪ್ರಕಾರ)

೧೧. ಕರ್ನಾಟಕ ಲಿಬರಲ್ ಎಜುಕೇಶನ್ ಸೊಸೈಟಿಯ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಮಹಾರಾಷ್ಟ್ರಕ್ಕೆ.

ಆಧಾರ : ಮಹಾಜನ ವರದಿಯು ಕಾರ್ಯಗತವಾಗದಿದ್ದರೂ ಕಾಸರಗೋಡು ಕೇರಳದಲ್ಲಿ ಉಳಿಯದು- ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗದು.

ಈ ಮೇಲ್ಕಂಡ ಅಂಶಗಳನ್ನು ಗಮನಿಸಿದರೆ ಕರ್ನಾಟಕಕ್ಕೆ ಬರಬಹುದಾದ ಯಾವೊಂದು ಪ್ರದೇಶವನ್ನು ಸಹ ಮಹಾಜನ್‌ರವರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವರ್ಗಾಯಿಸುವ ಧೈರ್ಯವನ್ನು ಮಾಡಲಿಲ್ಲ. ಅಷ್ಟೇ ಅಲ್ಲದೆ ಮಹಾರಾಷ್ಟ್ರೀಯರಿಗೆ ಬೇಡವಾಗಿದ್ದಂತಹ ಹಳ್ಳಿಗಳನ್ನು ಕರ್ನಾಟಕಕ್ಕೆ ವರ್ಗಾಯಿಸಿ, ಕರ್ನಾಟಕದ ಸಂಪತ್ಭರಿತ ಪ್ರದೇಶಗಳನ್ನು (ಬೆಳಗಾವಿಯನ್ನು ಹೊರತುಪಡಿಸಿ) ಮಹಾರಾಷ್ಟ್ರಕ್ಕೆ ವರ್ಗಾಯಿಸುವ ಶಿಫಾರಸ್ಸುಗಳ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದರೆಂದರೆ ತಪ್ಪಾಗಲಾರದು. ಇನ್ನೂ ಇಂದಿಗೂ ಮಹಾರಾಷ್ಟ್ರೀಯರು ತಮ್ಮದೆಂದು ಕೇಳುತ್ತಿರುವ ಬೆಳಗಾವಿಯನ್ನು ಪಡೆಯುವುದಂತೂ ಕನಸಿನ ಮಾತೆ ಸರಿ. ಪ್ರಜ್ಞಾಶೀಲ ಮಹಾರಾಷ್ಟ್ರೀಯರೇ ಈ ವಾದವನ್ನು ಸ್ವಲ್ಪವೂ ಒಪ್ಪುವುದಿಲ್ಲ. ೧೯೫೭ರಲ್ಲಿ ಮಹಾರಾಷ್ಟ್ರ ಸರ್ಕಾರವು ಬೆಳಗಾವಿ ಪ್ರಶ್ನೆಗೆ ಚಾಲನೆ ನೀಡಿ ವಾಸ್ತವವಲ್ಲದ ಬೇಡಿಕೆಯನ್ನು ಮಹಾರಾಷ್ಟ್ರೀಯರ ಮನಸ್ಸಿನ ಮೇಲೆ ಮೂಡಿಸಿತು. ಯಾವುದೇ ರೀತಿಯಲ್ಲಿಯೂ ವಾದಗ್ರಸ್ತವಲ್ಲದ ಬೆಳಗಾವಿ ನಗರವನ್ನು ಅವರ ಪುಂಡಾಟಿಕೆಯ ಹಾಗೂ ಭಾಷಾ ಪ್ರಭುತ್ವವನ್ನು ಹೇರುವ ದುರಾಗ್ರಹದ ಚಟುವಟಿಕೆಗಳಿಗೆ ಕೇಂದ್ರ ಸ್ಥಾನವಾಗಿರುವಂತೆ ಮಾಡಿರುವುದು ಇಂದಿನ ಮಹಾರಾಷ್ಟ್ರೀಯರ ಅಲ್ಲಿನ ರಾಜಕೀಯ ಮುಖಂಡರ ಸ್ವಾರ್ಥ ಹಾಗೂ ದುರಾಸೆಯಿಂದಲೇ ಎಂದು ಧೈರ್ಯವಾಗಿ ಹೇಳಬಹುದು.

ಮೊದಲೇ ನಾನು ಉಲ್ಲೇಖಿಸಿರುವ ಹಾಗೆ ಲೋಕಮಾನ್ಯ ತಿಲಕರು ಬೆಳಗಾವಿಗೆ ಬಂದಾಗಲೆಲ್ಲ ಕರ್ನಾಟಕದ ಬೆಳಗಾವಿಯು ರಾಷ್ಟ್ರೀಯತೆಯ ಭದ್ರಕೋಟೆ ಇದ್ದಂತೆ ಎಂದು ೧೯೧೬ನೇ ಇಸ್ವಿಯಲ್ಲಿಯೇ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದ್ದಾರೆ. ಬೆಳಗಾವಿ ವಿಷಯದ ಬಗ್ಗೆ ತಮ್ಮ 'ಕೇಸರಿ' ಎಂಬ ಪ್ರಸಿದ್ಧ ವಾರಪತ್ರಿಕೆಯಲ್ಲಿ ಸಾಕಷ್ಟು ಲೇಖನ ಬರೆದು ಜನರಿಗೆ ತಿಳಿಸಿದ್ದಾರೆ. ಇತಿಹಾಸವನ್ನು ತಿರುವಿ ನೋಡುವುದಾದರೆ ಪೇಶ್ವೆಯವರ ಆಡಳಿತದಲ್ಲಿ ಒಳಪಟ್ಟಿದ್ದಂತಹ ಬೆಳಗಾವಿ, ಸಾಂಗಲಿ, ಮಿರಜ್, ಕುರಂದವಾಡ, ಮುಂತಾದವುಗಳಲ್ಲಿ ಮರಾಠಿ ಭಾಷೆಯು ಅಭಿವೃದ್ಧಿ ಹೊಂದಲು ಹೆಚ್ಚಿನ ಅವಕಾಶ ವಾಯಿತೆಂದು ತಿಳಿದುಬರುತ್ತದೆ. ಇದನ್ನೇ ಬಂಡವಾಳವಾಗಿಸಿಕೊಂಡ ಮರಾಠಿಗರು ಭಾಷೆ ಬೆಳವಣಿಗೆಯ ದೃಷ್ಟಿಯನ್ನು ಇಟ್ಟುಕೊಂಡು ಅನೇಕ ರೀತಿಯ ಜನರು ಬಂದರು. ಅವರಲ್ಲಿ ವ್ಯಾಪಾರಸ್ಥರು, ವಕೀಲರು, ವೈದ್ಯರು ಹಾಗೂ ಅನೇಕ ರಾಜಕೀಯ ಜನರು ಬೆಳಗಾವಿಗೆ ಬಂದು ಅದನ್ನೇ ತಮ್ಮ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡಿದ್ದಲ್ಲದೆ, ಇದೇ ಇಂದು ಕನ್ನಡದ ಬೆಳವಣಿಗೆಯು ಕುಂದುತ್ತಿರುವುದಕ್ಕೆ ಹಾಗೂ ಬೆಳಗಾವಿಯನ್ನೇ ಮಹಾರಾಷ್ಟ್ರಕ್ಕೆ ಸೇರಿಸ ಬೇಕೆಂದು ಹೋರಾಡುತ್ತಿರುವುದಕ್ಕೆ ಕಾರಣವಾಗಿದೆ. ಈ ಮಧ್ಯೆ ಬೆಳಗಾವಿ ನಗರದ ಜನಸಂಖ್ಯೆಯು ವರ್ಷವರ್ಷಕ್ಕೆ ಅಧಿಕವಾಗತೊಡಗಿದೆ. ಇದರಲ್ಲಿ ಮರಾಠಿಗರೇ ಅಧಿಕವಾಗಿ ಹೆಚ್ಚುತ್ತಿರುವುದು ಕಂಡುಬರುತ್ತದೆ. ಬೆಳಗಾವಿಯು ಜನಸಂಖ್ಯೆಯು ಕೆಲವು ಆಧಾರದ ಮೇಲೆ ಈ ಕೆಳಗಿನ ರೀತಿಯಲ್ಲಿ ಬೆಳೆಯುತ್ತಾ ಬರುತ್ತಿರುವುದನ್ನು ಕಾಣಬಹುದಾಗಿದೆ.

ಇದಕ್ಕೆ ಅನೇಕ ಕಾರಣಗಳಿರಬಹುದು. ಬೆಳಗಾವಿಯು ಉತ್ತಮ ಶೈಕ್ಷಣಿಕ ಕೇಂದ್ರವಾಗಿ ಬೆಳೆಯುತ್ತಿರುವುದೇ ಆಗಲಿ ಅಥವಾ ಕೈಗಾರಿಕಾ ನಗರವಾಗಿ ಮುಂದುವರಿಯುತ್ತಿರುವುದೇ

ಬೆಳಗಾವಿಯಲ್ಲಿನ ಮರಾಠಿ ಜನರ ಹೆಚ್ಚಳ ಸೂಚಿಸುವ ಪಟ್ಟಿ

೧೮೮೧	೩೨,೬೯೭
೧೯೩೧	೬೪,೩೩೮
೧೯೪೧	೮೮,೯೯೪
೧೯೫೧	೧,೨೦,೨೧೯
೧೯೬೧	೪,೯೦,೬೩೨
೧೯೭೧	೭,೩೬,೯೧೪
೧೯೯೧	೧೮,೬೪,೯೬೪

ಇರಬಹುದು. ಆದರೆ ಇದೆಲ್ಲಕ್ಕಿಂತಲೂ ಮಿಗಿಲಾಗಿ ಮಹಾರಾಷ್ಟ್ರೀಯರು ತಮ್ಮ ಭಾಷಿಕರನ್ನು ಹೆಚ್ಚಿಸಿ ಭಾಷಾ ಪ್ರಭುತ್ವದ ಆಧಾರದ ಮೇಲೆ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಪಡೆಯಬಹುದೆಂಬುದೇ ಆಗಿದೆ. ೧೯೬೧ರಲ್ಲಿ ೭.೭೬.೯೧೪ ಇದ್ದಂತಹ ಜನಸಂಖ್ಯೆಯು ಕೇವಲ ೨೦ ವರ್ಷಗಳಲ್ಲಿ (೧೯೯೧ರಲ್ಲಿ) ೧೮,೬೪,೯೬೪ರಷ್ಟು ದಿಢೀರನೆ ಏರಿದೆ ಎಂದರೆ ಹೇಗೆ ಸಾಧ್ಯ. ಈ ರೀತಿಯ ದೊಡ್ಡ ಪ್ರಮಾಣದ ಜನಸಂಖ್ಯೆಯ ಹೆಚ್ಚಳಕ್ಕೆ ಮಹಾರಾಷ್ಟ್ರದಿಂದ ಬಂದು ಬೆಳಗಾವಿಯಲ್ಲಿ ನೆಲಸಿರುವ ವಿದ್ಯಾರ್ಥಿಗಳು ಹಾಗೂ ಸೈನಿಕರ ಪಾತ್ರ ಪ್ರಮುಖವಾಗಿರದೆ ಇರದು. ಈಗಾಗಲೇ ಮಹಾರಾಷ್ಟ್ರೀಯರ ಸೈನ್ಯ ದಳವು ಬೆಳಗಾವಿಯಲ್ಲಿಯೇ ಇರುವುದರಿಂದ ಇದನ್ನೆಲ್ಲವನ್ನು ಒಟ್ಟುಗೂಡಿಸಿ ಬೆಳಗಾವಿಯನ್ನು ಪಡೆಯಲು ಹವಣಿಸುತ್ತಿದ್ದಾರೆ.

ಮೇಲಿನವುಗಳಿಗೆಲ್ಲ ಕಡಿವಾಣ ಹಾಕಿ ನಾಡಿನ ಭಾಷೆ, ಗಡಿ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ದೃಷ್ಟಿಯಿಂದಲೇ ನಮ್ಮ ನಾಡಿನಲ್ಲಿ ಪ್ರಸಿದ್ಧ ಸಂಘ, ಸಂಸ್ಥೆಗಳು ಪ್ರಾರಂಭವಾದವು. ಅವುಗಳಲ್ಲಿ ಪ್ರಮುಖವಾದುದು ಧಾರವಾಡದಲ್ಲಿರುವ 'ಕರ್ನಾಟಕ ವಿದ್ಯಾವರ್ಧಕ ಸಂಘ' ಹಾಗೂ ಬೆಂಗಳೂರಿನಲ್ಲಿರುವ 'ಕನ್ನಡ ಸಾಹಿತ್ಯ ಪರಿಷತ್ತು'ಗಳು

೨.೩. ಕರ್ನಾಟಕ ವಿದ್ಯಾವರ್ಧಕ ಸಂಘ

ಕನ್ನಡ ನಾಡು ನುಡಿಗಳ ಅಭಿಮಾನವನ್ನು ಜನರಲ್ಲಿ ಜಾಗೃತಗೊಳಿಸಲು ಶ್ರಮಿಸಿದ ಪ್ರಮುಖ ಸಂಸ್ಥೆಯೆಂದರೆ ಕರ್ನಾಟಕ ವಿದ್ಯಾವರ್ಧಕ ಸಂಘ. ಇದು ೧೮೯೦ನೇ ಜುಲೈ ೨೦ ರಂದು ಧಾರವಾಡದಲ್ಲಿ ಸರ್ವಶ್ರೀ ಗುರುಸಿದ್ಧಪ್ಪ ಗಿಲಗಂಜಿ, ಶ್ರೀನಿವಾಸ ರಾವ್‌ರೊದ್ದ, ಶಾಂತವೀರಪ್ಪ ಮೆಣಸಿನಕಾಯಿ, ಧೋಂಡೋನರಸಿಂಹ ಮುಳಬಾಗಿಲ, ವೆಂಕಟರಂಗೋ ಕಟ್ಟಿ, ಡೆಪ್ಯೂಟಿ ಚನ್ನಬಸಪ್ಪ, ಶ್ಯಾಮರಾವ್ ಅವರುಗಳ ಪ್ರಯತ್ನದ ಫಲವಾಗಿ ಸ್ಥಾಪನೆಯಾಗಿ ಕನ್ನಡದ ಗ್ರಂಥಕರ್ತರಿಗೆ ಪ್ರೋತ್ಸಾಹ ನೀಡುತ್ತಾ, ಕನ್ನಡ ಸಂಸ್ಕೃತಿ ಮತ್ತು ಇತಿಹಾಸಗಳ ಬಗೆಗೆ ಸಂಶೋಧನೆ, ಭಾಷಾವಾರು ಪ್ರಾಂತ್ಯರಚನೆಯ ಅವಧಿಯಲ್ಲಿ ಕನ್ನಡ ಪ್ರದೇಶಗಳಾಗಿದ್ದರೂ ಸಹ ನೆರೆಯ ರಾಜ್ಯಗಳಲ್ಲಿ ಸೇರಸಲ್ಪಟ್ಟಂತಹ ಪ್ರದೇಶಗಳನ್ನು ಪಡೆಯಲು

ಚಳವಳಿ, ಮುಂತಾದಂತಹ ಪ್ರಮುಖ ಉದ್ದೇಶಗಳನ್ನು ಹೊಂದಿ ಪ್ರಗತಿಪರವಾಗಿ ಮುಂದುವರಿಯುತ್ತಿದೆ.

ಅಂದು ಮುಂಬಯಿ ಕರ್ನಾಟಕದಲ್ಲಿ ಮರಾಠಿ, ಹೈದರಾಬಾದ್ ಕರ್ನಾಟಕದಲ್ಲಿ ಉರ್ದು, ತೆಲುಗು, ಮದ್ರಾಸು ಕರ್ನಾಟಕದಲ್ಲಿ ತಮಿಳು, ಭಾಷೆಗಳ ಪ್ರಭಾವ ಬಲವಾಗತೊಡಗಿತು. ಕನ್ನಡ ಪ್ರದೇಶದಲ್ಲಿಯೇ ಕನ್ನಡ ಕಡೆಗಣಿಸಲ್ಪಟ್ಟಿತು. ಇಂತಹ ಪರಿಸ್ಥಿತಿಯಿಂದಲೂ ಸಹ ಈ ಪ್ರತಿಷ್ಠಿತ ಸಂಸ್ಥೆಯು ಕನ್ನಡದ ಪುನರುಜ್ಜೀವನಕ್ಕಾಗಿ ನಡುಕಟ್ಟಿ ನಿಂತು ದುಡಿಯಿತೆನ್ನಬಹುದು. ಕನ್ನಡದ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆ ಪ್ರೇಮವನ್ನು, ಭಾಷಾ ಪ್ರಭುತ್ವವನ್ನು, ಗಡಿನಾಡಿನ ಬಗ್ಗೆ ತಿಳುವಳಿಕೆಯನ್ನು ಕರ್ನಾಟಕದ ಸಂಕ್ಷಿಪ್ತ ಪರಿಚಯ ತಿಳಿಸುವ ದೃಷ್ಟಿಯಿಂದ ವಾಕ್ ಸ್ಪರ್ಧೆಗಳನ್ನು ಏರ್ಪಡಿಸಿ ತಿಳುವಳಿಕೆ ಮೂಡಿಸಿತು. ಭಾಷಾವಾರು ಪ್ರಾಂತ್ಯ ರಚನೆಯ ಅವಧಿಯಲ್ಲಿ ಹೊರ ರಾಜ್ಯಗಳಲ್ಲಿಯೇ ಉಳಿಸಿದ ಕನ್ನಡ ಪ್ರದೇಶಗಳನ್ನು ಪುನಃ ಕರ್ನಾಟಕದ ಭೂಪಟದಲ್ಲಿ ಸೇರಿಸಲು ದುಡಿದ ಸಂಸ್ಥೆ. ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯ ಸಂಬಂಧದಲ್ಲಿ ಈ ಸಂಸ್ಥೆಯ ಕಾರ್ಯಕರ್ತರು ಗಣನೀಯ ಪಾತ್ರವಹಿಸಿದರು. ಇಂದಿಗೂ ಸಹ ಹಿರಿಯ ಪತ್ರಕರ್ತರಾದಂತಹ ಡಾ. ಪಾಟೀಲ್ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಬೆಳೆದುಬರುತ್ತಿರುವ ಸಂಘವು ಕನ್ನಡನಾಡು, ನುಡಿಗಳ ಪುನರುಜ್ಜೀವನದ ಇತಿಹಾಸದಲ್ಲಿ ವಹಿಸಿಕೊಂಡು ಬರುತ್ತಿರುವ ಪಾತ್ರ ಸ್ಮರಣೀಯವಾಗಿದೆ. ಶ್ರೀಯುತರಾದ ಕಡಪ ರಾಘವೇಂದ್ರರಾಯರು, ಆಲೂರು ವೆಂಕಟರಾಯರು, ಹೊನ್ನಾಪುರಮಠ ಗದಿಗೆಯ್ಯನವರು, ಮುದವೀಡಕರರು ಹಾಗೂ ನರಗುಂದಕರರು ಮೊದಲಾದವರ ಪ್ರಯತ್ನದ ಫಲವಾಗಿ ೧೯೧೬ರಲ್ಲಿ 'ಕರ್ನಾಟಕ ಸಭೆ'ಯು ಧಾರವಾಡದಲ್ಲಿ ಸ್ಥಾಪನೆಯಾಗಿ ಅಂದು ಕರ್ನಾಟಕ ಏಕೀಕರಣದ ಕಲ್ಪನೆಗೆ ಒಂದು ಹೊಸಸ್ವರೂಪ ದೊರೆಯುವಂತೆ ಮಾಡಿತ್ತೆನ್ನಬಹುದು.

'ಕರ್ನಾಟಕ ರಾಜಕೀಯ ಪರಿಷತ್ತು' ಜನ್ಮತಾಳಿ ಅದರ ಮೊದಲ ಅಧಿವೇಶನವು ೧೯೨೦ರಲ್ಲಿ ದಿವಾನ್ ಮಾಧವರಾಯರ ಅಧ್ಯಕ್ಷತೆಯಲ್ಲಿ ಸೇರಿ ಏಕೀಕೃತ ಕರ್ನಾಟಕದ ನಿರ್ಮಾಣಕ್ಕೆ ಹೋರಾಟ ಮಾಡುತ್ತಾ ಬಂದಿತು.

೨.೪. ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡಿಗರ ಸಾಂಸ್ಕೃತಿಕ ಜೀವನದ ಉಸಿರು. "ಕರ್ನಾಟಕ ಪರಿಷ್ಕರಣ ಮತ್ತು ಕರ್ನಾಟಕ ಗ್ರಂಥಾಭಿವೃದ್ಧಿ"ಗಾಗಿ ಕನ್ನಡದ ಮನೆಯಲ್ಲಿ ಕನ್ನಡವು ಯಜಮಾನಿಯಾಗಿರಬೇಕು. ರಾಜ್ಯದ ಹೊರಗಿರುವ ಕನ್ನಡದ ನೆಲೆಗಳನ್ನು ಮತ್ತೆ ಹೋರಾಡಿ ನಾಡಿನ ಭೂಪಟದ ಒಳಗಡೆ ಸೇರುವಂತೆ ಮಾಡುವ ಏಕೈಕ ದೃಷ್ಟಿಯಿಂದಲೇ ಹುಟ್ಟಿದ ಸಂಸ್ಥೆ. ೧೯೧೫ ಮೇ ೩ ರಂದು ಬೆಂಗಳೂರಿನಲ್ಲಿ ಏರ್ಪಾಡಾಗಿದ್ದಂತಹ ಒಂದು ಸಮ್ಮೇಳನಕ್ಕೆ ಭಾಗವಹಿಸಲು ಕನ್ನಡನಾಡಿನ ಎಲ್ಲೆಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಆ ಸಮ್ಮೇಳನದಲ್ಲಿ ಸ್ಥಾಪಿತವಾದಂತಹ ಸಂಸ್ಥೆಯೇ ಈಗ ಕನ್ನಡ ಸಾಹಿತ್ಯ ಪರಿಷತ್ತು ಎಂಬ ಹೆಸರುಳ್ಳ ಕರ್ನಾಟಕ ಸಾಹಿತ್ಯ ಪರಿಷತ್ತು.

ಕನ್ನಡದಲ್ಲಿ ಉತ್ತಮ, ಉಪಯುಕ್ತ ಸಾಹಿತ್ಯ ರಚನೆ, ಸಾಹಿತಿಗಳಿಗೆ ಸಹಾಯಮಾಡಿ ಉತ್ತೇಜನ ನೀಡುವುದು, ಒಳ್ಳೆಯ ಗ್ರಂಥಗಳ ಪ್ರಕಟಣೆ, ಪ್ರಾಚೀನ ಸಾಹಿತ್ಯವನ್ನು ಕುರಿತು

ಸಂಶೋಧನೆ, ಹಾಗೂ ಕರ್ನಾಟಕದ ಮೇರೆಗಳನ್ನು ಗುರ್ತಿಸಿ ಗಡಿನಾಡಿನ ಕನ್ನಡದ ಜನತೆಗೆ ಕನ್ನಡ ನಾಡಿನ ಹಿರಿಮೆ, ಅದರ ಪ್ರಾಚೀನ ಚರಿತ್ರೆಯನ್ನು ತಿಳಿಸುವಂತಹ ಕೆಲಸ ಮಾಡಿಕೊಂಡು ಬರುತ್ತಿದೆ. ಇಂದು ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯದ ೨೭ ಜಿಲ್ಲಾ ಕೇಂದ್ರಗಳಲ್ಲಿಯೂ ನಂತರ ೧೭೫ ತಾಲ್ಲೂಕು ಕೇಂದ್ರಗಳಲ್ಲಿಯೂ ತನ್ನ ಶಾಖೆಯನ್ನು ಹೊಂದಿದ್ದು ಪ್ರತಿವರ್ಷವು ಸಹ ಎಲ್ಲ ಕೇಂದ್ರದಲ್ಲಿಯೂ ಕನ್ನಡದ ಅಭಿವೃದ್ಧಿ ಹಾಗೂ ರಕ್ಷಣೆಯ ಕಾರ್ಯವನ್ನು ಕೈಗೊಂಡು ಬರುತ್ತಿದೆ. ಪ್ರತಿವರ್ಷ ಈ ಸಂಸ್ಥೆಯಿಂದ ನಡೆಯುವ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ'ದಲ್ಲಿ ಗಡಿನಾಡಿನ ಬಗ್ಗೆ ಬೆಳಕು ಚೆಲ್ಲುವ ಒಂದು ವಿಚಾರ ಗೋಷ್ಠಿಯನ್ನು ಏರ್ಪಡಿಸಿ ವಿದ್ವಾಂಸರಿಂದ ಚರ್ಚಿಸಿ ಸಮಸ್ಯೆಗಳನ್ನು ನಿವಾರಿಸಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತಲಿದೆ.

೧೯೬೯ರಲ್ಲಿ ಪ್ರಸಿದ್ಧ ಸಾಹಿತಿ ಜಿ. ನಾರಾಯಣ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿ ೧ನೇ ಮಾರ್ಚ್ ೧೯೭೦ರಲ್ಲಿ 'ಕರ್ನಾಟಕ ಗಡಿಸಮಸ್ಯೆ' ಎಂಬ ವಿಷಯ ಕುರಿತು ವಿಚಾರ ಸಂಕೀರ್ಣವನ್ನು ತಮ್ಮ ಅಧ್ಯಕ್ಷತೆಯಲ್ಲಿಯೇ ನಡೆಸಿದರು. ವಿಚಾರ ಸಂಕೀರ್ಣದಲ್ಲಿ ಹಿರಿಯ ಸಾಹಿತಿಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ತಿ. ತಾ. ಶರ್ಮ, ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ, ಅ.ನ.ಕೃ. ಅವರುಗಳು ಭಾಗವಹಿಸಿ ಗಡಿನಾಡಿನ ಹಿರಿಮೆಯ ಬಗ್ಗೆ ಮಹತ್ವದ ಉಪನ್ಯಾಸ ನೀಡಿ ಗಡಿನಾಡಿನ ಜನರನ್ನಲ್ಲದೆ ಕತ್ತಲೆಯಲ್ಲಿ ಮುಳುಗಿದ್ದಂತಹ ಕರ್ನಾಟಕದ ಪ್ರತಿಯೊಬ್ಬ ಜನತೆಯನ್ನು ಎಚ್ಚರಗೊಳಿಸಿದರು. ಈ ವಿಚಾರಸಂಕೀರ್ಣದಲ್ಲಿ ಮಾಸ್ತಿಯವರು ಬೆಳಗಾವಿಯನ್ನು ಕುರಿತು ಮಾತನಾಡುವಾಗ "ನೆಲ ಅಥವಾ ಅದರ ಮೇಲಿರುವ ಮರಗಳ ಪ್ರಶ್ನೆಯಲ್ಲ ಅಥವಾ ಆ ಜಮೀನಿನ ಮೇಲೆ ಇರುವ ಬೆಳೆಯೂ ಅಲ್ಲ (ಜನ). ಇದು ಜನಗಳ ಪ್ರಶ್ನೆ.* ಅವರು ಏನು ಹೇಳುತ್ತಾರೆಂದು ಸರ್ಕಾರವು ಕಿವಿಗೆ ಹಾಕಿಕೊಳ್ಳುವುದು ಉತ್ತಮವೆಂದು ತಿಳಿಸಿ ವಿಚಾರ ಸಂಕೀರ್ಣದಲ್ಲಿ ಮೂಡಿಬಂದಂತಹ ಸಲಹೆಗಳನ್ನು ಟಿಪ್ಪಣಿ ಮಾಡಿ ಅಂದಿನ ಪ್ರಧಾನಿಗೆ (ಶ್ರೀಮತಿ ಇಂದಿರಾಗಾಂಧಿ) ಪತ್ರಬರೆದು ತಿಳಿಸಿದರು. ಗಡಿ ಸಮಸ್ಯೆಯನ್ನು ಇತ್ಯರ್ಥ ಮಾಡಲು ಸೇನೆಗಳನ್ನು ತೆಗೆದುಕೊಂಡು ಮುತ್ತಿಗೆ ಹಾಕುವುದರ ಮೂಲಕ ಅಥವಾ ಹಿಂಸಾತ್ಮಕ ಚಳವಳಿಯನ್ನು ನಡೆಸುವುದರ ಮೂಲಕ ಬಗೆಹರಿಸಲಾಗುವುದೆಂಬುದನ್ನು ಎಲ್ಲ ಉಪನ್ಯಾಸಕರೂ ಸಹ ಖಂಡಿಸಿದ್ದರು. ಈ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿದ್ದಂತಹ ಜಿ. ನಾರಾಯಣ ಅವರು ಗಡಿಸಮಸ್ಯೆಯ ಸಂಬಂಧವಾಗಿ ೬ ಅಂಶಗಳ ಒಂದು ನಿರ್ಣಯವನ್ನು ಮುಂದಿಟ್ಟರು. ಅವುಗಳು :

೧. ಕರ್ನಾಟಕದ ಶಾಸನ ಸಭೆ ಮತ್ತು ಸರ್ಕಾರ ಮಹಾಜನ್ ಆಯೋಗದ ವರದಿಯನ್ನು ಕಾರ್ಯಗತ ಮಾಡಲು ಸಮ್ಮತಿಸುವಂತೆ ಮಾಡಿರುವ ನಿರ್ಣಯಗಳನ್ನು ಎಲ್ಲ ಕನ್ನಡಿಗರೂ ಬೆಂಬಲಿಸಬೇಕು.

೨. ಇದಕ್ಕೆ ವಿರೋಧವಾಗಿರುವವರು ಯಾವ ಕ್ಷೇತ್ರದವರೇ ಆಗಿರಲಿ ಅಂಥವರ ಮನವೊಲಿಸುವಂತೆ ಪ್ರಯತ್ನಿಸಬೇಕು.

---

* ಕನ್ನಡ ಸಾಹಿತ್ಯ ಪತ್ರಿಕೆ, ಏಪ್ರಿಲ್ ೧೯೭೦

೩. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದವರು ಮಹಾಜನ್ ಆಯೋಗದ ವರದಿಯ ಜಾರಿಯ ಬಗಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯದ ಪತ್ರ ಬರೆಯಬೇಕು.

೪. ಕನ್ನಡ ಸಂಘಗಳು, ಸಾಹಿತಿಗಳು, ಕಾರ್ಯಕರ್ತರು ಒಟ್ಟಾಗಿ ಸಭೆ ಸಮ್ಮೇಳನಗಳನ್ನು ನಡೆಸಿ ಜನಜಾಗೃತಿಯನ್ನುಂಟು ಮಾಡಬೇಕು ಹಾಗೂ ಮಹತ್ವದ ನಿರ್ಣಯವನ್ನು ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು.

೫. ಕನ್ನಡ ನಾಡಿನಲ್ಲಿರುವ ಇತರೆ ಭಾಷೆಯವರು ಮತ್ತು ಪ್ರಾಂತದವರು ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿಲುವಿಗೆ ತಮ್ಮ ನಿಷ್ಠೆಯನ್ನು ತೋರಿಸಬೇಕು.

೬. ಈ ಎಲ್ಲ ಕಾರ್ಯಕ್ರಮಗಳೂ ಸಹ ಅಹಿಂಸಾತ್ಮಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು.

ಇದಕ್ಕೆ ನಾಡಿನಾದ್ಯಂತ ಸಂಪೂರ್ಣ ಬೆಂಬಲ ದೊರಕಿ ಗಡಿನಾಡಿನ ಪ್ರದೇಶಗಳ ಉಳಿವಿಗಾಗಿ ನಾಡಿನಾದ್ಯಂತ ಸಾಹಿತಿಗಳು, ಚಿಂತಕರು, ಪ್ರತಿಭಟನೆ ಮಾಡುವುದರ ಮೂಲಕ ಭಾಷಣ, ಬರವಣಿಗೆಗಳಿಂದ ನಾಡಿನ ಜನತೆಯಲ್ಲಿ ಕನ್ನಡ ನಾಡಿನ ಹಿರಿಮೆಯನ್ನು ಸಾರಲು ಬಯಸಿದರು. ಇಂತಹ ಸನ್ನಿವೇಶದಲ್ಲಿಯೇ ನಮ್ಮ ಅನೇಕ ಕವಿಚೇತನಗಳು ಉದಯಿಸಿದ್ದು. ಕುವೆಂಪು, ಬೇಂದ್ರೆ, ಮಾಸ್ತಿ, ಬಿ.ಎಂ.ಶ್ರೀ. ಅ.ನ.ಕೃ, ದೇ.ಜ.ಗೌ, ಪಾಟೀಲಪುಟ್ಟಪ್ಪ, ಚಂದ್ರಶೇಖರ ಪಾಟೀಲ್ (ಚಂಪಾ) ಚಂದ್ರಶೇಖರ ಶಾಸ್ತ್ರಿಗಳು, ಬಸವರಾಜ ಕಟ್ಟೀಮನಿ, ಕಯ್ಯಾರ ಕಿಞ್ಞಣ್ಣರೈ ಮುಂತಾದ ಪ್ರಖ್ಯಾತ ಸಾಹಿತಿಗಳು ನಾಡಿನ ಹಿರಿಮೆಯನ್ನು ಜನತೆಗೆ ತಿಳಿಸಬಯಸಿದರು. ಇವರ ಸಾಹಿತ್ಯಿಕ ಚಳವಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘಗಳು ಸಹಕರಿಸಿದವು.

ಬೆಳಗಾವಿಗೆ ಸಂಬಂಧಿಸಿದಂತೆ ಇಲ್ಲೊಂದು ಇತಿಹಾಸ ಪ್ರಸಿದ್ಧ ಘಟನೆಯನ್ನು ತಿಳಿಸಬಯಸುತ್ತೇನೆ. ಬೆಳಗಾವಿಯು ಇಂದು ಸಮಸ್ಯೆಯಾಗಿ ಉಳಿದಿಲ್ಲ, ಇದಕ್ಕೆ ೧೯೦ ವರ್ಷಗಳ ಹಿಂದೆಯೇ ನಮ್ಮ ಕನ್ನಡದ ಜನರು ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗವೆಂಬ ಕೂಗನ್ನು ಕೂಗಿದರು. ಇದು ೧೮೧೮ರಲ್ಲಿ ಪ್ರಕಟವಾಗಿರುವ ಬ್ರಿಟೀಷ್ ದಾಖಲೆಯಿಂದ ತಿಳಿದುಬರುತ್ತದೆ. ಅದರ ಪ್ರಕಾರ,

೧೮೧೮ ಮಾರ್ಚ್ ೨೧ರಿಂದ ಏಪ್ರಿಲ್ ೧೨ರವರೆಗೆ ಬ್ರಿಟೀಷರು ಬೆಳಗಾವಿ ಕೋಟೆಗೆ ಮುತ್ತಿಗೆ ಹಾಕಿ ಪೇಶ್ವೆಯವರಿಂದ ಅದನ್ನು ವಶಪಡಿಸಿಕೊಂಡರು. ಅಂದಿನ ಬೆಳಗಾವಿ ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ತನ್ನ ಧೈರ್ಯ, ಸಾಹಸ, ಯುದ್ಧ ಕೌಶಲ್ಯವನ್ನು ತೋರಿಸಿದವರೆಂದರೆ ಕ್ಯಾಪ್ಟನ್ ಟಿಸ್ಟರ್ ಮನ್ರೊ. (ಸರ್. ಥಾಮಸ್ ಮನ್ರೊರವರ ಅಣ್ಣನ ಮಗ) ಇವನು ನಂತರ ೧೮೩೦-೩೪ರ ಸುಮಾರಿನಲ್ಲಿ ಸೊಲ್ಲಾಪುರದ ಸಬ್ ಕಲೆಕ್ಟರ್‌ನಾಗಿ ಅಧಿಕಾರ ವಹಿಸಿಕೊಂಡ. ಅವನಿಗೆ ಇಲ್ಲಿಯ ಅಧಿಕ ಪ್ರಮಾಣದ ಕನ್ನಡಿಗರು ತಮ್ಮನ್ನು ಕನ್ನಡ ಭಾಷಿಕರೊಡನೆ ಸೇರಿಸಿಕೊಡಬೇಕೆಂದು ಕಳಕಳಿಯ ಮನವಿಯನ್ನು ಒಪ್ಪಿಸಿದರು, ಉಗ್ರ ಚಳವಳಿ ಮಾಡಿದರು. ಅವರ ಮನವಿ ಹಾಗೂ

ಹೋರಾಟವನ್ನು ಗಮನಿಸಿದ ಜನರಲ್ ಮನ್ರೋ ತಮ್ಮ ವರದಿಯನ್ನು ಈಸ್ಟ್ ಇಂಡಿಯಾ ಕಂಪನಿಗೆ ಕಳುಹಿಸಿಕೊಟ್ಟರು. ಆ ವರದಿ ಈ ಕೆಳಕಂಡಂತೆ ಇರುತ್ತದೆ :

* "By inclusion of there Districts Sholpur, Belgaum and Dharwar in Madras province the people would forget that there was a Maratha rule over them here. The Jahagirdarsa to this part of the country; they wild little influence over the masses here. Thought the land is captured by them (Marathas) in fact, it is hot the purt of Maharastra. On the other hand the land is the part of that country which is now under the administration of Madras Govt. These people speak Kannada language as it is spoken in Mysore, Bellary or Sandoor. The people here are very auxious to join there co-linguists from the part of view of administrative convenience and language affinity" ಈ ರೀತಿ ಮಹತ್ವಪೂರ್ಣವಾದ ಚಿಂತನೆಯು ೧೯ನೇ ಶತಮಾನದ ಪ್ರಾರಂಭದಲ್ಲಿಯೇ ಒಬ್ಬ ಬ್ರಿಟೀಷ್ ಅಧಿಕಾರಿಗೆ ಬಂದದ್ದು ಇಂದು ಕನ್ನಡದ ಭೂಮಿಯಲ್ಲಿಯೇ ಇರುವಂತಹ ಮರಾಠಿ ಭಾಷೆಯನ್ನಾಡುತ್ತಿರುವ ಬಂಧುಗಳಿಗೆ ಏಕೆ ತಿಳಿದಿಲ್ಲವೋ ಎಂಬುವುದೇ ಪ್ರಶ್ನೆಯಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ನಂತರವೂ, ೧೯೫೬ರಲ್ಲಿ ಕರ್ನಾಟಕ ಹೊಸದಾಗಿ ತನ್ನ ಪ್ರಾಂತವಾದ ನಂತರವೂ ಸಹ ಗಡಿಭಾಗದ ಕನ್ನಡಿಗರಿಗೆ ನ್ಯಾಯ ದೊರಕಿದಂತೆ ಕಂಡುಬರಲಿಲ್ಲ. ಇಷ್ಟಕ್ಕೆ ಕನ್ನಡಿಗರ ಗಡಿ ಹೋರಾಟವು ನಿಂತಿಲ್ಲ, ಅದು ನಿಲ್ಲುವಂತೆಯೇ ಇಲ್ಲ. ಈ ಹೋರಾಟದ ಸಮಗ್ರ ಚಿತ್ರಣ ನಮಗೆ ಪರಕೀಯವಾದ ಒಬ್ಬ ಬ್ರಿಟೀಷ್ ಅಧಿಕಾರಿಯೊಬ್ಬನು ಆಡಳಿತದ ದೃಷ್ಟಿಯಿಂದ ಕನ್ನಡ ಜನ ಒಂದಾಗಬೇಕೆಂದು ಹೋರಾಡಿದ. ಅತನೇ ನಮ್ಮೆಲ್ಲರಿಗೂ ಈ ದೃಷ್ಟಿಯಿಂದ ಮಾರ್ಗದರ್ಶಕನಾಗುತ್ತಾನೆಂದರೆ ತಪ್ಪಾಗಲಾರದು. ಅಂದಿನ ಮುಂಬಯಿ ಸರ್ಕಾರವು ಬೆಳಗಾವಿಯನ್ನು ಮರಾಠರ ಆಡಳಿತಕ್ಕೆ ಸೇರಿಸಲು ಹೊಂಚುಹಾಕಿತು. ತಮ್ಮ ದರ್ಪವನ್ನು ಉಪಯೋಗಿಸಿಕೊಂಡು ಕನ್ನಡದ ಭದ್ರ ಕೋಟೆಯಾಗಿದ್ದಂತಹ ಸೊಲ್ಲಾಪುರವನ್ನು ವಿಂಗಡಿಸಿದರು. ಈ ಮೇಲಿನ ಮಾತನ್ನು ನಾನು ಕೆಲವು ಐತಿಹಾಸಿಕ ಘಟನೆಗಳ ಕಲ್ಪನೆ ಕನ್ನಡಿಗರಲ್ಲಿ ಇರಲೆಂದು ಇಲ್ಲಿ ಹೇಳಬಯಸುತ್ತಿದ್ದೇನೆ ಅಷ್ಟೆ.

ಶೈಕ್ಷಣಿಕವಾಗಿ ಬೆಳಗಾವಿ ನಗರದ ಚರಿತ್ರೆಯನ್ನು ತಿರುಗಿಸಿದರೆ ಆಶ್ಚರ್ಯಕರವಾದ ಘಟನೆಗಳು ಕಂಡುಬರುತ್ತವೆ. ೧೮೫೦ರಲ್ಲಿ ಪ್ರಪ್ರಥಮವಾಗಿ ಲಂಡನ್ ಮಿಷನರಿ ಸೊಸೈಟಿಯುವರಿಂದ್ಧ ಖಾಸಗಿ ವಿದ್ಯಾಸಂಸ್ಥೆಯು ಕಾರ್ಯಚಟುವಟಿಕೆಯನ್ನು ಪ್ರಾರಂಭಿಸಿದವು. ಲಂಡನ್ ಮಿಷನರಿ ಸೊಸೈಟಿಯವರು ಬೆಳಗಾವಿ ನಗರದಲ್ಲಿ ಅಂದೇ ಕನ್ನಡ ಶಾಲೆಗಳನ್ನು ಪ್ರಾರಂಭ ಮಾಡಿದರೇ ವಿನಃ ಮರಾಠಿ ಶಾಲೆಗಳನ್ನಲ್ಲಾ. ೧೯೧೬ರಲ್ಲಿ ಸ್ಥಾಪನೆ ಕಂಡಂತಹ ಕರ್ನಾಟಕ ಲಿಬರಲ್ ಎಜುಕೇಷನ್ ಸೊಸೈಟಿಯವರು ೧೯೩೩ರಲ್ಲಿ

---

* Vide life of Mysore by H. R. Bhutnagar Part II

ಪ್ರೌಢಶಾಲೆಯೊಂದನ್ನು ಪ್ರಾರಂಭಿಸಿ ನಂತರ ಪ್ರಥಮದರ್ಜೆಯ ಕಾಲೇಜು, ಇಂದಿನ ಪ್ರಸಿದ್ಧ ವಿದ್ಯಾಸಂಸ್ಥೆಯಾಗಿರುವ ಲಿಂಗರಾಜ ಆರ್ಟ್ಸ್ ಕಾಲೇಜು ಮತ್ತು ರಾಜಲಕಮನಗೌಡ ಸಾಯನ್ಸ್ ಇನ್‌ಸ್ಟಿಟ್ಯೂಟ್ ಮುಂತಾದವುಗಳನ್ನು ಪ್ರಾರಂಭಿಸಿ ಕನ್ನಡ ಭಾಷೆಗೆ, ಕನ್ನಡ ಜನತೆಗೆ ಜೀವಕಳೆಯನ್ನೂ, ಕರ್ನಾಟಕಕ್ಕೆ ಚೈತನ್ಯವನ್ನು ತಂದುಕೊಟ್ಟರು. ಇಂದು ಬೆಳಗಾವಿ ಶಿಕ್ಷಣ ಮಟ್ಟದಲ್ಲಿ ಎಷ್ಟಲ್ಲ ಮುಂದುವರಿದಿದೆ ಎಂದರೆ ೧೯೭೯ರಲ್ಲಿ 'ಕರ್ನಾಟಕ ಲಾ ಎಜ್ಯುಕೇಷನ್ ಸೊಸೈಟಿಯು ಪ್ರಾರಂಭವಾಗಿ ಆರ್.ಎಲ್.ಎಸ್. ಲಾ ಕಾಲೇಜು, ಕಾಮರ್ಸ್ ಕಾಲೇಜು, ಮುಂತಾದವುಗಳ ಮೂಲಕ ಸಮರ್ಥನೀಯವಾದ ಶಿಕ್ಷಣ ನೀಡುತ್ತಾ ಬರುತ್ತಲಿದೆ. ಇಷ್ಟೇ ಅಲ್ಲದೆ ಕರ್ನಾಟಕ ಸರ್ಕಾರವು ಮಹತ್ವದ ತಾಂತ್ರಿಕ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಿ ಅದರ ಕೇಂದ್ರವನ್ನಾಗಿ ಬೆಳಗಾವಿಯನ್ನು ಆಯ್ದುಕೊಂಡು ಗಡಿನಾಡಿಗೆ ಉತ್ತಮ ಕೊಡುಗೆ ನೀಡಿದೆ ಎಂದರೆ ತಪ್ಪಾಗಲಾರದು.

ಶಿಕ್ಷಣ ಸಂಸ್ಥೆಗಳ ಜೊತೆಗೆ ಅನೇಕ ಸಂಘ ಸಂಸ್ಥೆಗಳು ಇಂದು ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಪುಂಡಾಟಿಕೆಯನ್ನು ಕೊನೆಗೊಳಿಸುವಂತಹ ಕೆಲಸವನ್ನು ಮಾಡುತ್ತಾ ಬರುತ್ತಿವೆ. ಈ ಸಂಘಗಳು ಬೆಳಗಾವಿಯು ಕನ್ನಡದ ನೆಲವೆಂದು ಸಾಬೀತುಪಡಿಸಿ ತಮ್ಮದೆಯಾದ ಪರಿಮಿತಿಯಲ್ಲಿ ಮುನ್ನಡೆಯುತ್ತಾ ಬರುತ್ತಿವೆ. ಬೆಳಗಾವಿ ಜಿಲ್ಲೆಯಲ್ಲಿರುವ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು, ಜಿಲ್ಲಾ ಕೈಗಾರಿಕಾ ಸಹಕಾರ ಬ್ಯಾಂಕ್, ಜಿಲ್ಲಾ ಮಾರುಕಟ್ಟೆ ಸಮಿತಿ, ಜಿಲ್ಲಾ ಕೋ-ಆಪರೇಟಿವ್ ಗೊಬ್ಬರ ಹುಟ್ಟುವಳಿ ಸೊಸೈಟಿ, ಕರ್ನಾಟಕ ಆಯುರ್ವೇದಿಕ್ ಮಂಡಳಿ, ಕರ್ನಾಟಕ ನೇಕಾರ ಸಹಕಾರ ಉತ್ಪಾದನಾ ಸಂಘ, ಭಾರತೀಯ ಶೈಕ್ಷಣಿಕ ಮತ್ತು ಸಮಾಜ ಸೇವಾ ಲೀಗ್, ಕರ್ನಾಟಕ ಆಯುರ್ವೇದಿಕ್ ವಿದ್ಯಾಲಯ ಪೀಠ, ಕರ್ನಾಟಕ ಹೊಸೈರಿ ಸಹಕಾರಿ ಉತ್ಪಾದಕರ ಸಂಘ ಮುಂತಾದವುಗಳು ಕನ್ನಡಿಗರ ಒಡೆತನದಲ್ಲಿಯೇ ಮುನ್ನಡೆದುಕೊಂಡು ಬರುತ್ತಲಿವೆ. ಆದರೆ ಬೆಳಗಾವಿ ಮಹಾನಗರ ಪಾಲಿಕೆಯ ಮಹಾಪೌರರುಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಉಪಮಹಾ ಪೌರರುಗಳು ಮರಾಠಿಗರೇ ಹಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣವೆಂದರೆ ಬೆಳಗಾವಿಯಲ್ಲಿ ಕನ್ನಡಿಗರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರೆ ಹೆಚ್ಚಾಗಿರುವುದು. ಉನ್ನತ ಶಿಕ್ಷಣ ಪಡೆಯುವ ದೃಷ್ಟಿಯಿಂದ ನೆರೆಯ ಮರಾಠಿಗಳು ಬೆಳಗಾವಿಗೆ ಬಂದು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಪ್ರಬಲರಾಗಿ ಇಂದು ನಮ್ಮ ನೆಲದಲ್ಲಿಯೇ ನೆಲಸಿ ನಮ್ಮನ್ನೇ ಆಳ್ವಿಕೆ ಮಾಡುವಂತಹ ಸ್ಥಿತಿಗೆ ತಲುಪಿದ್ದಾರೆ. ಇಷ್ಟೆ ಅಲ್ಲದೆ ಇಲ್ಲಿ ಕನ್ನಡಿಗರ ದೌರ್ಬಲ್ಯವೂ, ಅಭಿಮಾನ ಶೂನ್ಯತೆಯನ್ನು ಹೊತ್ತುಕೊಂಡಿರುವ ನಮ್ಮ ರಾಜ್ಯ ರಾಜಕೀಯ ಪಕ್ಷದ ಮುಖಂಡರುಗಳ ಪಾತ್ರ ಬಹುಮುಖ್ಯವಾಗಿರುತ್ತದೆ. ಇಂದು ಬೆಳಗಾವಿಯು ದ್ವಿಭಾಷಾನಗರ ಪ್ರದೇಶವಾಗಿದೆ ನಿಜ. ಆದರೆ ಅದು ಕರ್ನಾಟಕದ ಅವಿಭಾಜ್ಯ ಅಂಗ. ಆದರೆ ಇಂದು ನಗರಸಭೆಯ ಪ್ರಕಟಣೆಗಳು, ಬ್ಯಾಂಕ್ ವ್ಯವಹಾರ, ಮುಂತಾದವುಗಳೆಲ್ಲವೂ ಸಹ ಮರಾಠಿಯಲ್ಲಿಯೇ ಪ್ರಕಟವಾಗುತ್ತಿರುತ್ತವೆ. ಇದು ನಮಗೆ ಆಶ್ಚರ್ಯತರುವ ಸಂಗತಿ ಅಲ್ಲವೆ. ಶಿಕ್ಷಣ ಸಂಸ್ಥೆಗಳಲ್ಲಿ, ಜಿಲ್ಲಾ ಕಚೇರಿ, ತಾಲ್ಲೂಕು ಕಚೇರಿಗಳಲ್ಲಿ ಕನ್ನಡದಲ್ಲಿ ಬರುವ ಅರ್ಜಿಗಳನ್ನು, ಪತ್ರಗಳನ್ನು ಮೂಲೆಗೊತ್ತಿ ಕನ್ನಡಿಗರಿಗೆ ಅನ್ಯಾಯ ಮಾಡಲಾಗುತ್ತಿದೆ. ಭಾರತದ ಲೋಕಸಭೆಯಲ್ಲಿಯೇ

ಚರ್ಚಿತವಾಗಬೇಕಾದ ವಿಷಯಗಳು ಭಾರತದ ಯಾವುದೇ ಭಾಷೆಯಲ್ಲಿ ಬಂದರೂ ಪ್ರಧಾನಿಯವರು ಪುರಸ್ಕರಿಸುತ್ತಿರುವಾಗ ಕನ್ನಡದ ಗಂಡುಮೆಟ್ಟಿನ ಸ್ಥಳವಾದ ಬೆಳಗಾವಿ ನಗರದಲ್ಲಿ ಅಲ್ಲಿನ ನಗರಸಭೆಯು ಕನ್ನಡವನ್ನು ತಿರಸ್ಕರಿಸುತ್ತಿರುವುದು ನೋಡಿದರೆ ನೆರೆಯ ಮರಾಠಿಗರು ಭಾಷಾ ದ್ವೇಷದಿಂದ ನರಳುತ್ತಿರುವ ಹಾಗೆ ನಾವು ಭಾವಿಸಬಹುದು.

ಮೇಲಿನ ರೀತಿಯಲ್ಲಿ ಬೆಳಗಾವಿ ನಗರವು ಕನ್ನಡಿಗರಿಂದ ಅವರಿಸಿಕೊಂಡಿದ್ದರೂ ಸಹ ಮರಾಠಿಗರ ಮಿತಿ ಮೀರಿದ ದೌರ್ಜನ್ಯದಿಂದಾಗಿ ಜನರ ಮೇಲೆ, ಭಾಷೆಯ ಮೇಲೆ ದಿನಂಪ್ರತಿಯೂ ಕೊಡಲಿಪೆಟ್ಟು ಬೀಳುತ್ತಲಿವೆ.

ಮಹಾಜನ ವರದಿಯ ಪ್ರಯುಕ್ತ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ವರ್ಗಾಯಿಸಲು ಶಿಫಾರಸ್ಸಾಗಿರುವ ಪ್ರದೇಶಗಳು ನಮ್ಮ ರಾಜ್ಯದಲ್ಲಿಯೇ ಇಂದು ಅತ್ಯಂತ ಹೆಚ್ಚಿನ ಆದಾಯವನ್ನು ಹೊಂದಿರುವ ಶ್ರೀಮಂತ ಪ್ರದೇಶಗಳಾಗಿವೆ. ಇವು ಇಂದಲ್ಲ ನಾಳೆ ಕೇಂದ್ರ ಸರ್ಕಾರವು ಮಹಾಜನ್ ವರದಿಯೇ ಈ ಗಡಿಸಮಸ್ಯೆಗಳಿಗೆ ಸೂಕ್ತ ವರದಿಯೆಂದು ಜಾರಿಗೆ ತಂದರೆ ಈ ಪ್ರದೇಶಗಳೆಲ್ಲವೂ ಸಹ ನೆರೆಯ ಮಹಾರಾಷ್ಟ್ರಕ್ಕೆ ಸೇರುತ್ತವೆ. ಅದೇ ರೀತಿ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಸೇರಬೇಕಾಗಿರುವ ಕನ್ನಡದ ಪ್ರದೇಶಗಳ ಸ್ಥಿತಿಗತಿಯ ಬಗ್ಗೆ ತಿಳಿಸಿರುತ್ತೇನೆ. ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಶಿಫಾರಸ್ಸಾಗಿರುವ ಪ್ರದೇಶಗಳೆಂದರೆ

೧. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ನಗರವನ್ನೊಳಗೊಂಡಿರುವ ೪೧ ಹಳ್ಳಿಗಳು. (ಇವು ಹೆಚ್ಚಾಗಿ ಕಬ್ಬು ಬೆಳೆಯುವ ಪ್ರದೇಶಗಳು) ಮಹಾರಾಷ್ಟ್ರವು ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಪಟ್ಟಣವನ್ನೊಳಗೊಂಡ ೫೧ ಹಳ್ಳಿಗಳ ಬೇಡಿಕೆಯನ್ನು ರಾಜ್ಯ ಪುನರ್ ವಿಂಗಡನಾ ಆಯೋಗದ ಎದುರಿಗೆ ಮಂಡಿಸಿತು. ಆದರೆ ಚಿಕ್ಕೋಡಿ ತಾಲ್ಲೂಕು ಸಂಪೂರ್ಣವಾಗಿ ಕನ್ನಡದ ಪ್ರದೇಶವಾಗಿರುವುದರಿಂದ ಮಹಾರಾಷ್ಟ್ರದ ಬೇಡಿಕೆಯನ್ನು ರಾಜ್ಯ ಪುನರ್ವಿಂಗಡನಾ ಆಯೋಗವು ತಿರಸ್ಕರಿಸಿತು.

೨. ಸೊಲ್ಲಾಪುರ ಜಿಲ್ಲೆಯ ೬೨ ಹಳ್ಳಿಗಳು ಮಾತ್ರ.

ಈ ಮೇಲಿನ ಭಾಗಗಳು ಭೌಗೋಳಿಕವಾಗಿ ಕರ್ನಾಟಕವೇ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಮರಾಠಿ ಭಾಷೆಯನ್ನಾಡುವ ಜನರಿರುವುದರಿಂದ ಮಹಾಜನ್ ಅವರ ಸೂಚನೆಗೆ ನಾವು ಬದ್ಧರಾಗಿರೋಣ.

ಮರಾಠಿಗರು ಮೊದಲಿನಿಂದಲೂ ಬೆಳಗಾವಿ, ಕಾರವಾರ, ನಿಪ್ಪಾಣಿಗಳ ಮೇಲೆ ತನ್ನ ಕೆಟ್ಟ ದೃಷ್ಟಿಯನ್ನಿರಿಸಿಕೊಂಡೆ ಬರುತ್ತಿರುವವರು. ಹೇಗಾದರೂ ಮಾಡಿ ಈ ಪ್ರದೇಶಗಳನ್ನು ತಮ್ಮದಾಗಿಸಿಕೊಳ್ಳಬೇಕೆಂದು ಚಡಪಡಿಸುತ್ತಿರುವ ಮಹಾರಾಷ್ಟ್ರವು ತನ್ನೆಲ್ಲ ಶಕ್ತಿಯನ್ನು ಆಯಾ ಪ್ರದೇಶಗಳ ಮೇಲೆ ಕೇಂದ್ರೀಕರಿಸಲು ಪ್ರಾರಂಭ ಮಾಡಿತು. ನಿಪ್ಪಾಣಿಯ ಸುತ್ತಮುತ್ತಲಿನ ಫಲವತ್ತಾದ ಭೂ ಭಾಗದಲ್ಲೆಲ್ಲ ಒಂದಿಲ್ಲೊಂದು ನೆಪದಿಂದ ಬೀಡು ಬಿಡತೊಡಗಿದರು. ನಿಪ್ಪಾಣಿ ನಗರವನ್ನೊಳಗೊಂಡ ೪೧ ಹಳ್ಳಿಗಳಲ್ಲಿ ೧೯೫೧ರಲ್ಲಿ ೧೦,೭೮೮೬ರಷ್ಟು ಜನ ವಸತಿ ಇದ್ದರೆ ೧೨,೩೮೮೪ ರಷ್ಟು ಜನವಸತಿಯು ೧೯೬೧ರಲ್ಲಿ

ಸೇರಿಕೊಂಡಿತು (ಜನಗಣತಿಯ ಆಧಾರದ ಮೇಲೆ). ೧೯೯೮ರ ವೇಳೆಗೆ ಲಕ್ಷಕ್ಕೂ ಮೀರಿದ ಮರಾಠಿಗರು ಬಂದು ನೆಲಸಿ ಈ ಪ್ರದೇಶವನ್ನೆಲ್ಲ ಸಂಪೂರ್ಣವಾಗಿ ಮರಾಠಿ ಪ್ರದೇಶವನ್ನಾಗಿಸಿದ್ದಾರೆ. ಈ ಪ್ರದೇಶದ ಭೂ-ಒಡೆಯರೆಲ್ಲರೂ ಸಹ ಮರಾಠಿಗರೆ ಅವರ ಭೂಮಿಯಲ್ಲಿ ದುಡಿಯುವವರು ಮಾತ್ರ ಕನ್ನಡಿಗರು. ಇದೆಂತ ವಿಪರ್ಯಾಸ. ಇಂದಿಗೂ ಈ ಪ್ರದೇಶವನ್ನು ಕಬಳಿಸುವ ಉದ್ದೇಶದಿಂದಲೇ ಸಂಖ್ಯಾ ಬಲವನ್ನು ಹೆಚ್ಚಿಸುತ್ತಲೇ ಬರುತ್ತಿರುವ ಇವರಿಗೆ ಕಾನೂನಿನ ರೀತ್ಯ ಸೂಕ್ತ ಕ್ರಮ ತೆಗೆದುಕೊಳ್ಳುವುದು ಉತ್ತಮ.

೧೯೬೧ರ ವರೆಗೆ ಇಲ್ಲಿ ಯಾವ ರೀತಿಯ ಉನ್ನತ ಮಟ್ಟದ ಶಿಕ್ಷಣ ಸಂಸ್ಥೆಗಳೂ ಸಹ ಇರಲಿಲ್ಲ. ಬೆಳಗಾವಿಯ 'ಕರ್ನಾಟಕ ಲಿಬರಲ್ ಎಜ್ಯುಕೇಷನ್ ಸೊಸೈಟಿ'ಯವರು ೧೯೬೧ರಲ್ಲಿ ಕಾಲೇಜು ಶಿಕ್ಷಣವನ್ನು ಈ ಪ್ರದೇಶದಲ್ಲಿ ಪ್ರಾರಂಭಿಸಿತು. ಕರ್ನಾಟಕ ವಿಶ್ವವಿದ್ಯಾಲಯವು ಈ ಸಂಸ್ಥೆಗೆ ಮಾನ್ಯತೆ ನೀಡಿ ಚಿಕ್ಕೋಡಿ ತಾಲ್ಲೂಕಿನ ಸಮಗ್ರ ಜನತೆಗೆ ಹೆಚ್ಚಿನ ಶೈಕ್ಷಣಿಕ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಟ್ಟಿತು. ಇಂದು ಈ ಕಾಲೇಜಿನಲ್ಲಿ ಪದವಿ ಪಡೆದವರೆಲ್ಲರೂ ಕನ್ನಡ ಪರ ಹೋರಾಟಕ್ಕಿಳಿದು ತಮ್ಮದೆಯಾದ ಸಂಘ ನಿರ್ಮಿಸಿಕೊಂಡು ಮರಾಠಿಗಳ ಬೇಡಿಕೆಯನ್ನು ಉಗ್ರವಾಗಿ ವಿರೋಧಿಸುತ್ತಾ ಬರುತ್ತಿದ್ದಾರೆ. ಅವುಗಳಲ್ಲದೆ ಮಹಿಳಾ ಮಂಡಳಿ, ಭೂ-ಒಡೆಯರ ಸಂಘ ಮತ್ತು ಬಹುಸಂಖ್ಯೆಯಲ್ಲಿ ಗ್ರಾಮಪಂಚಾಯಿತಿಗಳು ಮಹಾರಾಷ್ಟ್ರೀಯರ ದಬ್ಬಾಳಿಕೆಯನ್ನು ಖಂಡಿಸುತ್ತಾ ಬೆಳೆದು ಬರುತ್ತಿವೆ. ಇಂದು ಅನೇಕ ಶಿಕ್ಷಣ ಸಂಸ್ಥೆಗಳು, ಸರ್ಕಾರದ ನೆರವಿನಿಂದ ಸ್ಥಾಪಿತವಾಗಿ ಶೈಕ್ಷಣಿಕವಾಗಿ ಇಲ್ಲಿನ ಕನ್ನಡ ಜನ ಬೆಳೆಯುವಂತೆ ಅನುಕೂಲ ಮಾಡಿಕೊಡುತ್ತಿದೆ. ಈ ನಡುವೆ ಇಲ್ಲೊಂದು ಆಶ್ಚರ್ಯದ ವಿಷಯವೆಂದರೆ ಪಡ್ಲಿಹಾಳ್ ಹಳ್ಳಿಯ ಮರಾಠ ಸಮಾಜವು ಮಹಾರಾಷ್ಟ್ರ ಏಕೀಕರಣ ಸಮಿತಿಯ ಚಳವಳಿಯನ್ನು ಸಂಪೂರ್ಣವಾಗಿ ವಿರೋಧಿಸಿ ಕರ್ನಾಟಕದಲ್ಲಿಯೇ ಮುಂದುವರಿಯುವ ತಮ್ಮ ಬೇಡಿಕೆಯನ್ನು ತುಂಬ ಹಿಂದೆಯೇ ಮಂಡಿಸಿ ಇಂದಿಗೂ ಸಹ ಕನ್ನಡದ ಪರ ಕೆಲಸಗಳನ್ನು ನಿಷ್ಠೆಯಿಂದ ಮಾಡಿಕೊಂಡು ಬರುತ್ತಲಿದೆ.

ಚಿಕ್ಕೋಡಿ ವಕೀಲರ ಸಂಘವು (ಮರಾಠಿ ವಕೀಲರ ಸಮೇತ) ಮರಾಠಿಗರ ಧೋರಣೆಯನ್ನು ಖಂಡಿಸುತ್ತಲೇ ಬರುತ್ತಿದ್ದಾರೆ. ಇನ್ನೂ ಚಿಕ್ಕೋಡಿ ತಾಲ್ಲೂಕಿನ ಭಾಷೆಯ ವಿಷಯದಲ್ಲಿ ಕನ್ನಡವೇ ಈ ಭಾಗದ ಮಾತೃಭಾಷೆಯಾಗಿರುವುದಲ್ಲದೆ ಆಡಳಿತ ಭಾಷೆಯೂ ಸಹ ಕನ್ನಡವೇ ಆಗಿದೆ. ಇದಕ್ಕೆ ನಿದರ್ಶನಗಳೆಂದರೆ ೧೯೭೧ ಮೇ ೧೬ರಂದು ಮುಂಬಯಿ ಸರ್ಕಾರವು ಚಿಕ್ಕೋಡಿ ತಾಲ್ಲೂಕಿನಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿರಬೇಕೆಂದು ತೀರ್ಮಾನಿಸಿರುವುದೇ* ಸಾಕ್ಷಿಯಾಗಿದೆ.

ಮಹಾರಾಷ್ಟ್ರ ಸರ್ಕಾರವೇ ಆಗಿದ್ದಂತಹ ಮುಂಬೈ ಸರಕಾರವು ಈ ನಿರ್ಣಯವನ್ನು ಕೈಗೊಂಡಿದ್ದರಿಂದ ರಾಜ್ಯದಲ್ಲಿ ಆಗ ನಿರ್ಮಾಣಗೊಂಡಿದ್ದಂತಹ ಬೆಳಗಾವಿ ತಾಲ್ಲೂಕನ್ನೊಳ ಗೊಂಡು ಬೆಳಗಾವಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ, ಕನ್ನಡವೇ ಆಡಳಿತ ಭಾಷೆ

---

* ಉದಯವಾಣಿ ದಿನಪತ್ರಿಕೆ, ದಿನಾಂಕ: ೧೬.೫.೧೯೭೧

ಎಂಬುದನ್ನು ಸರ್ಕಾರವು ಒಪ್ಪಿಕೊಂಡು ಆಡಳಿತದ ಅನುಕೂಲದ ದೃಷ್ಟಿಯಿಂದ ಶಹಪೂರ ತಾಲ್ಲೂಕನ್ನು ಮಾತ್ರ ದ್ವಿಭಾಷಾ ತಾಲ್ಲೂಕೆಂದು ಪ್ರಕಟಿಸಿತು.

೧೦೦ಕ್ಕೆ ೮೦ ರಷ್ಟರ ಪ್ರಮಾಣದಲ್ಲಿ ಮರಾಠಿ ಮಾತನಾಡುವ ೨೬ ಸಾವಿರ ಜನಸಂಖ್ಯೆಯುಳ್ಳ ಹುಕ್ಕೇರಿ ತಾಲ್ಲೂಕಿನ ೧೮ ಹಳ್ಳಿಗಳ ಬೇಡಿಕೆಯನ್ನು ಮಹಾರಾಷ್ಟ್ರವು ಮಂಡಿಸಿತು. ಆಗ ಕರ್ನಾಟಕವು ರಾಜ್ಯ ಪುನರ್‌ವಿಂಗಡನಾ ಆಯೋಗದ ಶಿಫಾರಸ್ಸಿನಂತೆ ಕೇವಲ ಭಾಷೆಯ ಬಹುಮತದ ಆಧಾರದ ಮೇಲೆ ಪ್ರಾಂತ್ಯಗಳನ್ನಾಗಿ ವಿಂಗಡಿಸುವುದು ತಪ್ಪೆಂದು ತನ್ನ ನಿಲುವನ್ನು ಸ್ಪಷ್ಟಪಡಿಸಿತು.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕು ೨೫೭ ಹಳ್ಳಿಗಳು ೧,೯೯,೭೯೦ ಜನಸಂಖ್ಯೆಯುಳ್ಳ ಪ್ರದೇಶ. ಇದು ೬೭೭.೫ ಚ. ಮೈಲು ವಿಸ್ತಾರವನ್ನು ಹೊಂದಿರುತ್ತದೆ. ಇವುಗಳಲ್ಲಿ ೨೦೬ ಹಳ್ಳಿಗಳನ್ನು ೯೮,೫೨೨ ಜನಸಂಖ್ಯೆಯನ್ನು ೪೮೭-೧ ಚದುರ ಮೈಲುಳ್ಳ ಪ್ರದೇಶವನ್ನಾಗಿ ವರ್ಗಾಯಿಸಬೇಕೆಂದು ಬೇಡಿಕೆಯನ್ನು ಸಲ್ಲಿಸಿತು. ಈ ತಾಲ್ಲೂಕಿನ ಖಾನಾಪುರ ತಾಲ್ಲೂಕಿನಲ್ಲಿ ಹಾಗೂ ನಗರದಲ್ಲಿ ೪೯%, ನಂದಗಡದಲ್ಲಿ ૩೯.೮% ಅಂದರೆ ಒಟ್ಟು ತಾಲ್ಲೂಕಿನಲ್ಲಿ ೫೪.૩% ಪ್ರಮಾಣದಲ್ಲಿ ಮರಾಠಿ ಮಾತನಾಡುವವರಿದ್ದಾರೆ. ಆದರೆ ಇಂದು ಕನ್ನಡದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಸಂಘ ಸಂಸ್ಥೆಗಳಿಂದ, ಮಂಡಳಿಗಳಿಂದ, ಸರ್ಕಾರದ ರೀತಿ ನೀತಿಯಿಂದ ಕನ್ನಡಾಭಿಮಾನವು ಕಡಿಮೆ ಪ್ರಮಾಣದಲ್ಲಿ ಅಭಿಮಾನ ಹೊಂದಲು ಕಾರಣವಾಗುತ್ತಿದೆ.

❑❑

೩. ಹೊರನಾಡಿನಲ್ಲಿ ಕನ್ನಡ ಗಡಿಯ ರಕ್ಷಣೆಗಾಗಿ ಚಳವಳಿ

ಹೊರಗಿನವರಿಗೆ ಬೆಳಗಾವಿಯು ಹಲವು ಸಮಸ್ಯೆಗಳ ಕೇಂದ್ರ. ಆದರೆ ಬೆಳಗಾವಿಯವರಿಗೆ ಮಾತ್ರ ಅಲ್ಲಿ ಯಾವ ರೀತಿಯ ಸಮಸ್ಯೆ ಇದೆಯೆಂದು ಅನಿಸುವುದಿಲ್ಲ. ಮೈಸೂರು ಪ್ರಾಂತ್ಯದಲ್ಲಿರುವ ಜನರು ತಾವು ಕುಳಿತಿರುವಲ್ಲಿಯೇ ದಿನಪತ್ರಿಕೆಗಳನ್ನು ನೋಡಿ ನೆರೆಯ ಮರಾಠಿಗರು ಬೆಳಗಾವಿಯನ್ನು ಕಬಳಿಸಲು ಸದಾ ಹೊಂಚು ಹಾಕುತ್ತಿರುತ್ತಾರೆ ಎಂದು ಯೋಚಿಸುತ್ತಿರುತ್ತಾರೆ. ಇದರ ಆಧಾರದ ಮೇಲೆಯೇ ಕನ್ನಡಿಗರು ಮತ್ತು ಮರಾಠಿಗರು ಪರಸ್ಪರ ಸಂಶಯ ದೃಷ್ಟಿಯಿಂದಲೇ ಒಬ್ಬರನ್ನೊಬ್ಬರು ನೋಡುತ್ತಿರುವ ಚಿತ್ರವನ್ನು ಕಲ್ಪಿಸಿಕೊಳ್ಳುತ್ತೇವೆ.ಆದರೆ ಇಂದಿಗೂ ಸಹ ನೀವು ಬೆಳಗಾವಿಗೆ ಹೋದರೆ ಈ ಯಾವ ಚಿತ್ರವೂ ಕಣ್ಣಿಗೆ ಕಾಣುವುದಿಲ್ಲ. ದೇಶದ ಎಲ್ಲ ನಗರಗಳಲ್ಲಿರುವಂತೆ ಬೆಳಗಾವಿಯ ಜನರೂ ಸಹ ತಮ್ಮ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ. ನಾವು ತಿಳಿದಿರುವ ಹಾಗೆ ಅಲ್ಲಿ ಭಾಷಾ ಸಮಸ್ಯೆ ಅವರನ್ನು ಕಾಡುವುದಿಲ್ಲ ಎನ್ನಿಸುತ್ತದೆ. ಸಾಮಾನ್ಯ ಜನರಿಗೆ ತಮ್ಮ ಸಮಸ್ಯೆಗಳೇ ಒಂದು ದೊಡ್ಡ ಸಾಗರವಾಗಿರುವಾಗ ಇನ್ನು ಭಾಷಾ ಸಮಸ್ಯೆ ಅವರನ್ನು ಹೇಗೆ ಕಾಡಲು ಸಾಧ್ಯ? ಒಂದು ಕಾಲದಲ್ಲಿ ಇಲ್ಲಿ ಭಾಷಾ ಸಮಸ್ಯೆ ಹೆಚ್ಚಾಗಿಯೇ ಇತ್ತು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದಾಗ ಬೆಳಗಾವಿ ಕರ್ನಾಟಕಕ್ಕೆ ಸೇರಿತು. ಮರಾಠಿಗರು ಇದನ್ನು ಉಗ್ರವಾಗಿ ವಿರೋಧಿಸಿದರು. ಬೆಳಗಾವಿ ನಗರವನ್ನು ಪೂರ್ಣವಾಗಿ ಮಹಾರಾಷ್ಟ್ರಕ್ಕೆ ಬಿಟ್ಟುಕೊಡಬೇಕೆಂದು ಮರಾಠಿಗರು, ಆದರೆ ಅದಕ್ಕೆ ತೀವ್ರ ವಿರೋಧವಾಗಿ ಅದನ್ನು ಕರ್ನಾಟಕದಲ್ಲಿಯೇ ಉಳಿಸಬೇಕೆಂದು ಪ್ರತಿ ಚಳವಳಿಗಳನ್ನು ಕನ್ನಡಿಗರು ನಡೆಸಲಾರಂಭಿಸಿದರು. ರಾಜ್ಯ ಸರ್ಕಾರವು ಎಲ್ಲ ಬಗೆಯ ಚಳವಳಿಯನ್ನು ದೃಢವಾಗಿ ಎದುರಿಸುತ್ತಾ ನಂತರ ಚಳವಳಿಗಳ ತೀವ್ರತೆ ಕಡಿಮೆಯಾದಂತೆಲ್ಲ ಇಂದು ಕಾಲವೇ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸುತ್ತಿದೆ. ಇಂದು ಮುಂಬಯಿ ನಗರದಲ್ಲಿ ಹಾಗೂ ಪುಣೆಯಲ್ಲಿರುವ ಕನ್ನಡ ಸಂಘಗಳ ಚಟುವಟಿಕೆ, ಅವುಗಳ ಕನ್ನಡದ ಪರ ಕೆಲಸಗಳನ್ನು ಗಮನಿಸಿದರೆ ಬೆಳಗಾವಿಯ ಸಮಸ್ಯೆ ಇಂದು ಸಂಪೂರ್ಣವಾಗಿ ಮುಗಿದ ಕಥೆ ಎಂದು ಹೇಳಬಹುದು.

ಇಂದಿಗೂ ಸಹ ಮುಂಬಯಿ, ಹೈದ್ರಾಬಾದ್, ಚೆನ್ನೈ (ಮದ್ರಾಸ್)ಗಳಲ್ಲಿ ಶಿಕ್ಷಣ ರಂಗದ ಹೊರತಾಗಿ ನೂರಾರು ಕನ್ನಡ ಸಂಘ ಸಂಸ್ಥೆಗಳು ತಮ್ಮದೇ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಮುಂಬಯಿಯಲ್ಲಿರುವ ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ ಕನ್ನಡ ಸಂಘ-ಮಾಹಿಮ್, ಗೋರೇಗಾಂವ ಕರ್ನಾಟಕ ಸಂಘ, ಬಾಂಬೆ ಬಂಟ್ಸ್ ಅಸೋಸಿಯೇಶನ್, ಬಂಟರ ಸಂಘ, ಕರ್ನಾಟಕ ವೆಲ್ಫೇರ್ ಸೊಸೈಟಿ,

ಕನ್ನಡ ವನಿತ ಸಮಾಜ, ಯಂಗ್ ಮೆನ್ಸ್ ಬೋವಿ ಅಸೋಸಿಯೇಶನ್, ಬಾಂಬೆ ಸೌಥ್‌ಕೆನರಾ ಬ್ರಾಹ್ಮಣ ಅಸೋಸಿಯೇಶನ್, ದೇವಾಡಿಗ ಸುಧಾರಕ್ ಸಂಘ, ಸತ್ಯಧ್ಯಾನ ವಿದ್ಯಾಪೀಠ, ಮುಂತಾದವು ಬಹುಕಾಲದಿಂದ ತುಂಬ ಲವಲವಿಕೆಯಿಂದ ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಬಂದ ಸಂಸ್ಥೆಗಳಾಗಿವೆ. ಈ ಸಂಘ ಸಂಸ್ಥೆಗಳು ಕನ್ನಡ ಭಾಷೆ, ಸಂಸ್ಕೃತಿ ಕಲೆ, ಸಾಹಿತ್ಯಕ್ಕಾಗಿ ಸೇವೆ ಸಲ್ಲಿಸಿದವರನ್ನು ಗುರ್ತಿಸಿ 'ಮಹಾರಾಷ್ಟ್ರ ಗೌರವ' ಪುರಸ್ಕಾರವನ್ನು ನೀಡುತ್ತಾ ಬರುತ್ತಿವೆ. ಈ ಪುರಸ್ಕಾರಕ್ಕೆ ಸರ್ವಶ್ರೀ ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ, ಬದರಿನಾರಾಯಣ, ಜೆ.ಬಿ. ಮೊಲಾಯಿಸ್‌ರನ್ನಲ್ಲದೆ ಕನ್ನಡದ ಜ್ಞಾನಪೀಠದಲ್ಲೊಬ್ಬರಾದ ಡಾ. ವಿ.ಕೃ. ಗೋಕಾಕ, ಡಾ.ಕೆ.ಕೆ. ಹೆಬ್ಬಾರ್ ಭೀಮಸೇನ ಜೋಶಿ ಮುಂತಾದ ಪ್ರಸಿದ್ಧ ವ್ಯಕ್ತಿಗಳು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

೩.೧. ಕಪ್ಪುದಿನ ಬಿಳಿದಿನವಾಗುತ್ತಿರುವುದು

ಮೇಲೆ ಚರ್ಚಿಸಿರುವ ಹಾಗೆ ಬೆಳಗಾವಿ ಸಮಸ್ಯೆಯು ಇಂದು ಮುಗಿದ ಕತೆ ಎಂದು ಹೇಳುವುದಕ್ಕೆ ಇನ್ನೊಂದು ಉದಾಹರಣೆಯನ್ನು ನೀಡಬಹುದು. ರಾಜ್ಯದಲ್ಲಿ ನವೆಂಬರ್ ಒಂದರಂದು ರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆಯಷ್ಟೆ. ಸಂಪ್ರದಾಯದಂತೆ ಬೆಳಗಾವಿಯಲ್ಲಿಯೂ ಕನ್ನಡಿಗರು ರಾಜ್ಯೋತ್ಸವವನ್ನು ಆಚರಿಸುವ ಪದ್ಧತಿಯನ್ನು ಪ್ರಾರಂಭಿಸಿದರು. ಇದಕ್ಕೆ ಪ್ರತಿಯಾಗಿ ಮರಾಠಿಗರು ಆ ದಿನವನ್ನು ಕಪ್ಪುದಿನ (ಕರಾಳ ದಿನ)ವನ್ನಾಗಿ ಆಚರಿಸಲು ಪ್ರಾರಂಭಿಸಿದರು. ಈಗಲೂ ನವೆಂಬರ್ ಒಂದರಂದು ಕಪ್ಪು ದಿನವನ್ನಾಗಿ ಮರಾಠಿಗರೂ ಆಚರಿಸುತ್ತಾರೆ. ಆದರೆ ಪ್ರಾರಂಭದಷ್ಟು 'ಕಪ್ಪು' ಭಾಗ ಇಂದು ಉಳಿದಿಲ್ಲ. 'ಕಪ್ಪು' ಕ್ರಮೇಣ ಬಿಳಿ ಆಗುತ್ತಿದೆ. ಇನ್ನು ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ಕಪ್ಪು ನಾಶವಾಗಿ ಬಿಳಿಯೇ ರಾರಾಜಿಸಬಹುದೆಂಬ ಆಶಯವನ್ನು ಅಲ್ಲಿನ ಮರಾಠಿ ಭಾಷಿಕ ಜನರೇ ವ್ಯಕ್ತಪಡಿಸುತ್ತಾರೆ. ಇದು ನನಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಂತಹ ದೃಶ್ಯ.

೧೯೫೭ರ ನವೆಂಬರ್ ಒಂದರಿಂದ ಕಪ್ಪು ದಿನಾಚರಣೆಯ ಅಂಗವಾಗಿ ಹತ್ತು ಸಾವಿರ ಜನರು ಸೈಕಲ್ ಮೆರವಣಿಗೆ ನಡೆಸಿದರು. ಪ್ರಾರಂಭದಿಂದ ೭೦ರ ದಶಕದಲ್ಲಿ ಹತ್ತು ಸಾವಿರ ಜನ ಸೈಕಲ್ ಮೆರವಣಿಗೆಯಲ್ಲಿ ಭಾಗವಹಿಸಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುವಂತೆ ಒತ್ತಾಯಿಸಿದರು. ಇಂದಿಗೂ ಸಹ ಈ ಸೈಕಲ್ ಮೆರವಣಿಗೆ ನಡೆಯುತ್ತದೆ. ಆದರೆ ಅದರಲ್ಲಿ ಕೇವಲ ನೂರರ ಸಂಖ್ಯೆ ಮಾತ್ರ. ಇನ್ನೂ ಒಂದೆರಡು ವರ್ಷಗಳಲ್ಲಿ ಇಲ್ಲಿ ಎಲ್ಲ ಸೈಕಲ್‌ಗಳೂ ಮಾಯವಾಗಿ ಕಪ್ಪುದಿನ ಕೇವಲ ಒಂದು ಶಾಸ್ತ್ರವಾಗುತ್ತದೆ ಅಷ್ಟೆ, ಅದರಲ್ಲಿ ಯಾವ ಸಂದೇಹವೂ ಇಲ್ಲ.

ಇಂದಿಗೂ ಕರ್ನಾಟಕದ ಯಾವುದಾದರೂ ನಗರದಲ್ಲಿ ಅತ್ಯಧಿಕ ಸೈಕಲ್‌ಗಳಿವೆ ಎನ್ನುವುದಾದರೆ (ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ) ಅದು ಬೆಳಗಾವಿಗೆ ಸಲ್ಲುತ್ತದೆ. ಬೆಳಗ್ಗೆ ಸುಮಾರು ಒಂಬತ್ತು ಗಂಟೆಗೆ ನೀವು ಬೆಳಗಾವಿಯನ್ನು ಪ್ರವೇಶಿಸಿದರೆ ನಗರದ ಐದಾರು ಕಿಲೋಮೀಟರ್ ದೂರದಿಂದ ನೂರಾರು ಸಂಖ್ಯೆಯಲ್ಲಿ ಜನ ಸೈಕಲ್ ತುಳಿದುಕೊಂಡು ಹೋಗುವುದನ್ನು ನೋಡಬಹುದು. ಸುತ್ತಮುತ್ತಲ ಹಳ್ಳಿಗಳಿಂದ ಬೆಳಗಾವಿಗೆ ಕೆಲಸಕ್ಕೆ ಹೋಗುವವರು ಉಪಯೋಗಿಸುವುದು ಈ ವಾಹನವನ್ನೇ. ಜನ ಸೈಕಲ್‌ನಲ್ಲಿ

ತಮ್ಮ ತಮ್ಮ ಕೆಲಸಕ್ಕೆ ಹೋಗುತ್ತಿದ್ದರೆ ಅದೊಂದು ಮೆರವಣಿಗೆಯಂತೆ ಕಾಣುತ್ತದೆ. ಈ ಕಾರಣಕ್ಕಾಗಿಯೇ ಮರಾಠಿಗರು ಸೈಕಲ್ ಮೆರವಣಿಗೆಗಳನ್ನು ನಡೆಸುತ್ತಿದ್ದರು. ಈಗ ಈ ಸೈಕಲ್‌ಗಳು ಮರಾಠಿಗರಿಗೆ ಲಭ್ಯವಾಗುತ್ತಿಲ್ಲ. ಇದು ಏನನ್ನು ಸೂಚಿಸುತ್ತದೆ? ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುವ ವರದಿಗಳನ್ನು ನೋಡಿದರೆ ಗಡಿಸಮಸ್ಯೆ ಮತ್ತು ಭಾಷಾ ಸಮಸ್ಯೆಗಳು ಇಲ್ಲಿ ಇಂದಿಗೂ ಜೀವಂತವಾಗಿರುವಂತೆ ಭಾಸವಾಗುತ್ತದೆ. ಆದರೆ ಬೆಳಗಾವಿಗೆ ಹೋದರೆ ಆ ಸಮಸ್ಯೆಯಿರುವುದೇ ಪತ್ತೆಯಾಗುವುದಿಲ್ಲ. ಎಂದಮೇಲೆ ಈ ವರದಿಗಳು ಹೇಗೆ ಪ್ರಕಟವಾಗುತ್ತವೆ? ಎಂಬುವುದೊಂದೆ ಗೊಂದಲವಾಗಿ ಉಳಿದಿದೆ. ನನ್ನ ದೃಷ್ಟಿಯಲ್ಲಿ ನಾನು ಮೊದಲೇ ಚರ್ಚಿಸಿರುವ ಹಾಗೆ ರಾಜಕಾರಣಿಗಳ ಕೆಲಸವೇ ಇದಾಗಿದೆ. ಮೊದಲಿನಿಂದಲೂ ಮಹಾರಾಷ್ಟ್ರದ ರಾಜಕಾರಣಗಳು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಬೆಳಗಾವಿಯನ್ನು ಒಂದು ಉಪಕರಣವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ಈ ಮಾತಿನ ಸತ್ಯಾಂಶ ಅರ್ಥವಾಗುತ್ತದೆ.

ದಿನಗಳು ಕಳೆದಂತೆ ಮನುಷ್ಯ ತಾಸಿರುವ ವಾತಾವರಣಕ್ಕೆ ಹೊಂದಿಕೊಳ್ಳುತ್ತಾ ಹೋಗುತ್ತಾನೆ. ಏಕೆಂದರೆ ವಾಸ್ತವ ಸ್ಥಿತಿಗೆ ಹೊಂದಿಕೊಳ್ಳುವುದು ಅನಿವಾರ್ಯವೂ ಆಗುತ್ತದೆ. ಮೊದಲು ಮಹಾರಾಷ್ಟ್ರ ಪರವಾಗಿದ್ದವರು, ಉಗ್ರ ಚಳವಳಿ ನಡೆಸಿದವರು, ಈಗ ಬದಲಾಗಿರುವುದು ಈ ಕಾರಣದಿಂದಲೇ. ಆಗದ ಕೆಲಸಕ್ಕೆ ತಲೆ ಚಚ್ಚಿಕೊಂಡರೆ ತಮಗೇ ನೋವಾಗುತ್ತದೆ ಎನ್ನುವ ಭಾವನೆ ಇವರಿಗೆ ಬಂದಿದೆ. ಆದ್ದರಿಂದಲೆ ಇಲ್ಲಿಯ ಜನರನ್ನು ಗಡಿ ವಿವಾದ ಈಗ ಕಾಡುತ್ತಿಲ್ಲ. ಆದರೆ ಕೆಲವರು ಮಾತ್ರ ತಮ್ಮ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಆಗಾಗ ಈ ಸಮಸ್ಯೆಯನ್ನು ಜೀವಂತವಾಗಿರಿಸಲು ಪ್ರಯತ್ನಿಸುತ್ತಿದ್ದಾರೆ. ಅದು ಒಂದು ವ್ಯರ್ಥ ಪ್ರಯತ್ನ ಎಂದು ಅವರಿಗೂ ಗೊತ್ತು. ಮೊದಲಿನಿಂದಲೂ ಮಹಾರಾಷ್ಟ್ರದ ಪರ ವಾದಿಸುತ್ತಿದ್ದು ಇದ್ದಕ್ಕಿದ್ದಂತೆ ಮೌನವಹಿಸಿದರೆ ಜನ ತಮಗೆ ಬೆಲೆ ಕೊಡುವುದಿಲ್ಲ ಎನ್ನುವ ಕಾರಣಕ್ಕಾಗಿ ಅವರು ಹೀಗೆ ಮಾಡುತ್ತಾರೆ. ಇವರಿಗೆ ಮಹಾರಾಷ್ಟ್ರದ ರಾಜಕಾರಣಿಗಳ ಸಂಪರ್ಕವಿರುವುದರಿಂದ ಕೆಲವು ಸಾರಿ ಅವರ ಮಾತನ್ನು ಕೇಳುವಂತಹ ಪರಿಸ್ಥಿತಿಯೂ ಬರುತ್ತದೆ. ಆದ್ದರಿಂದಲೇ ಕೋರಿಕೆಗಾಗಿಯೇ ಕೆಲವರು ಈ ಗಡಿಸಮಸ್ಯೆಯನ್ನು ಜೀವಂತವಾಗಿರಿಸಲು ಪ್ರಯತ್ನಿಸುತ್ತಿದ್ದಾರೆ ಎನ್ನಬಹುದು.

೩.೨. ಗಡಿ ರಕ್ಷಣೆಗೆ ಹೊರನಾಡ ಕನ್ನಡ ಪತ್ರಿಕೆಗಳ ಪಾತ್ರ

ಸುಂದರ ನಗರ ಬೆಳಗಾವಿಯಲ್ಲಿ ಮರಾಠಿ ಮತ್ತು ಕನ್ನಡ ಪತ್ರಿಕೆಗಳೆರಡೂ ಯಶಸ್ವಿಯಾಗಿ ನಡೆಯುತ್ತಿರುವುದು ವಿಶೇಷ. ರಾಜ್ಯದ ರಾಜಧಾನಿಯಿಂದ ಹೊರಡುವ ಕನ್ನಡ ದಿನಪತ್ರಿಕೆಗಳು ಇತ್ತೀಚೆಗೆ ಆಫ್‌ಸೆಟ್‌ನಲ್ಲಿ ಮುದ್ರಿಸಲಾರಂಭಿಸಿದರೆ ಬೆಳಗಾವಿಯ ಕನ್ನಡ ದಿನ ಪತ್ರಿಕೆಗಳು ೧೯೭೯ರಿಂದಲೇ ಆಫ್‌ಸೆಟ್ ಸೌಲಭ್ಯ ಹೊಂದಿ ಉತ್ತಮ ಸೇವೆ ಸಲ್ಲಿಸುತ್ತಾ ಬರುತ್ತಿವೆ. 'ಲೋಕದರ್ಶನ', 'ಕನ್ನಡಮ್ಮ', 'ನಾಡೋಜಿ' ಪತ್ರಿಕೆಗಳು ಇಲ್ಲಿಯ ಗಡಿ ಸಮಸ್ಯೆಯ ಬಗ್ಗೆ, ಕನ್ನಡ ಪರ ಚಳವಳಿಯಲ್ಲಿ ವಹಿಸಿಕೊಂಡು ಬಂದ-ಬರುತ್ತಿರುವ ಪಾತ್ರ ಪ್ರಮುಖವಾದದು. ಈ ಪತ್ರಿಕೆಗಳು ೧೯೮೩ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ವಹಿಸಿದ ಪಾತ್ರ ಅಮೂಲ್ಯವಾಗಿದೆ. ಇವರ ಸಂಪಾದಕರುಗಳು ಒಂದು ಪ್ರಗತಿಪರ ವೇದಿಕೆಯನ್ನು ರಚಿಸಿಕೊಂಡು ನೂರಾರು ಜನ

ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಮಾಡಿ ಇಡೀ ರಾಷ್ಟ್ರದ ಗಮನವನ್ನು ಸೆಳೆದಿದ್ದರು. ಮರಾಠಿಗರ ದಬ್ಬಾಳಿಕೆಯನ್ನು ಕಡಿಮೆ ಮಾಡುವುದು ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿಗಳಿಗೆ ತಲೆನೋವನ್ನುಂಟು ಮಾಡುವುದೇ ಈ ವೇದಿಕೆಯ ಉದ್ದೇಶವಾಗಿತ್ತು. ಇದರ ಜೊತೆಗೆ ತಮ್ಮ ಪತ್ರಿಕೆಗಳನ್ನು ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಿ ಜನರಲ್ಲಿ ಸ್ವಾಭಿಮಾನ ಮೂಡಿಸಲು, ಕನ್ನಡ ನಾಡಿನ ಬಗ್ಗೆ ಅದರ ಮೇರೆಯ ಬಗ್ಗೆ ತಿಳುವಳಿಕೆ ಮೂಡಿಸುವ ದೃಷ್ಟಿಯಿಂದ ಪತ್ರಿಕೆಯಲ್ಲಿ ಪ್ರತ್ಯೇಕ ಕಾಲಂ ಅನ್ನು ಮೀಸಲಿರಿಸಿ ಅದರಲ್ಲಿ ಉತ್ತಮ ಲೇಖನಗಳನ್ನು ಪ್ರಕಟಿಸಿಕೊಂಡು ಬರುತ್ತಿವೆ. ಗಡಿ ಜನರಲ್ಲಿ ಹೆಚ್ಚಿನ ಅರಿವು ಮೂಡಿಸುವ ಕಾರ್ಯದಲ್ಲಿ ನಿರಂತರವಾಗಿ ತೊಡಗಿವೆ. ಮಹಾರಾಷ್ಟ್ರದ ರಾಜಧಾನಿ ಮುಂಬಯಿಂದ ಪ್ರಕಟವಾಗುವ ಕನ್ನಡ ಪತ್ರಿಕೆಗಳೂ ಕೂಡ ಗಡಿ ಚಳವಳಿಗೆ ತಮ್ಮದೇ ಕೊಡುಗೆ ನೀಡಿವೆ. ಮೊಗವೀರ, ತಾಯಿನುಡಿ, ಬಂಟರ ವಾಣಿ, ಗೋಕುಲವಾಣಿ, ಪತ್ರಪುಷ್ಪ, 'ಅಕ್ಷಯ' ಮಾಸಿಕಗಳಲ್ಲದೆ ಮೈಸೂರು ಅಸೋಸಿಯೇಶನ್‌ನವರ 'ನೇಸರು' ಕರ್ನಾಟಕ ಸಂಘದ 'ಸಂಬಂಧ' ಮುಖ್ಯ ಪತ್ರಿಕೆಗಳು ಇಂದಿಗೂ ಸಹ ಒಳನಾಡ-ಹೊರನಾಡ ಸ್ನೇಹ-ಸಂಬಂಧವನ್ನು ಕಾಪಾಡಿಕೊಳ್ಳಲು ನೆರವಾಗುತ್ತಿವೆ. ಮದ್ರಾಸಿನ 'ಲಹರಿ' ಕನ್ನಡ ಪತ್ರಿಕೆಯ ೧೯ ವರ್ಷ ದಾಟಿ ೨೦ನೇ ವರ್ಷಕ್ಕೆ ಕಾಲಿಟ್ಟಿದೆ. ಹೈದ್ರಾಬಾದ್‌ನಲ್ಲಿ 'ಪರಿಚಯ' ಎಂಬ ಕನ್ನಡ ಪತ್ರಿಕೆ ಇದ್ದರೆ, ದೆಹಲಿ ಕನ್ನಡ ಸಂಘದವರು 'ಅಭಿಮತ' ಎಂಬ ಕನ್ನಡ ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿದ್ದು ಅದರ ಮೂಲಕ ಕನ್ನಡದ ಸಂಸ್ಕೃತಿ, ಹಿರಿಮೆಯನ್ನು ರಾಷ್ಟ್ರದಾದ್ಯಂತ ಬೆಳಕು ಚೆಲ್ಲುತ್ತಾ ಬರುತ್ತಿದೆ. ಇದೊಂದು ರೀತಿಯ ಪತ್ರಿಕಾ ಗಡಿ ಸಂಬಂಧಿತ ಚಳವಳಿಯೇ ಎನ್ನಬಹುದು.

೧೯೧೯-೨೧ರ ಅವಧಿಯಲ್ಲಿ ಕೊಪ್ಪಳದಿಂದ ಪ್ರಕಟವಾದ 'ಭಕ್ತ ಬಂಧು' ಎಂಬ ಮಾಸಪತ್ರಿಕೆಯನ್ನು ಹೈದರಾಬಾದ್ ಕರ್ನಾಟಕದ ಮೊಟ್ಟಮೊದಲ ಪತ್ರಿಕೆ ಎಂದು ಗುರುತಿಸಲಾಗಿದೆ. ಕೊಪ್ಪಳವಲ್ಲದೆ ಬೆಂಗಳೂರು, ದಾವಣಗೆರೆ, ಮೈಸೂರುಗಳಲ್ಲಿಯೂ ಅಚ್ಚಾಗುತ್ತಿದ್ದ ಈ ಪತ್ರಿಕೆಗೆ ಹೆಚ್. ಚಿದಂಬರಯ್ಯನವರು ಸಂಪಾದಕರಾಗಿದ್ದರು. 'ಧರ್ಮ ಸಂಜೀವಿನಿ' ಮಾಸಿಕವನ್ನು ೧೯೨೨ರಲ್ಲಿ ರಾಯಚೂರಿನಿಂದ ಹೊರತರಲಾಯಿತು. ಪಂ. ಮಸ್ಕಿ ಬಸವಪ್ಪ ಶಾಸ್ತ್ರಿಗಳು ಮತ್ತು ಪಂ. ನಾಯಕಲ್ ಬಸವರಾಜ ಶಾಸ್ತ್ರಿಗಳು ಈ ಪತ್ರಿಕೆಯ ಸಂಪಾದಕರುಗಳು. ಇದು ಅಂದು ಕನ್ನಡನಾಡಿನ ಹಿರಿಮೆ ಹಾಗೂ ನಾಡಿನ ಭೌಗೋಳಿಕ ಸ್ಥಿತಿಯ ಬಗ್ಗೆ ಅತ್ಯಂತ ಹೆಚ್ಚಿನ ಮಾಹಿತಿಯನ್ನು ನೀಡುತ್ತಿತ್ತು. ಆರ್ಥಿಕ ತೊಂದರೆಯಿಂದಾಗಿ ೧೯೩೦ರಲ್ಲಿ ಪತ್ರಿಕೆಯು ನಿಂತುಹೋಯಿತು. 'ಧರ್ಮಸಂಜೀವಿನಿ' ವೀರಶೈವ ಧರ್ಮದ ಪ್ರಚಾರಕ್ಕೆ ಹೆಚ್ಚು ಒತ್ತು ಕೊಟ್ಟಂತಹ ಪತ್ರಿಕೆಯಾಗಿತ್ತೆನಬಹುದು. ಪೋತಾಪುರ ರಾಚೋಟಯ್ಯ ಅವರು ಸಂಪಾದಕರಾಗಿದ್ದಂತಹ 'ದಕ್ಕನ್ ಪ್ರಭಾತ' (೧೯೪೦) ವಾರಪತ್ರಿಕೆಯು ರಾಯಚೂರಿನಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಹೊರಬಂದ ಮತ್ತೊಂದು ಪ್ರಮುಖ ಪತ್ರಿಕೆ. ನಾಡಿನ ಹಿರಿಮೆಯನ್ನು ಹೆಚ್ಚಾಗಿ ಸೂಚಿಸುತ್ತಿದ್ದಂತಹ 'ದಕ್ಕನ್ ಪ್ರಭಾತ' ಹೈದರಾಬಾದ್ ಕರ್ನಾಟಕದಲ್ಲಿ ತುಂಬಾ ಜನಪ್ರಿಯವಾಗಿತ್ತು. ೧೯೪೪ರಲ್ಲಿ ಗುಲ್ಬರ್ಗದಿಂದ ಪ್ರಕಾಶಿತಗೊಂಡ 'ನಾಗರಿಕ' ವಾರಪತ್ರಿಕೆ ೧೯೪೬ರಲ್ಲಿ ರಾಯಚೂರಿಗೆ ವರ್ಗವಾಯಿತು. ದತ್ತಾತ್ರಯರಾವ್ ಅವರಾದಿ ಮತ್ತು ಎಸ್. ಹನುಮಂತ

ರಾವ್ ಅವರು ಸಂಪಾದಕರಾಗಿದ್ದ 'ನಾಗರಿಕ' ಪತ್ರಿಕೆಯು ಉಗ್ರರೂಪದ ರಾಷ್ಟ್ರೀಯವಾದಿ ಪತ್ರಿಕೆಯಾಗಿತ್ತು. ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕದ ಪ್ರದೇಶಗಳಲ್ಲಿ ಈ ಪತ್ರಿಕೆಗಳ ಪಾತ್ರ ಹಿರಿದಾದದ್ದು.

ಬಳ್ಳಾರಿ ಅಂದಿನಿಂದ ಇಂದಿನವರೆಗೂ ಹೊಸ ಹೊಸ ಸುದ್ದಿಯಲ್ಲಿರುವ ಜಿಲ್ಲೆ. ಹಿಂದೆ ಮದ್ರಾಸ್ ಕರ್ನಾಟಕದ ಭಾಗವಾಗಿದ್ದಂತಹ ಬಳ್ಳಾರಿ ತೀರಾ ಇತ್ತೀಚೆಗೆ ಬದಲಾದ ರಾಜಕೀಯ ಪರಿಸರದಲ್ಲಿ ಹೈದರಾಬಾದ್ ಕರ್ನಾಟಕದ ಒಂದು ಅಂಗವಾಗಿ ಗುರುತಿಸಲ್ಪಡುತ್ತಿದೆ. ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಬಳ್ಳಾರಿಯನ್ನು ಹೊಂದಿಸಿಕೊಂಡು ನೋಡಿದರೆ ಉಳಿದ ಮೂರು ಹೈದರಾಬಾದ್ ಕರ್ನಾಟಕದ ಜಿಲ್ಲೆಗಳ ಪ್ರಾರಂಭಿಕ ದಾಖಲೆಗಳು ಸ್ವಲ್ಪ ಮಸಕಾಗುತ್ತವೆ. ಏಕೆಂದರೆ ಬಳ್ಳಾರಿ ಇಡೀ ಕರ್ನಾಟಕದ ಪತ್ರಿಕೋದ್ಯಮದಲ್ಲೇ ಹಲವಾರು ಪ್ರಥಮಗಳನ್ನು ದಾಖಲಿಸಿಕೊಂಡ ಜಿಲ್ಲೆ. ಏಕೆಂದರೆ ರಾಜ್ಯದ ಮೊಟ್ಟ ಮೊದಲನೆಯ ಕನ್ನಡ ಅಚ್ಚುಕೂಟವನ್ನು ಆರಂಭಿಸಿದ್ದು ಬಳ್ಳಾರಿಯಲ್ಲಿ. ಬಳ್ಳಾರಿಗೆ ವಲಸೆ ಬಂದಿದ್ದಂತಹ ಜರ್ಮನ್ ಪಾದ್ರಿಗಳು ೧೮೧೨ರಲ್ಲಿ ಈ ಸಾಹಸವನ್ನು ಮಾಡಿದರು. ಕೆಲವು ಕನ್ನಡಿಗರನ್ನು ಜರ್ಮನಿಗೆ ಕರೆದುಕೊಂಡುಹೋಗಿ ಕನ್ನಡದ ಮುದ್ರಣದ ಮೊಳೆಗಳನ್ನು ತಯಾರಿಸುವ ವಿಧಾನವನ್ನು ತಿಳಿಸಿಕೊಟ್ಟರು. ಮೊದಲು ಕಲ್ಲಚ್ಚು ಎಂಬ ಕಲ್ಲಿನಿಂದ ತಯಾರಿಸಿದ ಮುದ್ರಣ ಯಂತ್ರದಲ್ಲಿ ಅವರು 'ಕನ್ನಡ ಸಮಾಚಾರ' ಎಂಬ ಪತ್ರಿಕೆಯನ್ನು ಹೊರತಂದರು. ಇದು ಕರ್ನಾಟಕ ರಾಜ್ಯದ ಮೊಟ್ಟಮೊದಲ ಕನ್ನಡ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಈ ಮಧ್ಯೆ ಮಂಗಳೂರಿನಲ್ಲಿ ಪ್ರಕಟವಾದ 'ಮಂಗಳೂರು ಸಮಾಚಾರ್' ಕೂಡ ಕನ್ನಡದ ಮೊದಲ ಪತ್ರಿಕೆ ಎಂಬ ವಾದವೂ ಇದೆ. ಆದರೆ ಮಂಗಳೂರು ಸಮಾಚಾರ್ ಪ್ರಕಟವಾದದ್ದು ೧೮೪೨ರಲ್ಲಿ. ಬಳ್ಳಾರಿಯ 'ಕನ್ನಡ ಸಮಾಚಾರ್' ಅಚ್ಚುಕೂಟದಲ್ಲಿ ಮುದ್ರಿತವಾದದ್ದು ೧೮೧೨ರಲ್ಲಿ ಎಂಬುವುದು ಸತ್ಯ. ನಂತರ ಅಂದು ಬಳ್ಳಾರಿಯಲ್ಲಿ ಪ್ರಕಟವಾಗುತ್ತಿದ್ದಂತಹ ಪತ್ರಿಕೆಗಳೆಂದರೆ ೧೮೮೦ರಿಂದ ೧೯೩೦ರ ವರೆಗೆ ಪ್ರಕಟಗೊಂಡ 'ವಿಜಯಧ್ವಜ', ೧೯೦೫ರಲ್ಲಿ 'ಸನ್ಮಾರ್ಗ ಪತ್ರಿಕೆ', ೧೯೧೨ರಲ್ಲಿ 'ಬಳ್ಳಾರಿ ಭಾರತಿ' ಪತ್ರಿಕೆಗಳು ಕನ್ನಡನಾಡನ್ನು ಜನಪ್ರಿಯಗೊಳಿಸಲು ಹೆಚ್ಚಿನ ಗಮನ ಹರಿಸಿದವು.

೩.೩. ಕರ್ನಾಟಕ ಮತ್ತು ಆಂಧ್ರಪ್ರದೇಶ

ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯವು ವೈಭವದಿಂದ ಆಳ್ವಿಕೆ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ಕನ್ನಡ ನಾಡಿನೊಂದಿಗೆ ಆಂಧ್ರದವರೂ ಕೂಡಿಕೊಂಡು ಪ್ರೀತಿ ಹಾಗೂ ಸಹಕಾರವನ್ನು ಪಡೆದರು. ಹೀಗೆ ಸಂಪಾದಿಸಿದ ಪ್ರೀತಿ ಹಾಗೂ ಸಹಕಾರ ಮನೋಭಾವವೇ ಪ್ರಾಂತ್ಯರಚನೆಯ ಸಮಯದಲ್ಲಿ ವಿರಸಕ್ಕೆ ಕಾರಣವಾಯಿತು. ಆದರೆ ಇಂದು ಅದು ಕಡಿಮೆಯಾಗಿ ಮೊದಲಿನ ರೀತಿಯಲ್ಲಿಯೇ ಪ್ರೀತಿ ವಾತ್ಸಲ್ಯದಿಂದ ಕೂಡಿ ಬಾಳುತ್ತಿದ್ದಾರೆ. ಆದರೆ ಪ್ರಾರಂಭದಲ್ಲಿ ಬಳ್ಳಾರಿ ಪ್ರಶ್ನೆಗೆ ಸಂಬಂಧಿಸಿದಂತೆ ಆಂಧ್ರವು ಉಗ್ರ ಹೋರಾಟಕ್ಕಿಳಿದಿರುವುದು ಕಂಡುಬರುತ್ತದೆ.

ಆಂಧ್ರಪ್ರದೇಶದವರು ಬಳ್ಳಾರಿಯು ಸಂಪೂರ್ಣವಾಗಿ ಆಂಧ್ರಕ್ಕೆ ಸೇರಬೇಕೆಂದು ರಾಜ್ಯದಾದ್ಯಂತ ಉಗ್ರ ಚಳವಳಿಯನ್ನು ಕೈಗೊಂಡರು. ಕೇಂದ್ರ ಸರ್ಕಾರವು ದೇಶವನ್ನು ಭಾಷಾವಾರು ಪ್ರಾಂತ್ಯಗಳನ್ನಾಗಿ ವಿಂಗಡಿಸಿದಾಗ, ಬಳ್ಳಾರಿಯು ಆಂಧ್ರಕ್ಕೊ, ಕರ್ನಾಟಕಕ್ಕೊ ಎಂಬ ಗೊಂದಲವು ಎದ್ದಿತು. ಈ ಗೊಂದಲದ ನಿರ್ಮೂಲನೆಗಾಗಿ ಅಖಿಲಭಾರತ ಕಾಂಗ್ರೆಸ್ ಸಮಿತಿಯು ಖೇಳಕರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿಯು ಈ ಭಾಗದಲ್ಲಿ ಸೂಕ್ಷ್ಮವಾಗಿ ಕ್ಷೇತ್ರಕಾರ್ಯ ಕೈಗೊಂಡು ನಂತರ ಬಳ್ಳಾರಿಯು ಕನ್ನಡ ಪ್ರದೇಶವೆಂದು ತೀರ್ಮಾನಿಸಿತು. ಈ ದೃಷ್ಟಿಯಿಂದಲೇ ಅಂತ ಕಾಣುತ್ತಿದೆ ಇಂದಿಗೂ ಸಹ ಬಳ್ಳಾರಿಯು ಕಾಂಗ್ರೆಸ್ ಪಕ್ಷಕ್ಕೆ ತುಂಬ ನಿಷ್ಠೆಯಾಗಿ ನಡೆದುಕೊಂಡು ಬರುತ್ತಿದೆ. ಇದುವರೆಗೆ ಇಲ್ಲಿ ಗೆದ್ದಿರುವ ಲೋಕಸಭೆಯ ಸದಸ್ಯರು, ವಿಧಾನಸಭೆಯ ಸದಸ್ಯರು ಕಾಂಗ್ರೆಸ್ಸಿಗರೆ ಆಗಿದ್ದಾರೆ. ಆದರೆ ೧೯೪೬, ೧೯೫೩, ೧೯೭೦ ಈ ವರ್ಷಗಳಲ್ಲಿ ಹೆಚ್ಚಾಗಿ ಕೆಲವು ಆಂಧ್ರಪ್ರದೇಶದ ನಾಯಕರು ತಮ್ಮ ರಾಜಕೀಯ ಕುತಂತ್ರಕ್ಕಾಗಿ ಬಳ್ಳಾರಿಯ ಕೆಲವು ತಾಲ್ಲೂಕು ಹಾಗೂ ಗ್ರಾಮಗಳನ್ನು ಆಂಧ್ರ ಸೀಮೆಗೆ ಸೇರಿಸಿಕೊಡಬೇಕೆಂದು ಸಂಕಲ್ಪ ಮಾಡುತ್ತಾ ಬರುತ್ತಿದ್ದರು. ಅವರ ಪ್ರಯತ್ನದ ತಪ್ಪು ಗ್ರಹಿಕೆಯು ಅರಿವಾಗಿ ಇಂದು ತಟಸ್ಥರಾಗಿರುವುದು ಕಂಡುಬರುತ್ತದೆ. ಭಾರತದ ಮಟ್ಟದಲ್ಲಿ ಭಾರತ-ಪಾಕಿಸ್ತಾನದ ಗಡಿ ಸಮಸ್ಯೆಗೆ ದೇಶದ ಜನರೆಲ್ಲರೂ ಒಟ್ಟಾಗುವ ಹಾಗೆ, ಪ್ರತಿಭಟಿಸುವ ಹಾಗೆ, ಭಾರತ-ಬಾಂಗ್ಲದೇಶದ ಗಡಿ ಸಮಸ್ಯೆಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಭಾರತ ಮತ್ತು ಬಾಂಗ್ಲಾದೇಶಗಳಿಗೆ ಗಡಿ ಸಮಸ್ಯೆ ಇಲ್ಲವೆಂದಲ್ಲ, ಆದರೆ ಇವು ಪಾಕಿಸ್ತಾನದ ರೀತಿ ಅರ್ಥವಿಲ್ಲದ ಹಾಗೆ ನಡೆದುಕೊಳ್ಳುವುದಿಲ್ಲ. ಅದೇ ರೀತಿ ರಾಜ್ಯದಲ್ಲಿ ಕರ್ನಾಟಕ-ಮಹಾರಾಷ್ಟ್ರಗಳ ಗಡಿ ಸಮಸ್ಯೆ ಎಂದರೆ ರಾಜ್ಯವೇ ಒಂದಾಗಲು ಬಯಸುತ್ತದೆ. ಆದರೆ ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳೊಂದಿಗೆ ಉಗ್ರವಾದ ಪ್ರತಿಭಟನೆ, ಚಳವಳಿಗೆ ಇಳಿಯಲು ಬಯಸುವುದಿಲ್ಲ. ಇದಕ್ಕೆಲ್ಲ ನಾವು ನೆರೆಯ ರಾಜ್ಯಗಳೊಂದಿಗೆ ಹೊಂದಿರುವ ಸೌಹಾರ್ದಯುತ ಸಂಬಂಧವೇ ಆಗಿರುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ (೧೯೪೩) ಆಂಧ್ರ ಮಹಾಸಭೆಯ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾಗಿದ್ದಂತಹ ಪಿ. ವೆಂಕಟಸುಬ್ಬರಾಯರು ಬಳ್ಳಾರಿ ನಗರದಲ್ಲಿ ಕನ್ನಡ ಜನರಿಗಿಂತ ತೆಲುಗು ಜನರು ಹೆಚ್ಚಾಗಿದ್ದಾರೆಂದು, ಆದ ಕಾರಣ ಆ ನಗರ ಹಾಗೂ ಅದರ ಸುತ್ತಮುತ್ತಲಿನ ಹಳ್ಳಿಗಳೆಲ್ಲವೂ ಆಂಧ್ರ ಪ್ರಾಂತ್ಯಕ್ಕೆ ಸೇರಬೇಕೆಂದೂ ಅಭಿಪ್ರಾಯಪಟ್ಟಿದ್ದರು. ಈ ಸಂದರ್ಭದಲ್ಲಿ ಹಲವು ಪ್ರಶ್ನೆಗಳು ತಲೆಯೆತ್ತುವುದು ಸಹಜವೇ. ಪ್ರಮುಖವಾಗಿ ತಲೆಯೆತ್ತುವ ಪ್ರಶ್ನೆ ಎಂದರೆ ಖೇಳಕರ್‌ರವರ ವರದಿಯ ಸ್ಥಿತಿಗತಿ ಏನಾಯಿತೆಂಬುದು ಸಹಜವಾಗಿ ಮೂಡುತ್ತದೆ.

ನಂತರ ಮಹಾಜನ ವರದಿಯು ಹೊರಬಂದ ನಂತರ ಬಳ್ಳಾರಿಯು ಕನ್ನಡ ಮಾತನಾಡುವ ಪ್ರದೇಶವಲ್ಲದೆ ಕರ್ನಾಟಕದ ವೈಭವವನ್ನು ಜಗತ್ತಿಗೆ ಸಾರುತ್ತಿರುವ ವಿಜಯನಗರ ಸಾಮ್ರಾಜ್ಯವನ್ನು ತನ್ನ ಮಡಿಲಿನಲ್ಲಿ ಸಾಕಿಸಲುಹಿ ಬೆಳಸಿದ ಹೆಮ್ಮೆಯ ಜಿಲ್ಲೆ ಎಂದು ತಿಳಿಸಲಾಯಿತು. ಆದರೆ ಮಹಾಜನ ವರದಿಯು ಕನ್ನಡ ನಾಡಿಗೆ ಅನ್ಯಾಯವನ್ನು ಮಾಡಿತು ಎಂಬುವುದು ಸತ್ಯ. ಇಂದಿಗೂ ಸಹ ಕನ್ನಡ ಭಾಷೆಯನ್ನೆ

ಹೊಂದಿರುವಂತಹ ಆದವಾನಿ, ಆಲೂರು, ರಾಯದುರ್ಗಗಳ ಪೂರ್ಣ ತಾಲ್ಲೂಕುಗಳು, ಮಡಕ ಶಿರಾ, ಕಲ್ಯಾಣದುರ್ಗ, ಹಿಂದೂಪುರಗಳ ಕನ್ನಡ ಮಾತನಾಡುವ ಭಾಗಗಳೆಲ್ಲವೂ ಆಂಧ್ರಕ್ಕೆ ಸೇರುವಂತೆ ಶಿಫಾರಸ್ಸು ಮಾಡಿದ್ದರು. ಈ ಮೇಲಿನ ಊರುಗಳಲ್ಲಿ ಇಂದಿಗೂ ಸಹ ೬೧% ಕನ್ನಡ ಮಾತನಾಡುವ ಪ್ರದೇಶಗಳೇ ಆಗಿವೆ. ಈ ಪ್ರದೇಶದಲ್ಲಿ ಪ್ರತಿವರ್ಷವೂ ಸಹ ನಮ್ಮ ರಾಜ್ಯ ಸರ್ಕಾರವು ಗಡಿನಾಡಿನ ಉತ್ಸವಗಳನ್ನು ಏರ್ಪಡಿಸಿಕೊಂಡು ಅದರ ಮೂಲಕ ಗಡಿನಾಡಿನ ಜನರ ಸಮಸ್ಯೆಯ ಬಗ್ಗೆ ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳುವಂತಹ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ. ಈ ರೀತಿಯ ಗಡಿನಾಡಿನ ಉತ್ಸವಗಳು ಒಂದು ರೀತಿಯಲ್ಲಿ ನಾಡು ಕಟ್ಟುವ ಕ್ರಿಯೆಗಳಿಗೆ ನಾಂದಿಯಾಗುವುದೆಂದರೆ ತಪ್ಪಾಗದು. ಇಂದಿಗೂ ಸಹ ಆದವಾನಿ ಮತ್ತು ಆಲೂರುಗಳಲ್ಲಿ ೮ ಕನ್ನಡ ಸಂಘಗಳಿದ್ದು, ಇವುಗಳು ಈ ಪ್ರದೇಶದಲ್ಲಿನ ಕನ್ನಡ ಶಾಲೆಗಳ ಪ್ರಗತಿಯ ಬಗ್ಗೆ, ಕನ್ನಡ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸಿ, ಕನ್ನಡ ಜನರಿಗೆ ಅನ್ಯಾಯವಾದರೆ ಅದರ ವಿರುದ್ಧ ಚಳವಳಿ ನಡೆಸಿಕೊಂಡು ಸರ್ಕಾರದ ಗಮನ ಸೆಳೆಯುವಂತೆ ಕೆಲಸ ಮಾಡಿಕೊಂಡು ಬರುತ್ತಿವೆ. ಈ ಸಂಘ ಸಂಸ್ಥೆಗಳು ಕರ್ನಾಟಕ ಸರ್ಕಾರದ ಜೊತೆ ನಿಕಟ ಸಂಪರ್ಕ ಹೊಂದಿರುವುದು ಕಂಡುಬರುತ್ತದೆ. ಇವುಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆ ನಿಕಟ ಸಂಬಂಧ ಹೊಂದಿ ಅದರ ಮುಖಾಂತರ ಅನೇಕ ಕನ್ನಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚಿಸಿ ಮುನ್ನಡೆಯುತ್ತಿವೆ. ಆದವಾನಿಯಲ್ಲಿರುವ ಪ್ರಮುಖ ಕನ್ನಡ ಸಂಘಗಳೆಂದರೆ, (ಅ) ಭುವನೇಶ್ವರಿ ಕನ್ನಡ ಸಂಘ(ನೊ.) ಆದವಾನಿ, (ಆ) ವಿಜಯನಗರ ಕನ್ನಡ ಸಂಘ(ನೊ.) ಆದವಾನಿ, (ಇ) ಶ್ರೀ ವೆಂಕಟೇಶ್ವರ ಕನ್ನಡ ಯುವಕ ಸಂಘ. (ನೊ) ಆದವಾನಿ, ಇವು ಪ್ರಮುಖವಾಗಿವೆ.

ಆಲೂರಿನಲ್ಲಿ ಇಂದಿಗೂ ಸಹ ಅನೇಕ ಕನ್ನಡ ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು ಅದರಲ್ಲಿ 'ರಾಜೇಶ್ವರಿ ಕನ್ನಡ ಮಹಿಳಾ ಸಮಾಜ' (ರಿ.) ಆಲೂರು. ಪಾತ್ರ ಪ್ರಮುಖವಾಗಿದೆ. ಆದವಾನಿ, ಆಲೂರುಗಳು ಎಂದು ಕರ್ನಾಟಕದಿಂದ ಬೇರ್ಪಟ್ಟವೋ ಅಂದಿನಿಂದಲೂ ಸಮಯ ಬಂದಾಗಲೆಲ್ಲ ಚಳವಳಿ ನಡೆಸಿಕೊಂಡು ನಂತರ ಈ ಸಂಘವು ತನ್ನ ಸಂಘದ ವತಿಯಿಂದಲೇ ಶಿಕ್ಷಣ ಸಂಸ್ಥೆಗಳನ್ನು ಹೊಂದಿ ಕನ್ನಡ ಶಿಕ್ಷಣಕ್ಕಾಗಿ ಈ ಪ್ರದೇಶದಲ್ಲಿ ಶ್ರಮಿಸುತ್ತಾ ಬರುತ್ತಿದೆ. ಕನ್ನಡ ನಾಡಿನ ಚರಿತ್ರೆ, ಅದರ ಮೇರೆಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯವನ್ನು ಮಾಡಿಕೊಂಡು ಬರುತ್ತಿವೆ. ಈ ಎಲ್ಲ ಸಂಘ ಸಂಸ್ಥೆಗಳಿಗೆ ನಮ್ಮ ರಾಜ್ಯ ಸರ್ಕಾರದ ಕಾನೂನಿನಲ್ಲಿ ಸಡಿಲಿಕೆ ಇದೆ.

ರಾಜ್ಯದಲ್ಲಿ ಪ್ರಥಮ ಬಾರಿಗೆ ಗಡಿನಾಡಿನ ಉತ್ಸವಗಳನ್ನು ಆಚರಿಸುವ ಪದ್ಧತಿಯನ್ನು ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ೧೯೮೨ರಲ್ಲಿ ಜಾರಿಗೆ ತಂದರು. ಅಲ್ಲಿಂದ ಇಂದಿನವರೆಗೂ ಕೆಲವು ಅಡೆತಡೆ ಇದ್ದರೂ ಸಹ ನಡೆದುಕೊಂಡು ಬರುತ್ತಲಿವೆ. ಈ ಉತ್ಸವದಿಂದ ಗಡಿನಾಡಿನ ಜನರ ಕುಂದುಕೊರತೆಗಳನ್ನು ಅರಿತುಕೊಂಡು ಪರಿಹರಿಸುವ ಕೆಲಸವನ್ನು ಮಾಡಿಕೊಂಡು ಬರುವಂತಾಗಿದೆ. ೧೯೮೮ರಲ್ಲಿ ಚಿಕ್ಕೋಡಿಯಲ್ಲಿ, ೧೯೮೭ರಲ್ಲಿ ನಿಪ್ಪಾಣಿ ನಗರದಲ್ಲಿ, ೧೯೯೧ರಲ್ಲಿ ಕಾಸರಗೋಡಿನಲ್ಲಿ ೧೯೯೩ರಲ್ಲಿ ಹೊಸೂರಿನಲ್ಲಿ, ೧೯೯೯ ಏಪ್ರಿಲ್ ೧೦ ರಂದು ಬಳ್ಳಾರಿ ಸಮೀಪದ ಆಂಧ್ರಪ್ರದೇಶದ

ಜಿಲ್ಲೆಯಾದ ಅನಂತಪುರ ಜಿಲ್ಲೆಯ ಹಿರೇಹಾಳ್ ಎಂಬ ಗ್ರಾಮದಲ್ಲಿ ೧೯೯೯ರ ಗಡಿನಾಡ ಉತ್ಸವವನ್ನು ಹಮ್ಮಿಕೊಂಡು ಗಡಿ ಪ್ರದೇಶಗಳ ಸಮಸ್ಯೆಗಳ ಆಳ, ಅದರ ಸೂಕ್ಷ್ಮತೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹಾರದ ಕೆಲಸವನ್ನು ಕೈಗೊಂಡಿದ್ದಾರೆ. ಇತಿಹಾಸದ ಪುಟಗಳಲ್ಲಿ ಇಂದಿಗೂ ನಾವು ಬಳ್ಳಾರಿ ಜಿಲ್ಲೆಗೆ ೧೫ ತಾಲ್ಲೂಕುಗಳು ಸೇರಿದ್ದನ್ನು ಕಾಣಬಹುದು. ಆದರೆ ಇಂದು ಕೇವಲ ೭ ತಾಲ್ಲೂಕುಗಳಿಗೆ ಇಳಿದಿರುವುದನ್ನು ನೋಡಿದರೆ ಆಶ್ಚರ್ಯ ಪಡಬೇಕಾಗುತ್ತದೆ. ಇಂದು ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ, ಹೊಸಪೇಟೆ, ಸಂಡೂರು, ಸಿರಗುಪ್ಪ, ಹೂವಿನ ಹಡಗಲಿ, ಹಗರಿ ಬೊಮ್ಮನಹಳ್ಳಿ, ಕೂಡ್ಲಿಗಿಗಳು ಮಾತ್ರ ಉಳಿದುಕೊಂಡಿದೆ. ೧೯೯೭ರಲ್ಲಿ ಏಳು ಹೊಸ ಜಿಲ್ಲೆಗಳು ನಿರ್ಮಾಣಗೊಂಡಾಗ ನೆರೆಯ ದಾವಣಗೆರೆಯೂ ಹೊಸಜಿಲ್ಲೆಯಾಗಿ ನಿರ್ಮಾಣವಾಯಿತು. ಆಗ ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿದ್ದಂತಹ ಹರಪನಹಳ್ಳಿಯನ್ನು ಬಿಟ್ಟುಕೊಡಲಾಯಿತು. ಆಡಳಿತಾತ್ಮಕವಾದ ನಿರ್ಧಾರದಿಂದಾಗಿ ಕೆಲವು ತಾಲ್ಲೂಕುಗಳು ಹೊರರಾಜ್ಯದಲ್ಲಿಯೂ, ಮತ್ತು ಕೆಲವು ರಾಜ್ಯದ ಬೇರೆ ಜಿಲ್ಲೆಗಳಲ್ಲಿಯೂ ಉಳಿಯುವಂತಾಗಿದೆ. ಹಿರೇಹಾಳ್ ಸಮ್ಮೇಳನದಲ್ಲಿ ಭಾಗವಹಿಸಿದ್ದಂತಹ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಡಾ. ಚಂದ್ರಶೇಖರ ಪಾಟೀಲರು (ಚಂಪಾ) ಗಡಿನಾಡಿನ ಶಿಕ್ಷಣ, ಉದ್ಯೋಗ, ಸಾಂಸ್ಕೃತಿಕ ಸಮಸ್ಯೆಗಳಿಗೆ ಪರಿಹಾರ ನೀಡಲು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಗಡಿನಾಡಿನ ಜನರ ಸವಲತ್ತುಗಳ ಸೇತುವೆ ಕಟ್ಟಲು ಆಂಧ್ರ-ಕರ್ನಾಟಕಗಳೆರಡೂ ಅರ್ಧಅರ್ಧ ಹಾದಿಯಲ್ಲಿ ಮುಂದೆ ಬರಬೇಕು ಎಂದು ಕಳಕಳಿಯ ಮನವಿ ಮಾಡಿಕೊಂಡಿದ್ದಾರೆ. ಸಭೆಯಲ್ಲಿಯೇ ಹಾಜರಿದ್ದಂತಹ ಆಂಧ್ರಪ್ರದೇಶದ ಶಿಕ್ಷಣ ಮಂತ್ರಿಗಳಲ್ಲಿ ಗಡಿನಾಡಿನ ಕನ್ನಡಿಗರಿಗೆ ಉತ್ತಮ ಶಿಕ್ಷಣ ನೀಡುವಂತೆ ವಿನಂತಿಸಿಕೊಂಡರು. ಇಂತಹ ಗಡಿನಾಡ ಉತ್ಸವಗಳನ್ನು ಆಚರಿಸುತ್ತಿರುವುದು ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯ ಒಂದೇ.

೩.೪. ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕರ್ನಾಟಕ ಸರ್ಕಾರವು ಗಡಿನಾಡಿನ ಜನರ ಸಮಸ್ಯೆಗಳು ಕೊನೆಗೊಳಿಸಲು ಹಾಗೂ ಅವರುಗಳ ಸಂಸ್ಕೃತಿಯನ್ನು ಉಳಿಸಿಕೊಂಡು ಉಪಯೋಗವಾಗುವಂತೆ 'ಕನ್ನಡ ಕಾವಲು ಸಮಿತಿ'ಯನ್ನು ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಸ್ಥಾಪಿಸಿ ಅದಕ್ಕೆ ಖ್ಯಾತ ಪತ್ರಕರ್ತರಾದ ನಾಡಿನ ಹಿರಿಯ ಚೇತನ ಡಾ. ಪಾಟೀಲ ಪುಟ್ಟಪ್ಪನವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ನಾಡಿನ ಪ್ರಖ್ಯಾತ ಪತ್ರಕರ್ತರೂ, ಆಗಿರುವಂತಹ ಪುಟ್ಟಪ್ಪನವರು ತಮ್ಮ ಅಧಿಕಾರದ ಅವಧಿಯಲ್ಲಿ ಅನೇಕ ರೀತಿಯ ಗಡಿ ಪ್ರದೇಶದ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಸಫಲರಾಗಿದ್ದಾರೆ. ಬೆಳಗಾವಿ ಹಾಗೂ ಕಾಸರಗೋಡಿನ ಬಗ್ಗೆ ಅವರು ಹಲವಾರು ಲೇಖನ ಮತ್ತು ಭಾಷಣಗಳ ಮೂಲಕ ಅರಿವು ಮೂಡಿಸಿದ್ದಾರೆ. ನಂತರ ಎಸ್. ಬಂಗಾರಪ್ಪ ನೇತೃತ್ವದ ಕಾಂಗ್ರೆಸ್ ಸರ್ಕಾರವು ಇದನ್ನೇ ಬದಲಾಯಿಸಿ ಕಾವಲು ಸಮಿತಿ ಎನ್ನುವುದಕ್ಕೆ ಸರಿಸಮನಾದ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ' ಎಂಬ ಮಂಡಳಿಯನ್ನು ೧೯೯೨ರಲ್ಲಿ ಸ್ಥಾಪಿಸಿತು. ಈ ಸಂಸ್ಥೆಯು ಇಂದು ಕನ್ನಡ ನಾಡಿನ ಗಡಿಪ್ರದೇಶ, ಅವುಗಳ ರಕ್ಷಣೆ ಹಾಗೂ ಅಭಿವೃದ್ಧಿಯ ಬಗ್ಗೆ ಹಗಲಿರುಳು ದುಡಿಯುತ್ತಿದೆ. ಶಿಕ್ಷಣತಜ್ಞ ಎಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಮಹೋನ್ನತ ಸ್ಥಾನವನ್ನು ಪಡೆದ

ಪ್ರಾಧಿಕಾರವು ಇಂದು ಪ್ರಖ್ಯಾತ ಸಾಹಿತಿ, ಚಿಂತಕ, ಭಾಷಾಭಿಮಾನಿಯೂ ಆಗಿರುವಂತಹ ನಾಡಿನ ಸಾಹಿತಿ ಡಾ. ಚಂದ್ರಶೇಖರ ಪಾಟೀಲರವರ (ಚಂಪಾ) ಅಧ್ಯಕ್ಷತೆಯಲ್ಲಿ ಪ್ರಗತಿಪರವಾದ ರೀತಿಯಲ್ಲಿ ಮುನ್ನಡೆಮಕೊಂಡು ಬಂದು ಈಗ ಹಿರಿಯ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ಮುನ್ನಡೆಯುತ್ತಿದೆ. ಚಂಪಾರವರು ಗಡಿನಾಡಿನ ಪ್ರದೇಶದಲ್ಲಿ ಕಡ್ಡಾಯವಾಗಿ ಕನ್ನಡ ಶಾಲೆಗಳನ್ನು ಸ್ಥಾಪಿಸಿ ಕನ್ನಡ ಶಿಕ್ಷಕರನ್ನು ನೇಮಿಸುವಲ್ಲಿ ಸಫಲರಾಗಿದ್ದಾರೆ. ಗಡಿನಾಡಿನ ಪ್ರದೇಶಗಳಾಗಿರುವಂತಹ ಬೆಳಗಾವಿ, ಹೊಸೂರು, ಆಂಧ್ರದ ಗಡಿ ಭಾಗಗಳಲ್ಲಿ ಕನ್ನಡದ ನಾಮಫಲಕಗಳನ್ನು ಕಡ್ಡಾಯಗೊಳಿಸಿ ಕನ್ನಡದ ಅಭಿವೃದ್ಧಿಗೆ ಸಹಕರಿಸಿದ್ದಾರೆ. ಮುಖ್ಯವಾಗಿ ಚಂದ್ರಶೇಖರ ಪಾಟೀಲರು ಗಡಿ ಭಾಗಗಳಲ್ಲಿರುವ ಕನ್ನಡಿಗರ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಸರ್ಕಾರದೊಂದಿಗೆ ಕಾಲಕಾಲಕ್ಕೆ ಸಮಲೋಚನೆ ನಡೆಸಲು 'ಗಡಿ ಕನ್ನಡಿಗರ ಸಲಹಾ ಸಮಿತಿ'ಗಳನ್ನು ರಚಿಸಲು ತೀರ್ಮಾನಿಸಿ ೨೮.೧೨.೧೯೯೮ರಂತು ಈ ಪ್ರಕಟಣೆಯನ್ನು ಪ್ರಕಟಿಸಿದ್ದಾರೆ.

ಈ ಪ್ರತಿಯೊಂದು ಸಮಿತಿಯೂ ಸಹ ಒಬ್ಬ ಸಂಚಾಲಕರನ್ನೊಳಗೊಂಡಂತೆ ಏಳು ಜನ ಸದಸ್ಯರುಗಳಿರುವಂತೆ ರೂಪಗೊಂಡಿರುತ್ತದೆ. ಪ್ರಸ್ತುತ ಇಂದು ಮಹಾರಾಷ್ಟ್ರ, ಆಂಧ್ರ, ಕೇರಳ ರಾಜ್ಯಗಳ ಗಡಿ ಕನ್ನಡಿಗರ ಸಲಹಾಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಗಿದ್ದು, ತಮಿಳುನಾಡು ಮತ್ತು ಗೋವಾ ರಾಜ್ಯಗಳ ಸಲಹಾ ಸಮಿತಿಯನ್ನು ಶೀಘ್ರದಲ್ಲೇ ನೇಮಿಸಿ ಪ್ರಕಟಿಸಲಾಗುವುದೆಂದು ತಿಳಿಸಿದ್ದಾರೆ. ಈ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ. ೨೮.೧೨.೧೯೯೮ರಂದು ಸೇರಿದ್ದಂತಹ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರಾಜ್ಯಸಮಿತಿಯ ಸಭೆಯಲ್ಲಿ ನಿರ್ಧರಿಸಿದಂತೆ ಈ ಕೆಳಕಂಡವರನ್ನು ಸಮಿತಿಯು ಸಂಚಾಲಕ ಹಾಗೂ ಸದಸ್ಯರನ್ನಾಗಿ ನೇಮಿಸಿದೆ.

ಮಹಾರಾಷ್ಟ್ರ ಗಡಿ ಪ್ರದೇಶದ ಅಧ್ಯಯನಕ್ಕಾಗಿ

೧. ಎನ್. ಎ. ವಾಲೆ (ಸಂಚಾಲಕ)
೨. ಧರೇಂದ್ರನಾಥ್ ಬಿದರಕೋಟೆ
೩. ಚನ್ನವೀರ ಕಲ್ಯಾಣಶೆಟ್ಟಿ
೪. ಮ. ಸಿ. ಬಿರದಾರ್
೫. ಡಾ. ವಸಂತ ದೀವಾನಜಿ
೬. ಮಾಣಿಕರಾವ್ ಬಿರಾದರ್
೭. ಶೈಲ ಕಲ್ಲಪ್ಪ ಹೊರ್ತೀಕರ್ (ಇವರೆಲ್ಲರೂ ಸದಸ್ಯರುಗಳು)

ಆಂಧ್ರಪ್ರದೇಶ ಗಡಿ ಪ್ರದೇಶದ ಅಧ್ಯಯನಕ್ಕಾಗಿ

೧. ಬಾ. ರಾ. ದತ್ತಾತ್ರೇಯ ಗೌಡ (ಸಂಚಾಲಕರು)
೨. ಎಲ್. ಮಲ್ಲೇಶಪ್ಪ
೩. ಅಮರ ದೀಕ್ಷಿತ್
೪. ಎಂ. ವೀರಭದ್ರಯ್ಯ
೫. ಶೆಟ್ರು ಸುರೇಶ್
೬. ಕುಂ. ವೀರಭದ್ರಪ್ಪ
೭. ಸುಭಾಷ್ ಪಾಟೀಲ್ (ಇವರೆಲ್ಲರೂ ಸದಸ್ಯರುಗಳು)

ಕೇರಳ ರಾಜ್ಯ ಗಡಿ ಪ್ರದೇಶದ ಅಧ್ಯಯನಕ್ಕಾಗಿ

೧. ಯು. ಪಿ. ಕುಣಿ ಕುಳ್ಳಾಯ (ಸಂಚಾಲಕ)
೨. ಪಿ. ಎಸ್. ಪುಣಿಂಚಿತ್ತಾಯ
೩. ಡಾ. ಲಲಿತಾ ಎನ್.ಎಸ್. ಭಟ್
೪. ಕೆ. ಭಾಸ್ಕರ್
೫. ರಾಘವ ಬಲ್ಲಾಳ
೬. ಡಾ. ಕೆ. ರಮಾನಂದ ಬನಾರಿ
೭. ರಾಧಾಕೃಷ್ಣ ಯಳಯುತ್ತಡ್ಕ (ಇವರೆಲ್ಲರೂ ಸದಸ್ಯರುಗಳು)

ಇಷ್ಟಲ್ಲದೆ ರಾಜ್ಯದ ಹಿತಾಸಕ್ತಿಯ ರಕ್ಷಣೆಗಾಗಿ ಕೇಂದ್ರ ಸರ್ಕಾರದ ಮೇಲೆ ಸೂಕ್ತ ಸಂದರ್ಭದಲ್ಲಿ ಸಂಬಂಧಪಟ್ಟಿರುವ ವಿಷಯದ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ರಾಜ್ಯದ ಸಂಸತ್ ಸದಸ್ಯರ ಸಮಲೋಚನಾ ಸಭೆಯನ್ನು ದೆಹಲಿಯಲ್ಲಿ ನಡೆಸಲು ಪ್ರಾಧಿಕಾರವು ಉದ್ದೇಶಿಸಿದ್ದಲ್ಲದೆ ಕನ್ನಡ ನಾಡಿಗಾಗಿ, ಕನ್ನಡ ಭಾಷೆಗಾಗಿ ಶ್ರಮಿಸಿದ, ಹೋರಾಟ ಮಾಡಿದ ಗಡಿನಾಡಿನ ಗಣ್ಯರಿಗೆ ಪ್ರತಿವರ್ಷವೂ ರಾಜ್ಯೋತ್ಸವ ಪ್ರಶಸ್ತಿ ನೀಡುವಂತೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲು ತೀರ್ಮಾನಿಸಿರುವುದು ಕಂಡುಬರುತ್ತದೆ. ಈ ಮಧ್ಯೆ ಇತ್ತೀಚಿಗೆ ಕರ್ನಾಟಕದ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಹಾರಾಷ್ಟ್ರ ಏಕೀಕರಣ ಸಮಿತಿಯ ವಿಧಾನಸಭಾ ಸದಸ್ಯರು ರಾಜ್ಯ ವಿಧಾನಸಭೆಯಲ್ಲಿ ವಿಧಾನಸಭೆ ಅಧಿವೇಶನ ನಡೆಯುತ್ತಿದ್ದಂತಹ ಸಂದರ್ಭದಲ್ಲಿಯೇ ಚಳವಳಿ ಮಾಡಿದ್ದಲ್ಲದೆ ೧೯೯೯ನೇ ಮಾರ್ಚ್ ೧೭ ರಂದು ಒಂದು ನಿಯೋಗದೊಂದಿಗೆ ದೆಹಲಿಗೆ ಹೋಗಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಗೃಹಮಂತ್ರಿ ಎಲ್. ಕೆ. ಅಡ್ವಾನಿಗಳನ್ನು ಕಂಡು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಒತ್ತಾಯಿಸಿ ಬಂದಿರುತ್ತಾರೆ. ಇದಕ್ಕೆ ಉತ್ತರವಾಗಿ ಮುಖ್ಯಮಂತ್ರಿ ಜೆ. ಹೆಚ್. ಪಟೇಲ್‌ರವರು ತಮ್ಮ ಉನ್ನತ ಮಟ್ಟದ ನಿಯೋಗದೊಂದಿಗೆ ಪ್ರಧಾನ ಹಾಗೂ ಗೃಹಮಂತ್ರಿಯವರನ್ನು ಭೇಟಿಮಾಡಿ ಮಹಾರಾಷ್ಟ್ರೀಯರ ಬೇಡಿಕೆಯ ತಪ್ಪು ಗ್ರಹಿಕೆಯನ್ನು ವಿವರಿಸಿ ಕರ್ನಾಟಕವು ಈಗಲೂ ಮಹಾಜನ್ ವರದಿಗೆ ಬದ್ಧವಾಗಿರುತ್ತದೆ ಎಂಬ ನಿಲುವನ್ನು ವ್ಯಕ್ತಪಡಿಸಿ ಬಂದಿರುತ್ತಾರೆ.

ಮೇಲಿನ ಇಂತಹ ಕ್ಲಿಷ್ಟ ಸಂದರ್ಭದಲ್ಲಿ ರಚನೆಯಾಗಿರುವ 'ಗಡಿ ಕನ್ನಡಿಗರ ಸಲಹಾ ಸಮಿತಿ' ಯಾವ ರೀತಿಯಲ್ಲೂ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡುವುದೂ ಎಂದು ಎದುರು ನೋಡಬೇಕು. ಇದಕ್ಕೆ ಶುಭವಾಗಲೆಂದು ಅಖಂಡ ಕನ್ನಡಿಗರ ಪರವಾಗಿ ಪ್ರಾರ್ಥಿಸಿ ಕೊಳ್ಳೋಣ.

ನೆರೆಯ ಉಭಯ ರಾಜ್ಯಗಳಲ್ಲಿ ಕನ್ನಡದ ನೆಲೆಗಳು ಸಿಕ್ಕಿಹಾಕಿಕೊಂಡಿರುವುದನ್ನು ಮತ್ತೆ ಪಡೆಯಬೇಕಾದರೆ ಪ್ರಮುಖವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಬಗೆಯ ಕ್ರಾಂತಿಯೇ ಆಗಬೇಕು. ಕನ್ನಡ ಸಂಸ್ಕೃತಿ ಪ್ರಧಾನವಾದಂತಹ ವಿದ್ಯಾಭ್ಯಾಸ, ಕನ್ನಡ ಸಾಹಿತ್ಯದ ವಿವಿಧ ರೂಪಗಳ ಪರಿಚಯ, ಕನ್ನಡ ನಾಡಿನ ಪ್ರಾಚೀನ ಇತಿಹಾಸದ ಪರಿಚಯದ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ಕನ್ನಡ ಪ್ರಜ್ಞೆ ಹಾಗೂ ಕನ್ನಡ ಚಳವಳಿ ಈ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆದು ತಾವಾಗಿಯೇ ಕರ್ನಾಟಕಕ್ಕೆ ಸೇರಲು ಬಯಸಬಹುದೆಂದು ನಾವುಗಳು ಆಶಯವನ್ನು ವ್ಯಕ್ತಪಡಿಸಬಹುದು.

೩.೫. ಬೆಳಗಾವಿಯಲ್ಲಿ ಕನ್ನಡ ರಾಜಕಾರಣಿಗಳ ಸ್ಥಿತಿ

ಬೆಳಗಾವಿಯಲ್ಲಿ ಇಂದು ಮಹಾರಾಷ್ಟ್ರ ಏಕೀಕರಣ ಸಮಿತಿಯು ತನ್ನದೆಯಾದ ರೀತಿಯಲ್ಲಿ ಬೆಳೆದು ಬೆಳಗಾವಿಯ ಮಹಾನಗರ ಪಾಲಿಕೆ ಹಾಗೂ ಎರಡು ಮೂರು ವಿಧಾನಸಭಾ ಸ್ಥಾನಗಳನ್ನು ಗೆದ್ದುಕೊಳ್ಳುವುದಕ್ಕೆ ಕನ್ನಡ ರಾಜಕಾರಣಿಗಳೇ ಕಾರಣವೆಂದು ಧೈರ್ಯವಾಗಿ ಹೇಳಬಹುದು. ನನ್ನ ದೃಷ್ಟಿಯಲ್ಲಿ ಮರಾಠಿ ರಾಜಕಾರಣ ಹಾಗೂ ಜನರಿಗೆ ತಮ್ಮ ಹಿಂಸಾಕೃತ್ಯಗಳನ್ನು ನೋಡಿ ಅಸಹ್ಯವೆನಿಸುವ ಬದಲು (ತಮ್ಮ ದುರಾಸೆಯ ಬೇಡಿಕೆಯ ಬಗ್ಗೆ) ತಾವು ನ್ಯಾಯಕ್ಕಾಗಿ ಎಷ್ಟು ಬಲವಾಗಿ ಹೋರಾಡುತ್ತಿದ್ದೇವೆ ಎಂಬ ಜಂಬವೇ ಹುಟ್ಟಿಕೊಂಡಿರುತ್ತದೆ. ಜಿಲ್ಲೆಯಲ್ಲಿ ಚಿಕ್ಕೋಡಿ, (ಮೀಸಲು) ಬೆಳಗಾವಿ (ಸಾಮಾನ್ಯ) ಎಂಬ ಎರಡು ಲೋಕಸಭಾ ಕ್ಷೇತ್ರಗಳಿವೆ. ಚಿಕ್ಕೋಡಿಯಿಂದ ಕೇಂದ್ರದ ಮಾಜಿ ಸಚಿವರಾದ ಬಿ. ಶಂಕರಾನಂದರು ಕಾಂಗ್ರೆಸ್ ಪಕ್ಷದಿಂದ ಸತತವಾಗಿ ೭ ಸಲ ಆಯ್ಕೆಯಾಗಿದ್ದರು, ಬೆಳಗಾವಿ ಕ್ಷೇತ್ರದಿಂದಲೂ ಕಾಂಗ್ರೆಸ್ ಅಭ್ಯರ್ಥಿಗಳೇ ಆಯ್ಕೆಯಾಗುತ್ತಾ ಬಂದರು. ಎಸ್. ಬಿ. ಸಿದ್ನಾಳ್ ಸತತವಾಗಿ ನಾಲ್ಕು ಸಲ ಬೆಳಗಾವಿಯಿಂದ ಗೆದ್ದರು. ಆದರೆ ಇವರ್‍ಯಾರೂ ಸಹ ಇಂದು ಬೃಹತ್ತಾಗಿ ಬೆಳೆದಿರುವ ಗಡಿ ಸಮಸ್ಯೆಯ ಬಗ್ಗೆ ಹೆಚ್ಚಿನ ಗಮನ ಹರಿಸಿದಂತೆ ಕಂಡುಬರುವುದಿಲ್ಲ. ಅಲ್ಲಿ ಇಲ್ಲಿ ಸ್ವಲ್ಪ ಗಮನಿಸಿದರೆ ಹೆಚ್ಚಿನದೇನೋ ಕಂಡುಬರುವುದಿಲ್ಲ. ನಂತರ ಇಂದು ಬಾಬಾಗೌಡ ಪಾಟೀಲ್‌ರವರು ಬಿ.ಜೆ.ಪಿ. ಪಕ್ಷದಿಂದ ಸಂಸತ್ ಸದಸ್ಯರಾಗಿ, ಕೇಂದ್ರದಲ್ಲಿ ರಾಜ್ಯ ಮಂತ್ರಿಯೂ ಆಗಿದ್ದಾರೆ.

ಇಂದಿನ ಬೆಳಗಾವಿಯ ರಾಜಕೀಯ ಮುಖಂಡರು ತಮ್ಮ ಸ್ವಾರ್ಥಸಾಧನೆಗಾಗಿ ಯಾವ ರೀತಿಯ ಕೆಳಮಟ್ಟಕ್ಕೆ ಇಳಿದಿದ್ದಾರೆ ಎಂದರೆ ಮಹಾರಾಷ್ಟ್ರ ಏಕೀಕರಣ ಸಮಿತಿಯು ರಾಜಕೀಯವಾಗಿ ಒಂದು ಪಕ್ಷವಾದೊಡನೆ ಬೆಳಗಾವಿ ಜಿಲ್ಲೆಯ ರಾಜಕೀಯಕ್ಕೆ ಒಂದು ಹೊಸ ಆಯಾಮ ದೊರಕಿಸಲು ಸರ್ವಪ್ರಯತ್ನ ಮಾಡಲಾರಂಭಿಸಿದರು ಎಂದರೆ ತಪ್ಪಾಗಲಾರದು. ರಾಷ್ಟ್ರಮಟ್ಟದ ಪಕ್ಷಗಳು ಚುನಾವಣಾ ಕಣಕ್ಕಿಳಿದಾಗ ಸಂಬಂಧಿಸಿದ ಅಭ್ಯರ್ಥಿಗಳು ರಹಸ್ಯವಾಗಿ ಸಮಿತಿಯೊಂದಿಗೆ ಒಪ್ಪಂದ ಮಾಡಿಕೊಂಡು ಬರುವುದು ಹೆಚ್ಚಾಯಿತು. ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ನಿಪ್ಪಾಣಿ ವಿಭಾಗದಲ್ಲಿ ಮರಾಠಿಗರ ಮತಗಳು ಅಭ್ಯರ್ಥಿಯ ಸೋಲು-ಗೆಲುವನ್ನು ನಿರ್ಣಯ ಮಾಡಬಲ್ಲವು. ಹಾಗೆಯೇ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಬೆಳಗಾವಿನಗರ ಹಾಗೂ ಗ್ರಾಮೀಣ ತಾಲ್ಲೂಕುಗಳಲ್ಲಿ ಮರಾಠಿಗರೂ ಒಟ್ಟಾಗಿ ಯಾವ ಪಕ್ಷವನ್ನು ಬೆಂಬಲಿಸುವರೋ ಆ ಪಕ್ಷದ ಅಭ್ಯರ್ಥಿಗೆ ಗೆಲುವು ಖಚಿತ. ಆದ್ದರಿಂದ ನಮ್ಮ ರಾಜ್ಯದ ರಾಜಕೀಯ ಮುಖಂಡರೇ ಮಹಾರಾಷ್ಟ್ರ ಏಕೀಕರಣ ಸಮಿತಿಯೊಂದಿಗೆ ಆರ್ಥಿಕ ಹಾಗೂ ರಾಜಕೀಯ ಒಪ್ಪಂದ ಮಾಡಿಕೊಂಡು ಲೋಕಸಭಾ ಸ್ಥಾನಗಳನ್ನು ಗಿಟ್ಟಿಸಿ ಮತ್ತೆ ಮತ್ತೆ ಉಳಿಸಿಕೊಳ್ಳುತ್ತಾ ಹೋದರು. ಇದನ್ನೆ ಇಂದು ಜನತಾದಳ, ಬಿ.ಜೆ.ಪಿ, ಲೋಕಶಕ್ತಿಗಳೂ ಮುಂದುವರಿಸಿಕೊಂಡು ಬರುತ್ತಿವೆ.

ಈ ತತ್ವರಹಿತ ಒಡಂಬಡಿಕೆಯಿಂದ ಬೆಳಗಾವಿಯಲ್ಲಿ ಕನ್ನಡದ ಸಮಸ್ಯೆಗಳನ್ನು ಕನ್ನಡಿಗರೇ ಹುಟ್ಟು ಹಾಕಿದರೆಂದು ವಿಷಾದದಿಂದ ಹೇಳಬಹುದಾಗಿದೆ. ಬೆಳಗಾವಿ, ಖಾನಾಪುರ, ಉಪಗಾವಿ, ನಿಪ್ಪಾಣಿಗಳಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಭ್ಯರ್ಥಿಗಳೇ ರಾಜ್ಯ ಶಾಸನಸಭೆಗೆ ಆಯ್ಕೆಯಾಗುವಂತೆ ರಾಷ್ಟ್ರಮಟ್ಟದ ರಾಜಕೀಯ

ಪಕ್ಷಗಳು ರಹಸ್ಯ ಒಪ್ಪಂದ ಮಾಡಿಕೊಂಡವು. ತಮ್ಮ ಪಕ್ಷದ ಪರವಾಗಿ ಹೆಸರಿಗೆ ಮಾತ್ರ ಸ್ಪರ್ಧಿಗಳನ್ನು ಇಳಿಸಿ ಚುನಾವಣೆಗೆ ಮೊದಲೆ ಸಮಿತಿಯ ಅಭ್ಯರ್ಥಿಗಳಿಗೆ ಜಯದ ಪತ್ರವನ್ನು ಬರೆದುಕೊಟ್ಟಿರುವುದಕ್ಕೆ ಜಿಲ್ಲೆಯಲ್ಲಿ ಉದಾಹರಣೆಗಳಿವೆ. ಜಿಲ್ಲೆಯಲ್ಲಿ ಸಮಿತಿಯ ಶಾಸಕರು ೩ ರಿಂದ ೪ರವರೆಗೆ ಇರುವುದರಿಂದ ರಾಜಕೀಯ ಲಾಭಕ್ಕಾಗಿ ಹಾಗೂ ಗಡಿನಾಡಿನ ಕನ್ನಡಿಗರ ಅಭಿವೃದ್ಧಿ ಎಂಬ ನೆಪದಿಂದ ಹೇರಳವಾಗಿ ಹಣ ಬಿಡುಗಡೆ ಮಾಡಿಸಿ ಸಮಿತಿಯು ಇಂದು ಬಲಿಷ್ಠವಾಗಲು ಕಾರಣರಾಗಿದ್ದಾರೆ. ಬೆಳಗಾವಿಯಲ್ಲಿ ಪ್ರಮುಖ ಪತ್ರಿಕೆಯಾಗಿರುವಂತಹ 'ತರುಣ ಭಾರತ'ವು ಸಮಿತಿಯವರ ಅಧೀನದಲ್ಲಿ ಬೆಳೆದು ಬರುತ್ತಿದ್ದು ಇಂದು ಅದರ ಆಸ್ತಿ ಕೋಟಿ ರೂಪಾಯಿಗೂ ಹೆಚ್ಚಾಗಿದೆ. ಈ ಪತ್ರಿಕೆಯು ಮರಾಠಿಗರ ಪರವಾಗಿದ್ದು ಮರಾಠಿ ನಾಡಿನ, ಬೆಳಗಾವಿ ಮರಾಠದ ಅವಿಭಾಜ್ಯ ಅಂಗ ಎನ್ನುವ ರೀತಿಯಲ್ಲಿ ಲೇಖನ ಬರೆಯುವಂತೆ ಪ್ರೇರೇಪಿತವಾಗಿದೆ. ಇದೊಂದು ರೀತಿಯಲ್ಲಿ ಚಳವಳಿಯ ರೂಪದಲ್ಲಿವೆ.

ಬೆಳಗಾವಿಯಲ್ಲಿಯೇ ಶತಮಾನಗಳ ಹಿಂದೆಯೇ ಸ್ಥಾಪನೆಗೊಂಡು ಕನ್ನಡದ ಹಿರಿಯ ಚೇತನಗಳ ಪುಣ್ಯದಿಂದ ಬೆಳೆದು ಹೆಮ್ಮರವಾಗಿರುವಂತಹ ಅನೇಕ ಕನ್ನಡ ಸಂಘ ಸಂಸ್ಥೆಗಳಿಗೆ ಈಗ ಮರಾಠಿ ಹುಳ ಹತ್ತಿದಂತೆ ಕಾಣುತ್ತದೆ. ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದಾಗ ಸೂಕ್ಷ್ಮವಾಗಿ ನನಗೆ ಬೇಸರವಾಯಿತು. ಕನ್ನಡಾಂಬೆಯ ಉಳಿವಿಗಾಗಿ ತನ್ನ ಪ್ರಾಣವನ್ನೇ ತ್ಯಾಗಮಾಡಿದ ಕೆಚ್ಚದೆಯ ವೀರ ಸಂಗೊಳ್ಳಿರಾಯಣ್ಣನ, ಕಿತ್ತೂರು ರಾಣಿ ಚೆನ್ನಮ್ಮನ ತವರುಮನೆಯಲ್ಲಿ ಇದೆಂಥ ವಿಪರ್ಯಾಸವೆಂದು ಮನನೊಂದುಕೊಂಡೆ. ಕೆ.ಎಲ್.ಇ ಸಂಸ್ಥೆ (ಕರ್ನಾಟಕ ಲಾ ಸೊಸೈಟಿ) ಬಿ.ಇ. ಸೊಸೈಟಿ, ಲಿಂಗರಾಜು ಎಜ್ಯುಕೇಷನ್ ಟ್ರಸ್ಟ್, ಮೊದಲಾದ ಮಹತ್ವದ ಕನ್ನಡ ಸಂಸ್ಥೆಗಳು ಈಗ ಕನ್ನಡ ಬಾರದವರ ಕೈಯಲ್ಲಿ ಸಿಕ್ಕಿ ತನ್ನ ಮೂಲ ಉದ್ದೇಶ ಹಾಗೂ ಕರ್ತವ್ಯವನ್ನೆ ಮರೆತಿವೆ. ಅದೇ ರೀತಿ ಬೆಳಗಾವಿಯ ಸಾರ್ವಜನಿಕ ಕೇಂದ್ರ ಗ್ರಂಥಾಲಯ ಕೂಡ ಮರಾಠಿಗರ ಕೈಸೇರಿದೆ. ಇದೊಂದು ದೊಡ್ಡ ದುರಂತ. ಏಕೆಂದರೆ ಈ ಗ್ರಂಥಾಲಯ ಸ್ಥಾಪನೆಯಲ್ಲಿ ಕನ್ನಡಿಗರ ಮಹತ್ವ ಅಪೂರ್ವವಾಗಿದೆ. ಸರ್ಕಾರದ ಕಚೇರಿಗಳಲ್ಲಿ ಅಧಿಕಾರಿಗಳು, ಕೇಂದ್ರ ಸರ್ಕಾರದ ಉದ್ದಿಮೆಗಳಾದ ರಾಷ್ಟ್ರೀಕೃತ ಬ್ಯಾಂಕುಗಳು, ಎಲ್.ಐ.ಸಿ, ವಿ.ಟಿ.ಐ, ಸಾಧಾರಣ ವಿಮಾ ಕಂಪೆನಿಯ ಹಿರಿಯ ಅಧಿಕಾರಿಗಳು, ಶಿಕ್ಷಣ ಸಂಸ್ಥೆಯ ಒಡೆಯರುಗಳು ಮರಾಠಿಗಳೇ. ಅದರಲ್ಲಿಯೂ ಮರಾಠಿ ಭಾಷೆಯ ವ್ಯಾಮೋಹದವರೇ ಕಂಡುಬರುತ್ತಾರೆ. ಇವರಿಂದ ಕನ್ನಡ ಭಾಷೆ ಹಾಗೂ ಅಲ್ಲಿರುವ ಕನ್ನಡ ಜನತೆಗೆ ಸಹಾಯವನ್ನು, ಅಭಿವೃದ್ಧಿಯನ್ನು ಹೇಗೆ ನಿರೀಕ್ಷಿಸುವುದು.

೩.೬. ಬೆಳಗಾವಿಯಲ್ಲಿ ಕನ್ನಡಿಗರ ಸ್ಥಿತಿ

ರಾಷ್ಟ್ರೀಯ ಪುನರ್‌ರಚನಾ ಆಯೋಗದಿಂದ ಪ್ರಾರಂಭವಾಗಿ, ಮಹಾಜನ್ ವರದಿಯವರೆಗೆ ಅಲ್ಲದೆ ಅನೇಕ ರಾಷ್ಟ್ರೀಯ ನಾಯಕರಿಂದ ಬೆಳಗಾವಿಯೂ ಕನ್ನಡ ಪ್ರದೇಶವಾಗಿಯೇ ಉಳಿದಿದ್ದರೂ ಸಹ ಬೆಳಗಾವಿಯಲ್ಲಿ ಕನ್ನಡಿಗರ ಪಾಡು ಹೇಳತೀರದು. ಒಂದು ರೀತಿಯಲ್ಲಿ ಬೆಳಗಾವಿಯ ಕನ್ನಡಿಗರಲ್ಲಿ ಅನಾಥ ಪ್ರಜ್ಞೆಯು ಬೆಳೆದು ಬರುತ್ತಿದೆ. ಕಾರಣ, ಕನ್ನಡಿಗರು ಪ್ರತಿನಿಧಿಸಲು ಶಾಸನಸಭೆಗೆ ಅಥವಾ ನಗರಸಭೆಗೂ ಹೋಗುವಂತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಮರಾಠಿ ಜನರೇ ಆರ್ಥಿಕವಾಗಿ ಬಲಿಷ್ಠರಾಗಿ, ಜಮೀನುದಾರ ರಾಗಿರುವುದರಿಂದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ

ಪಂಚಾಯಿತಿಗಳಲ್ಲಿ ಮರಾಠಿ ಪ್ರತಿನಿಧಿಗಳೇ ಆಯ್ಕೆಗೊಳ್ಳುತ್ತಾ ಬರುತ್ತಿದ್ದಾರೆ. ಇದಕ್ಕೆ ಕನ್ನಡ ರಾಜಕಾರಣಿಗಳ ಬೇಜವಾಬ್ದಾರಿ ವರ್ತನೆಯೂ ಸಹ ಕೆಲಸ ಮಾಡಿರುತ್ತದೆ. ಬೆಳಗಾವಿಯ ಕನ್ನಡದ ಜನರು ಒತ್ತಾಯಪೂರ್ವಕವಾಗಿಯಾದರೂ ಎರಡನೇ ಭಾಷೆಯಾಗಿ ಮರಾಠಿಯನ್ನು ಕಲಿಯಲೇಬೇಕಾಗಿದೆ. ಇಂದು ದಿನನಿತ್ಯದ ವ್ಯವಹಾರವನ್ನು ಕನ್ನಡಿಗರೂ ಸಹ ಮರಾಠಿಯಲ್ಲಿಯೇ ನಡೆಸುವಂತಹ ಸ್ಥಿತಿ ಸೃಷ್ಟಿಯಾಗಿದೆ. ನಮ್ಮ ನಾಯಕರಿಗೂ ಮಹಾರಾಷ್ಟ್ರದ ರಾಜಕೀಯ ನಾಯಕರಿಗೂ ಇರುವ ಪ್ರಮುಖವಾಗಿರುವ ವ್ಯತ್ಯಾಸವೆಂದರೆ ಮಹಾರಾಷ್ಟ್ರದ ಹಿರಿಯ ರಾಜಕೀಯ ನಾಯಕರಾಗಿರುವ ಶರದ್ ಪವಾರ್‌ರಿಂದ ಹಿಡಿದು ಚಿಲ್ಲರೆ ನಾಯಕರವರೆಗೆ ಪ್ರತಿಯೊಂದು ಹಂತದ ಮರಾಠಿಗರೂ ಬೆಳಗಾವಿಯ ನೆಲದ ಮೇಲೆ ಬಂದಿಳಿದೊಡನೆ ತಮ್ಮ ಪಕ್ಷದ ಹಿತಮರೆತು ಒಮ್ಮೆಲೆ ಮರಾಠಿಗರಾಗುತ್ತಾರೆ. ಆದರೆ ಕನ್ನಡದ ನಾಯಕರಾದಂತಹ ರಾಮಕೃಷ್ಣ ಹೆಗಡೆಯಾಗಲಿ ದೇವೇಗೌಡರೆ ಆಗಲಿ ಅಥವಾ ಭೀಮಸೇನ ಜೋಶಿ, ಕುಮಾರ ಗಂಧರ್ವ, (ಕೊಮಕಾಳಿಮಠ) ಗಿರೀಶ್ ಕಾರ್ನಾಡರೆ ಆಗಲಿ ಮಹಾರಾಷ್ಟ್ರಕ್ಕೆ ಏಕೆ ಕನ್ನಡಿಗರೇ ಅಧಿಕವಾಗಿರುವ ಸೊಲ್ಲಾಪುರ ಪಟ್ಟಣಕ್ಕೆ ಹೋದರೆಂದರೆ ತಾವು ಕನ್ನಡಿಗರೆನ್ನುವುದನ್ನು ಮರೆಯುತ್ತಾರೆ. ತಾವು ಕೇವಲ ಭಾರತೀಯರು ಎಂದು ಭಾವಿಸಿಕೊಂಡು ತಮ್ಮ ತಮ್ಮ ಹಿರಿಮೆಯನ್ನೇ ಹೆಚ್ಚಿಸಿಕೊಂಡು ತಮ್ಮನ್ನು ತಾವೇ ಮೋಸಗೊಳಿಸಿಕೊಳ್ಳುತ್ತಾರೆ. ರಾಜ್ಯದ ಗಡಿ ಭಾಗದುದ್ದಕ್ಕೂ ತರತರದ ಸಮಸ್ಯೆಗಳಿವೆ. ಆದರೆ ಬೆಳಗಾವಿಯಲ್ಲಿ ಮಾತ್ರ ಆ ಸಮಸ್ಯೆಗೆ ಭಾಷೆ, ಸಾಮಾಜಿಕ, ಆರ್ಥಿಕ ಪ್ರಭಾವವಲ್ಲದೆ ಪ್ರಮುಖವಾಗಿ ರಾಜಕೀಯವಾಗಿ ಬೆಳಲುತ್ತಿದೆ. ಇಂದು ಸ್ವಲ್ಪ ಮಟ್ಟಿಗೆ ಬದಲಾವಣೆಯ ಆಸೆ ಚಿಗುರುತ್ತಿದೆ. ೧೯೯೯ನೇ ಸೆಪ್ಟಂಬರ್‌ನಲ್ಲಿ ನಡೆದಂತಹ ರಾಜ್ಯ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಬೆಳಗಾವಿ ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡದ ಅಭ್ಯರ್ಥಿಗಳು ಜಯಗಳಿಸಿ ಇತಿಹಾಸ ನಿರ್ಮಿಸಿದ್ದಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯು ಸಂಪೂರ್ಣವಾಗಿ ಸೋತು ಮೂಲೆ ಸೇರಿದೆ. ಈ ಬೆಳವಣಿಗೆಯು ಕನ್ನಡಿಗರಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸಿದೆ.

ಸಲಹೆ

ಗಡಿನಾಡಿನ ಅಭಿವೃದ್ಧಿ ಹಾಗೂ ರಕ್ಷಣೆಗಾಗಿಯೇ ನಿರ್ಮಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆಗೆ ರಾಜ್ಯವು 'ಗಡಿ ಅಭಿವೃದ್ಧಿ ಪ್ರಾಧಿಕಾರ'ವೊಂದನ್ನು ರಚಿಸಿ ಅದಕ್ಕೆ ಸಾಕಷ್ಟು ಸವಲತ್ತುಗಳನ್ನು ಒದಗಿಸಿ, ಅಷ್ಟೇ ಅಲ್ಲದೆ ಈ ಒಂದು ಸಮಿತಿಯಲ್ಲಾದರೂ ರಾಜಕೀಯೇತರ ವ್ಯಕ್ತಿಗಳನ್ನೇ ನೇಮಿಸಬೇಕು. ಆಗ ಒಂದೇ ವರ್ಷದಲ್ಲಿ ಗಡಿ ಸಮಸ್ಯೆಯು ಒಂದು ಹಂತಕ್ಕೆ ಬರಬಹುದಾಗಿದೆ. ಗಡಿನಾಡಿನ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ಸವಲತ್ತುಗಳನ್ನು ಒದಗಿಸಿ, ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿ ಅವರಿಗೆ ಕನ್ನಡದ ಬಗ್ಗೆ ಹೆಚ್ಚಿನ ಅಭಿಮಾನ ಮೂಡುವ ಕೆಲಸವಾಗಬೇಕು. ಇಂದು ಕರ್ನಾಟಕದಲ್ಲಿ ಗಡಿಸಮಸ್ಯೆಗೆ ಪರಿಹಾರ ದೊರಕಿದರೆ ಇಡಿ ರಾಜ್ಯಕ್ಕೆ ತಗುಲಿರುವ ವ್ಯಾಧಿ ಕಡಿಮೆಯಾದಂತೆ. ಕನ್ನಡದ ಕೆಲಸಗಳು ಆಗಲಾದರು ತ್ವರಿತಗತಿಯಲ್ಲಿ ಗಡಿ ಪ್ರದೇಶದಲ್ಲಿ ನಡೆದು ಎಲ್ಲ ಅಡ್ಡಿ ಆತಂಕಗಳು ನಿವಾರಣೆಯಾಗಬಹುದೆಂದು ಭಾವಿಸಬಹುದು.

□□

೪. ಕಾಸರಗೋಡು ತಾಲ್ಲೂಕಿಗಾಗಿ ಹೋರಾಟ

ಕಾಸರಗೋಡು ಪಟ್ಟಣವು ಪ್ರಸಿದ್ಧ ಚಂದ್ರಗಿರಿ ನದಿಯ ದಡದಲ್ಲಿ ನಿರ್ಮಿಸಲಾಗಿದೆ. ಇತಿಹಾಸದಲ್ಲಿ ಈ ರಾಜ್ಯವನ್ನು ಕನ್ನಡದ ಪ್ರಥಮ ರಾಜವಂಶವಾದಂತಹ ಕದಂಬರ ದೊರೆ ಮಯೂರವರ್ಮನು ಸಮುದ್ರ ನಾರೆಯಿಂದ ೬೪ ವಿಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಪ್ರಾಂತ್ಯಗಳನ್ನು ಒಬ್ಬ ಬ್ರಾಹ್ಮಣ ಗೌವರ್ನರ್‌ನ ಆಳ್ವಿಕೆಗೆ ಒಳಪಡಿಸಿದನು. ಈ ೬೪ ವಿಭಾಗಗಳಲ್ಲಿ ಕಾಸರಗೋಡು ಒಂದು ಪ್ರಾಂತ್ಯ. ಶಾಸನಗಳ ಪ್ರಕಾರ ಕಾಸರಗೋಡನ್ನು ಕನ್ನಡದ ಪ್ರಸಿದ್ಧ ಪಾಳೇಗಾರ ವಂಶವಾಗಿದ್ದಂತಹ ಕೆಳದಿಯ ಇಕ್ಕೇರಿ ನಾಯಕರ ಪ್ರಸಿದ್ಧ ದೊರೆಯಾದ ಶಿವಪ್ಪನಾಯಕನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಇಂದಿಗೂ ಸಹ ಶಿವಪ್ಪನಾಯಕನು ಕಾಸರಗೋಡಿನಲ್ಲಿ ಕಟ್ಟಿಸಿರುವ ಕೋಟೆಯನ್ನು ನೋಡಬಹುದಾಗಿದೆ. ಆದರೆ ಈ ಪ್ರಸಿದ್ಧ ಕೋಟೆಯು ಇಂದು ಯಾವುದೇ ರೀತಿಯ ರಕ್ಷಣೆ ಇಲ್ಲದೆ ಅವನತಿಯ ಅಂಚಿನಲ್ಲಿದೆ. ಇಂಥಹ ಐತಿಹಾಸಿಕ ಇತಿಹಾಸವನ್ನು ಹೊಂದಿರುವಂತಹ ಕನ್ನಡದ ನೆಲೆ ಇಂದು ಕೆಲವು ಜನರ ಸ್ವಾರ್ಥದಿಂದಾಗಿ ಹಾಗೂ ರಾಜಕೀಯದ ಪ್ರಭಾವದಿಂದ ನೆರೆಯ ಕೇರಳ ರಾಜ್ಯದಲ್ಲಿ ವಿಲೀನಗೊಳಿಸಲಾಗಿದೆ. ಶತಮಾನಗಳಿಂದಲೂ ಕನ್ನಡ ನಾಡಿನೊಂದಿಗೆ ಬೆಳೆದು ಬರುತ್ತಿದ್ದಂತಹ ಕಾಸರಗೋಡು ಎಂಬ ಒಂದು ಸುಂದರ ಮನೆಯನ್ನು ೧೯೫೩ರಲ್ಲಿ ನೇಮಕಗೊಂಡ ರಾಷ್ಟ್ರೀಯ ಪುನರ್ ರಚನಾ ಆಯೋಗವು ಕೇರಳಕ್ಕೆ ಸೇರುವ ಶಿಫಾರಸ್ಸನ್ನು ಮಾಡಿತು. ಆಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆಯ ರೂವಾರಿಯಾಗಿ ಕರ್ನಾಡ ಸದಾಶಿವರಾಯರು ನಂತರ ಅತೀ ಹೆಚ್ಚು ತ್ಯಾಗ ಮಾಡಿದಂತಹ ಮೂಡಬಿದ್ರೆ ಉಮೇಶರಾಯರು ಕಾಂಗ್ರೆಸ್ ಪಕ್ಷಕ್ಕೆ ರಾಜಿನಾಮೆ ನೀಡಿದರು. ಹಾಗೆಯೇ ಸ್ವಾತಂತ್ರ್ಯಯೋಧರಾದ ದೇವಪ್ಪಾಳ್ವರು, ಶ್ರೀಧರ ಕಕ್ಕಿಲಾಯರು ಹಾಗೂ ರಾಷ್ಟ್ರೀಯ ಪಕ್ಷಗಳ ಎಲ್ಲಾ ಮುಖಂಡರೂ ತಮ್ಮ ತಮ್ಮ ಪಕ್ಷಗಳಿಗೆ ರಾಜಿನಾಮೆಯಿತ್ತು 'ಕರ್ನಾಟಕ ಸಮಿತಿ'ಯನ್ನು ರೂಪಿಸಿಕೊಂಡು ಕಾಸರ ಗೂಡಿಗಾಗಿ ಹೋರಾಡಿದರು; ವಿದ್ಯಾರ್ಥಿಗಳು ಶಾಲೆ-ಕಾಲೇಜುಗಳನ್ನು ಬಹಿಷ್ಕರಿಸಿದರು, ಮಹಿಳೆಯರು ಹಸುಗೂಸುಗಳನ್ನು ಕಂಕಳಲ್ಲಿ ಎತ್ತಿಕೊಂಡು ಸೆರೆಮನೆ ಸೇರಿದರು. ಹಳ್ಳಿಯಿಂದ ನಗರದವರೆವಿಗೂ ಪ್ರತಿಯೊಂದು ಸ್ಥಳದಲ್ಲಿಯೂ ಜಾತಿಧರ್ಮದ ಬೇಧವಿಲ್ಲದೆ ಕಾಸರಗೋಡಿನ ಜನತೆಯು ಹೋರಾಟಕ್ಕಿಳಿಯಿತು. ಇಂತಹ ಸಂದರ್ಭದಲ್ಲಿಯೇ ಕಾಸರಗೋಡಿನ ಕಿಡಿಯಾಗಿ ಇಂದಿಗೂ ಕಾಸರಗೋಡು ಕರ್ನಾಟಕದೊಂದಿಗೆ ವಿಲೀನವಾಗ ಬೇಕೆಂದು ಹೋರಾಡುತ್ತಿರುವ ನಾಡಿನ ಪ್ರಸಿದ್ಧ ಕವಿಗಳಾದ ಡಾ. ಕಯ್ಯಾರ ಕಿಞ್ಞಣ್ಣ ರೈ ಅವರು ತಮ್ಮ ಲೇಖನಿಯಿಂದ ಕ್ರಾಂತಿಕಾರಿ ಗೀತೆಯನ್ನು ರಚಿಸಿ ಆ ಗೀತೆಯನ್ನು ಧಾರವಾಡದಲ್ಲಿ ನಡೆದಂತಹ ಅಖಿಲಭಾರತ ಕನ್ನಡಸಾಹಿತ್ಯ ಸಮ್ಮೇಳನದಲ್ಲಿ ಹಾಡಿದರು.

ಕನ್ನಡಿಗರ ಪ್ರತಿಯೊಬ್ಬನ ಹೃದಯದಲ್ಲೂ ಮನೆಮಾಡಿ ನಿಂತ. ಈ ಕವಿತೆಯನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ :


ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ!
ಎಲ್ಲರೂ ಎದ್ದೆದ್ದು ಓಡಿ ಬನ್ನಿ
ಕನ್ನಡದ ಗಡಿಕಾಯೆ, ಗುಡಿಕಾಯೆ, ನುಡಿಕಾಯೆ
ಕಾಯಲಾರನೆ, ಸಾಯೆ, ಓ ಬನ್ನಿ - ಬೆಂಕಿ ಬಿದ್ದಿದೆ ಮನೆಗೆ!

ಹಾರೆಗುದ್ದ ಕೊಡಲಿ ನೊಗ ನೇಗಿಲೆತ್ತುತಲಿ
ನೆಲದಿಂದ ಹೊಲದಿಂದ ಹೊರಟು ಬನ್ನಿ
ಕನ್ನಡದ ನಾಡಿಂದ, ಕಾಡಿಂದ, ಗೂಡಿಂದ
ಕಡಲಿಂದ ಸಿಡಿಲಿಂದ ಗುಡುಗಿ ಬನ್ನಿ - ಬೆಂಕಿ ಬಿದ್ದಿದೆ ಮನೆಗೆ!

ಅಕ್ಕಂದಿರೆ ಅಣ್ಣಂದಿರೆ, ತಂಗಿಯರೆ, ತಮ್ಮಂದಿರೆ
ಬೇಗೆಯನ್ನಾರಿಸಲು ಬೇಗ ಬನ್ನಿ
ಕನ್ನಡದ ಬಲವೊಂದೆ, ಛಲವೊಂದೆ, ನೆಲವೊಂದೆ
ನಾಡ ನುಳಿಸುವೆನೆಂದರೆ ಓಡಿಬನ್ನಿ - ಬೆಂಕಿ ಬಿದ್ದಿದೆ ಮನೆಗೆ!

ಇಂತಹ ಕ್ರಾಂತಿಕಾರಕ ಪದಗಳೊಡನೆ ದುಃಖಕರವಾದ ಅಂಶಗಳನ್ನು ತುಂಬಿ ನಾಡಿನ ಎಲ್ಲ ಜನತೆಗೆ ಕಾಸರಗೋಡು ನಮ್ಮದೆಂಬ ಮನೋಭಾವನೆ ಮೂಡಿಸಿದ್ದರು. ಇಂದಿಗೂ ಸಹ ಮೇಲಿನಂತಹ ನೂರಾರು ಕವಿತೆಗಳನ್ನು ರಚಿಸಿ ಜನತೆಗೆ ಸ್ಫೂರ್ತಿ ನೀಡುತ್ತಾ ಬಂದಿರುತ್ತಾರೆ. ಕಾಸರಗೋಡು ಕರ್ನಾಟಕಕ್ಕೆ ಸೇರಿತೆಂಬ ವಿಷಯ ಕೇಳಬೇಕೆಂಬ ಆಸೆಯಿಂದ ಇಂದಿಗೂ ಯುವಕರಂತೆ ದುಡಿಯುತ್ತಾ ತಮ್ಮ ಸಾಹಿತ್ಯದ ಮೂಲಕ ವಿಚಾರ ಸಂಕೀರ್ಣಗಳಲ್ಲಿ, ಭಾಷಣಗಳ ಮೂಲಕ ಅನೇಕ ಸಂಘ ಸಂಸ್ಥೆಗಳ ನಾಯಕರಾಗಿ ಎಚ್ಚರಿಸುತ್ತಿದ್ದಾರೆ.

ಕಾಸರಗೋಡು ಇಂದಿಗೂ ಕನ್ನಡದ ಪ್ರದೇಶವಾಗಿದೆ. ಕನ್ನಡ ಭಾಷೆಯೇ ಇಂದಿಗೂ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣ ಮಾಧ್ಯಮವಾಗಿದೆ. ಕಯ್ಯಾರ ಕಿಞ್ಞಣ್ಣರೈ ರಂತಹ ರಾಷ್ಟ್ರಪ್ರಶಸ್ತಿ ವಿಜೇತರಿಗಿಂತ, ರಾಷ್ಟ್ರಕವಿ ನಾಡಿನ ಹಿರಿಯ ಚೇತನರಾಗಿರುವಂತಹ ಗೋವಿಂದ ಪೈ ರಿಂದ ಪ್ರಾರಂಭವಾಗಿ ರಾಜ್ಯಪ್ರಶಸ್ತಿ ಪಡೆದಿರುವಂತಹ ಕೆ. ಎಸ್. ಶರ್ಮ, ಪೆರ್ಲಕೃಷ್ಣ ಭಟ್, ಎನ್. ಶಂಕರನಾರಾಯಣ ಭಟ್, ಟಿ. ಉಬೈದ್, ಶ್ರೀಮತಿ ಸುಮಿತ್ರ ಮುಂತಾದ ಗಣ್ಯರುಗಳು ಈ ಪ್ರದೇಶದವರುಗಳು. ಈ ನಾಡಿನಲ್ಲಿ ಪಯಸ್ವಿನಿ, ಸೀರೆ ಉಪ್ಪಳ, ಉದ್ಯಾವರ ಮೊದಲಾದ ಹೊಳೆಗಳು ಹರಿದು ಕಾಸರಗೋಡಿನ ನೆಲವನ್ನೆಲ್ಲ ಫಲವತ್ತಾಗಿಸಿವೆ. ಹಿಂದಿನಿಂದಲೂ ಇಲ್ಲಿ ಭತ್ತದ ಬೆಳೆಯು ಹೆಚ್ಚಾಗಿಯೇ ಇದೆ. ಹಿಂದೂ, ಮುಸ್ಲಿಂ, ಕ್ರೈಸ್ತರೆಲ್ಲರೂ ಸೌಹಾರ್ದತೆಯಿಂದ ಜೀವನ ನಡೆಸಿಕೊಂಡು ಬರುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿಯೂ ಕಾಸರಗೋಡು ಉತ್ತಮವಾದಂತಹ ರೀತಿಯಲ್ಲಿಯೇ ಇದೆ. ಹಿಂದೆ ಮದ್ರಾಸು ಪ್ರಾಂತ್ಯದಲ್ಲಿದ್ದಾಗಲೇ ಇಡೀ ಮದ್ರಾಸು ರಾಜ್ಯಾದ್ಯಂತ ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಪರಿಣತರಾಗುವ ವಿದ್ವಾಂಸರಿಗೆ ಶಿಕ್ಷಣ ನೀಡುವ 'ಪೆರಡಾಲ



ಕಾಸರಗೋಡು ತಾಲ್ಲೂಕು
ಮಹಾಜನ್ ವರದಿಯ ಪ್ರಕಾರ ಕರ್ನಾಟಕಕ್ಕೆ ಸೇರಬೇಕಾದ ಕಾಸರಗೋಡು ಪ್ರದೇಶಗಳು
ಕೇರಳದಲ್ಲಿ ಉಳಿಯಬೇಕಾಗಿರುವ ೮ ಗ್ರಾಮಗಳು.

ಮಹಾಜನ ಸಂಸ್ಕೃತ ಕಾಲೇಜು' ಇಲ್ಲಿತ್ತು. ನೂರಾರು ವರ್ಷಗಳ ಹಿಂದೆಯೇ ಬಾಸೆಲ್ ಮಿಶನ್ನಿನವರು ಸ್ಥಾಪಿಸಿದ್ದಂತಹ ಬಿ.ಇ.ಎಂ. ಹೈಸ್ಕೂಲು ಇಂದಿಗೂ ಕಾಸರಗೋಡಿನಲ್ಲಿದೆ. ಇಲ್ಲಿ ಇಂದಿಗೂ ಕನ್ನಡ ಮಾಧ್ಯಮವೇ ಶಿಕ್ಷಣ ಮಾಧ್ಯಮವಾಗಿದೆ. ಇಂತಹ ಐತಿಹಾಸಿಕ ಶ್ರೇಷ್ಠವಾದ ಊರು ಇಂದು ಕರ್ನಾಟಕದಿಂದ ಹೊರ ಉಳಿದಿದೆ. ಸ್ಟಾರ್ ಕ್ಯಾಮೆನ್ಯುವೆಲ್ ಎಂದು ಹೆಸರಾದ ಪ್ರಾಚೀನ ಕಾಲದ ದಕ್ಷಿಣ ಕನ್ನಡ ಜಿಲ್ಲಾ ಮೆನ್ಯುವೆರ್‌ನ ೧ನೇ ಸಂಪುಟದ ೧೩-೧೪ನೇ ಪುಟಗಳಲ್ಲಿ ಮತ್ತು ೧೧ನೇ ಸಂಪುಟದ ೨೪೩, ೨೪೮ ಪುಟಗಳಲ್ಲಿ ಕಾಸರಗೋಡಿನ ಈ ಭಾಗ ಕೇರಳದಲ್ಲಿ ತುಳುನಾಡಿನದ್ದೆಂದು ಖಚಿತ ಪಡಿಸುತ್ತದೆ. ಈಸ್ಟ್ ಇಂಡಿಯಾ ಗೆಜಿಟಿಯರಿನಲ್ಲಿ ವಾಲ್ಟರ್ ಹೆಮಿಲ್ಟನ್ ಎಂಬ ಇತಿಹಾಸಕಾರನು ಚಂದ್ರಗಿರಿನದಿ ಮತ್ತು ಚಂದ್ರಗಿರಿಕೋಟೆಗಳು ತುಳು ಮತ್ತು ಮಲೆಯಾಳದ ಗಡಿ ಎಂದು ಸಿದ್ಧಪಡಿಸಿದ್ದಾನೆ. ಈ ಪ್ರದೇಶದ ಜಾನಪದ ಹಾಡುಗಳು, ಪಾಡ್ದನಗಳು 'ಗ್ರಾಮಪದ್ಧತಿ' ಎಂಬ ಗ್ರಂಥ ಕೂಡ ಈ ಮಾತನ್ನು ಸಮರ್ಥಿಸುತ್ತದೆ. ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಕಮ್ಯುನಿಸ್ಟ್ ಪಕ್ಷದ ಅಖಿಲ ಭಾರತದ ಮುಖಂಡರಾಗಿದ್ದಂತಹ ದಿ. ಇ. ಎಂ.ಎಸ್. ನಂಬೂದಿರಿಪಾಡರು ೧೯೫೨ರಲ್ಲಿ ಬರೆದ 'ನೇಶನಲ್ ಕ್ವೆಶ್ಚನ್ ಇನ್ ಕೇರಳ' ಎಂಬ

ಗ್ರಂಥದಲ್ಲಿ ಕಾಸರಗೋಡು ತಾಲೂಕಿನ ಅರ್ಧಭಾಗ ಮಾತ್ರ ಮಲಬಾರಿಗೆ ಸೇರತಕ್ಕದ್ದೆಂದು ಹೇಳಿದ್ದಾರೆ. ಕೆ. ಪಿ. ಕೃಷ್ಣ ಅಯ್ಯರ್ ಎಂಬ ಇತಿಹಾಸತಜ್ಞರು ಬರೆದ 'ಎ ಶಾರ್ಟ್ ಹಿಸ್ಟರಿ ಆಫ್ ಕೇರಳ' ಎಂಬ ಗ್ರಂಥದಲ್ಲಿ ಚಂದ್ರಗಿರಿ ಹೊಳೆಯೇ ಕೇರಳದ ಗಡಿಯೆಂದು ಹೇಳಿದ್ದಾರೆ.

ಕಾಸರಗೋಡು ನಗರದಲ್ಲಿ ೧೯೪೮ನೇ ಡಿಸೆಂಬರ್‌ನಲ್ಲಿ ಕನ್ನಡ ನಾಡು ಉದಯವಾಗಲಿ ಎಂದು ಹಿಗ್ಗಿ ಹಾಡಿದ ಚಾರಿತ್ರಿಕ ಮಹತ್ವವುಳ್ಳ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ, ಹಾಗೆಯೇ ಹನ್ನೊಂದನೇ ಕರ್ನಾಟಕ ಏಕೀಕರಣ ಸಮ್ಮೇಳನಗಳು ವಿಜೃಂಭಣೆಯಿಂದ ನಡೆದಿದ್ದವು. ಆದರೆ ಕರ್ನಾಟಕದ ಉದಯವಾದಾಗ ಕಾಸರಗೋಡಿನ ಎರಡುಲಕ್ಷ ಕನ್ನಡಿಗರು ತಬ್ಬಲಿಗಳಾಗಿ ದುಃಖದಿಂದ ಕಣ್ಣೀರಿನ ಕೋಡಿ ಹರಿಸಬೇಕಾಯಿತು. ಏಕೆಂದರೆ ಕಾಸರಗೋಡಿನ ಕನ್ನಡಿಗರಿಗೆ ೩೦-೦೯-೧೯೫೫ನೇ ದಿನ ದುರಂತ ವಿಷಯ ಕೇಳಿದ ದಿನ. ಅಂದು ಮಧ್ಯಾಹ್ನದ ವೇಳೆಗೆ ದೆಹಲಿಯಿಂದ ಕ್ಷೇತ್ರದ ಪಾರ್ಲಿಮೆಂಟ್ ಸದಸ್ಯರಾಗಿದ್ದಂತಹ ಕೆ. ಎಸ್. ಹೆಗ್ಡೆಯವರಿಂದ ಒಂದು ತಂತಿ ಸಂದೇಶ ಬಂತು. ಕಾಸರ ಗೋಡನ್ನು ಕೇರಳ ರಾಜ್ಯಕ್ಕೆ ಸೇರಿಸುವಂತೆ ತ್ರಿಸದಸ್ಯ ಆಯೋಗದ ಸದಸ್ಯರಲ್ಲಿ ಒಬ್ಬರಾದ ಕೇರಳದ ಕೆ.ಎಂ. ಪಣಿಕ್ಕರ್‌ರವರ ಶಿಫಾರಸ್ಸಿನಂತೆ ನಡೆದುಹೋಗಿದೆ. ಎಂದು ದುರಂತ ವಿಷಯವನ್ನು ಕಳಿಸಿದರು. ತಕ್ಷಣವೇ ಹಿರಿಯ ನಾಯಕ ಮೂಡಬಿದ್ರೆ ಉಮೇಶರಾಯರ ಕಚೇರಿಯಲ್ಲಿ ಸಭೆ ಸೇರಿ ಅನ್ಯಾಯದ ಶಿಫಾರಸ್ಸಿನ ವಿರುದ್ಧ ಜನಾಭಿಪ್ರಾಯ ಸಂಗ್ರಹಿಸಿ ಪ್ರಕಟಿಸಲು, ಅನ್ಯಾಯದ ವಿರುದ್ಧ ಸತ್ಯಾಗ್ರಹವನ್ನು ಕೈಗೊಳ್ಳಲು ಏಕಕಂಠದಿಂದ ತೀರ್ಮಾನಿಸಿ ಇದರ ಮುಂದಿನ ಕ್ರಮಕ್ಕಾಗಿ ಕರ್ನಾಟಕ ಪ್ರಾಂತೀಕರಣ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಅಧ್ಯಕ್ಷರನ್ನಾಗಿ ಉಮೇಶ್‌ರಾಯರನ್ನೂ, ಕಾರ್ಯದರ್ಶಿಗಳಾಗಿ ಕಳ್ಳಿಗೆ ಮಹಾಬಲ ಭಂಡಾರಿಯವರನ್ನು ಆಯ್ಕೆ ಮಾಡಲಾಯಿತು. ತಾಲ್ಲೂಕಿನಾದ್ಯಂತ ಉಗ್ರ ಪ್ರತಿಭಟನಾ ಮೆರವಣಿಗೆಗಳು ನಡೆಯುತ್ತಾ ಬಂದವು. ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳು ಹೊರಬಂದರು, ಸರ್ಕಾರಿ ಕಚೇರಿಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸ ಲಾಯಿತು. ಕೋರ್ಟಿನ ಮುಂದೆ ಉಪವಾಸ ಸತ್ಯಾಗ್ರಹಗಳು ನಡೆದವು.* ಇದರಿಂದಾಗಿ ೧೦೦೦ಕ್ಕೂ ಹೆಚ್ಚು ಜನರು ಪೋಲಿಸರ ಬಂಧಿಗಳಾದರು, ಇವರಲ್ಲಿ ಹಲವಾರು ಮಂದಿಗೆ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಯಿತು.

ಈ ಮೇಲಿನ ಚಳವಳಿಯಲ್ಲಿ ಕಾಸರಗೋಡಿನ ಮಹಿಳೆಯರ ಪಾತ್ರ ಅಮೋಘವಾದುದು. ಕಡಲತೀರದ ರಾಣಿ ಎಂದೇ ಹೆಸರುವಾಸಿಯಾಗಿರುವ ಉಳ್ಳಾಲ ರಾಣಿ ಅಬ್ಬಕ್ಕಳ ಈ ನಾಡಿನಲ್ಲಿ ಆಯೋಗದ ತೀರ್ಮಾನವನ್ನು ಕೇಳಿ ಸುಮ್ಮನೆ ಕುಳಿತುಕೊಳ್ಳುವಂತೆ ಮಾಡಲಿಲ್ಲ. 'ಕಾಸರಗೋಡು ತಾಲ್ಲೂಕು ಕರ್ನಾಟಕ ಪ್ರಾಂತೀಕರಣ ಸಮಿತಿ'ಯು ಪ್ರತ್ಯೇಕವಾಗಿ ಬಂದು 'ಮಹಿಳಾ ವಿಭಾಗ'ವನ್ನು ಸ್ಥಾಪಿಸಿ ಆಯೋಗದ ವಿರುದ್ಧ ಉಗ್ರ ಹೋರಾಟಕ್ಕೆ ಸಜ್ಜುಗೊಳಿಸಿತು. ಪ್ರಥಮವಾಗಿ ಮಹಿಳಾ ವಿಭಾಗದ ಅಧ್ಯಕ್ಷರನ್ನಾಗಿ ಶ್ರೀಮತಿ ಕೆ. ಪಿ. ಸರಸ್ವತೀ ಬಾಯಿ ಮತ್ತು ಕಾರ್ಯದರ್ಶಿನಿಯಾಗಿ

* ೧೯೫೫ನೇ ಸಾಲಿನ ಪೋಲಿಸ್ ರಿಪೋರ್ಟ್ : ಕಾಸರಗೋಡು ಮಿತ್ರ

ಶ್ರೀಮತಿ ಸುಹಾಸಿನಿ ಭಂಡಾರಿಯವರನ್ನು ಆಯ್ಕೆ ಮಾಡಲಾಯಿತು. ೧೯೫೬ನೇ ಜನವರಿ ೨೬ರಂದು ಮಹಿಳೆಯರು ಕಾನೂನು ಉಲ್ಲಂಘನೆ ಮಾಡಿ ಬಂಧನಕ್ಕೊಳಗಾಗುವುದೆಂದು ನಿರ್ಧರಿಸಿಕೊಂಡಿತು. ೨೬ನೇ ಜನವರಿ ಸಂಜೆ ಸರ್ಕಾರದ ಕ್ರಿಮಿನಲ್ ಕಾನೂನು ಸಂಹಿತೆಯ ೧೪೪ನೇ ಸೆಕ್ಷನ್ ಪ್ರಕಾರ ಯಾವುದೆ ರೀತಿಯ ಸಭೆ, ಸಮಾರಂಭ, ಮೆರವಣಿಗೆಗಳನ್ನು ನಡೆಸಬಾರದೆಂದು ನಿಷೇಧಿಸಿತು. ಇಂತಹ ಸಂದರ್ಭದಲ್ಲಿ ಮಹಿಳೆಯರು ಧೀರತನದಿಂದ ಆಯೋಗದ ತೀರ್ಪಿನ ವಿರುದ್ಧವಾಗಿ ಸಭೆ ನಡೆಸಿ ಕೇಂದ್ರ ಸರ್ಕಾರ ಹಾಗೂ ಆಯೋಗದ ಸದಸ್ಯರಾಗಿದ್ದಂತಹ ಕೆ. ಎಂ. ಪಣಿಕ್ಕರ್‌ರವರ ವಿರುದ್ಧ ಧಿಕ್ಕಾರ ಕೂಗಿ, ತೀವ್ರವಾದ ಪ್ರತಿಭಟನೆ ಮಾಡಿ ಪೋಲಿಸರಿಗೆ ಬಂಧಿಗಳಾದರು. ಇಂತಹ ಸಮಯದಲ್ಲಿ ಬಂಧನಕ್ಕೊಳಗಾದ ಪ್ರಮುಖ ಮಹಿಳಾ ಮುಖಂಡರೆಂದರೆ ಶ್ರೀಮತಿಯರಾದ ಕಮಲಾಶೆಟ್ಟಿ, ಪಾರ್ತ ಜೆ. ಪರಮೇಶ್ವರಿ ಭಟ್, ರಾಧಾ ಕಾಮತ್, ಕೆ.ಪಿ. ಸರಸ್ವತಿ ಬಾಯಿ, ಸುಹಾಸಿನಿ ಭಂಡಾರಿ, ವಿದ್ಯಾರ್ಥಿನಿಯಾಗಿದ್ದಂತಹ ಯು.ಎಮ್. ಲತಾ. ಇವರುಗಳಲ್ಲಿ ಶ್ರೀಮತಿ ಪರಮೇಶ್ವರಿ ಭಟ್ಟರು ತಮ್ಮ ಹಸುಗೂಸಿನೊಂದಿಗೆ ಜೈಲುವಾಸ ಅನುಭವಿಸಿರುವುದು ಸೆರೆಮನೆ ದಾಖಲೆಗಳಿಂದ ತಿಳಿದುಬರುತ್ತದೆ.

ಮಂಗಳೂರಿನಲ್ಲಿ ಜಿಲ್ಲಾ ನಾಯಕರು ಪಕ್ಷಭೇದ ಮರೆತು ಸಭೆ ಸೇರಿ ಕಾಸರಗೋಡಿನ ಬಗ್ಗೆ ಚಿಂತಿಸಿ ಅದನ್ನು ಪಡೆಯುವುದರ ಬಗ್ಗೆ ಹೋರಾಡಲು ಜಿಲ್ಲಾ ಸಂಘಟನೆಯನ್ನು ರಚಿಸಿಕೊಂಡರು. ಅದರ ಅಧ್ಯಕ್ಷರನ್ನಾಗಿ ಲೋಕಸಭಾ ಸದಸ್ಯರಾಗಿದ್ದಂತಹ ಕೆ. ಆರ್. ಆಚಾರ್ ಅವರನ್ನು ನೇಮಿಸಿ ಶಾಂತಿಯುತ, ಸತ್ಯಾಗ್ರಹಗಳ ಜೊತೆಗೆ ಉಗ್ರ ಪ್ರತಿಭಟನೆಗಳನ್ನು ನಡೆಸಿದರು. ಇಂತಹ ಸಂದರ್ಭದಲ್ಲಿ ಮದ್ರಾಸಿನ (ಈಗಿನ ತಮಿಳುನಾಡು ರಾಜ್ಯ) ಮುಖ್ಯಮಂತ್ರಿಯಾಗಿದ್ದಂತಹ ಕಾಮರಾಜ್ ಹಾಗೂ ಕೇಂದ್ರ ಮಂತ್ರಿಗಳಾಗಿದ್ದಂತಹ (ಪ್ರಧಾನ ಮಂತ್ರಿ ನೆಹರೂ) ಲಾಲ್ ಬಹದ್ದೂರ್ ಶಾಸ್ತ್ರಿಯವರುಗಳು ಮಂಗಳೂರಿಗೆ ಬಂದರು. ಮಂಗಳೂರು ಹಾಗೂ ಕಾಸರಗೋಡಿನ ಅಸಂಖ್ಯಾತ ಕನ್ನಡಿಗರು ಬೃಹತ್ ಮೆರವಣಿಗೆ ನಡೆಸಿ ಅವರಿಗೆ ಮನವಿ ಸಲ್ಲಿಸಿದರು. ಇಷ್ಟೆಲ್ಲಾ ಹೋರಾಟಗಳು ನಡೆದರೂ ಸಹ ಕಾಸರಗೋಡು ಕನ್ನಡಿಗರಿಗೆ ಘೋರ ಅನ್ಯಾಯವಾಯಿತು. ಕಾಸರಗೋಡು ಕುರಿತ ಕರಡು ಪ್ರಾಂತ್ಯ ಪುನರ್‌ವಿಂಗಡನಾ ಮಸೂದೆಯು ಲೋಕಸಭೆ ಮತ್ತು ರಾಜ್ಯಸಭೆಯು ಸಮ್ಮತಿ ಪಡೆದು ಶಾಸನವಾಗಿ ಹೊರಹೊಮ್ಮಿತು. ಕಾಸರಗೋಡು ತಾಲ್ಲೂಕಿನ ಕನ್ನಡ ಪ್ರದೇಶವು ಸರ್ದಾರ್ ಕೆ. ಎಂ. ಪಣಿಕ್ಕರ್‌ರವರಿಂದ ಕೇರಳಕ್ಕೆ ದಾನವಾಗಿ ಸಂದಿತು. ೧.೧೧.೧೯೫೬ಕ್ಕೆ ಕಾಸರಗೋಡು ಶಾಸ್ತ್ರೋಕ್ತವಾಗಿ, ಜನಾಭಿಪ್ರಾಯಕ್ಕೆ, ಪ್ರಜಾಪ್ರಭುತ್ವ ತತ್ವಗಳಿಗೆ ವಿರೋಧವಾಗಿ ಕೇರಳಕ್ಕೆ ಸೇರಿದಾಗ ಕಾಸರಗೋಡಿನ ಜನರೆಲ್ಲರೂ ಆ ಕೆಟ್ಟದಿನವನ್ನು ಕರಾಳ ದಿನವಾಗಿ ಆಚರಿಸಿದರು.

೧೯೬೩ನೇ ಸೆಪ್ಟೆಂಬರ್ ತಿಂಗಳಿನಲ್ಲಿ ಕಾಸರಗೋಡಿನ ಸಾವಿರಾರು ಕನ್ನಡಿಗರು ರಾಜ್ಯದ ರಾಜಧಾನಿ ಬೆಂಗಳೂರಿಗೆ ಬೃಹತ್ ಜಾಥಾ ಹೊರಟು ಸುಮಾರು ೧೦ ಬಸ್ಸುಗಳಲ್ಲಿ ಮಡಿಕೇರಿ ಮಾರ್ಗವಾಗಿ ಬರುವಾಗ ಮಡಿಕೇರಿಯಲ್ಲಿ ನಗರಸಭಾ ಸದಸ್ಯರು ಹಾಗೂ ಊರಿನ ಜನರು ಇವರಿಗೆ ಸ್ವಾಗತ ಸಮಾರಂಭ ನಡೆಸಿ ಅವರಿಗೆ ಶುಭವಾಗಲೆಂದು,

ಇವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿ ಹೃದಯಂಗಮವಾಗಿ ಬೀಳ್ಕೊಟ್ಟರು.* ಮರುದಿನ ಬೆಂಗಳೂರು ನಗರದಲ್ಲಿ ಬೃಹತ್ ಜಾಥಾ ನಡೆಸಿ ವಿಧಾನಸಭೆಯೆದುರಲ್ಲಿಯೇ ಧರಣೆ ಸತ್ಯಾಗ್ರಹ ನಡೆಸಲಾಯಿತು. ಜಾಥಾ ನಡೆಯುತ್ತಿದ್ದಲ್ಲಿಗೆ ಆಗಮಿಸಿದ ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ನಾಡಿನ ಹಿರಿಯ ಮುತ್ಸದಿಯಾಗಿರುವ ಎಸ್. ನಿಜಲಿಂಗಪ್ಪನವರು ಹಾಗೂ ಎಂ.ಎಲ್.ಸಿ. ಆಗಿದ್ದಂತಹ ಕೆ.ಆರ್. ಆಚಾರ್, ಕೆ. ಬಾಲಕೃಷ್ಣರಾಯರೊಂದಿಗೆ ಬಂದು ತನ್ನ ನಾಡಿನ ಜನತೆಗೆ ಸಾಂತ್ವನದ ಮಾತನಾಡಿ 'ನಾನೂ ನಹ ನಿಮ್ಮವನೇ' ಎಂಬ ಭರವಸೆ ನೀಡಿ ಸಭೆಗೆ, ಜಾಥಾಕ್ಕೆ ಹೊಸ ಚೈತನ್ಯ ಹಾಗೂ ಉಮ್ಮಸ್ಸನ್ನು ಮೂಡಿಸಿದರು.

೧೯೫೭, ೧೯೬೨, ೧೯೬೭ರಲ್ಲಿನ ಮಹಾ ಚುನಾವಣೆಗಳಲ್ಲಿ 'ಕರ್ನಾಟಕ ಪ್ರಾಂತೀಕರಣ ಸಮಿತಿ'ಯು ಕಾಸರಗೋಡಿನಲ್ಲಿ ತನ್ನ ಅಭ್ಯರ್ಥಿಗಳನ್ನು ಚುನಾವಣಾ ಕಣಕ್ಕಿಳಿಸಿತು. ಮಿಕ್ಕ ಕ್ಷೇತ್ರಗಳಲ್ಲಿ ಕಾಸರಗೋಡು ಕರ್ನಾಟಕಕ್ಕೆ ವಿಲೀನಗೊಳಿಸಲು ಸಮ್ಮತಿಸುವ ಅಭ್ಯರ್ಥಿಯನ್ನು ಬೆಂಬಲಿಸಿತು. ಈ ಸಂದರ್ಭದಲ್ಲಿ ಕಾರ್ಯಕರ್ತರುಗಳು ಉಮೇದುವಾರರ ಪರವಾಗಿ ಮಾಡಿರುವ ಭಾಷಣಗಳು ಇಂದು ಇತಿಹಾಸದಲ್ಲಿ ಉಲ್ಲೇಖವಾಗಿ ಹೋಗಿವೆ. ಕನ್ನಡ ನಾಡಿನ ಹಿರಿತನ, ಅವರ ಶ್ರೀಮಂತಿಕೆಗಳನ್ನು ತಮ್ಮ ಭಾಷಣಗಳಲ್ಲಿ ತಿಳಿಸಿದರು. ಉತ್ಸಾಹಿ ಕಾರ್ಯಕರ್ತರು ಕಾಸರಗೋಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಮನೆಮನೆಗಳನ್ನೂ ಸಂದರ್ಶಿಸಿ ಕಾಸರಗೋಡು ಕನ್ನಡ ನಾಡೆಂಬ ಕೂಗಿನ ಚಳವಳಿಗೆ ಪ್ರಚಾರ ನಡೆಸಿದರು. ಪಕ್ಷದ ಪರವಾಗಿ ಮತಯಾಚಿಸುವಾಗ ಜನರಲ್ಲಿ "ಕಾಸರಗೋಡಿನ ಶ್ರೀಮಂತ ಸಂಸ್ಕೃತಿ ಪರಂಪರೆಯು, ಕೇರಳದ ನೆರೆ ನೀರಿನಲ್ಲಿ ಕೊಚ್ಚಿ ಹೋಗಬಾರದು. ನಾವು ನಮ್ಮ ಮಕ್ಕಳು ನಮ್ಮತನವನ್ನು ಮರೆಯಬಾರದು" ಎಂಬ ಕಳಕಳಿಯ ಮಾತುಗಳನ್ನು ಹೇಳಿ ಜನರಲ್ಲಿ ಕ್ರಾಂತಿಕಾರಕ ಮನೋಭಾವನೆಯನ್ನು ಸೃಷ್ಟಿಸಲು ಪ್ರಯತ್ನಿಸಿದರು.

ಈ ರೀತಿಯ ಚಳವಳಿಯನ್ನು ಗಮನಿಸಿದ ಶ್ರೀಮತಿ ಇಂದಿರಾ ಗಾಂಧಿ ನೇತೃತ್ವದ ಕೇಂದ್ರ ಸರ್ಕಾರವು ೧೯೬೬ರಲ್ಲಿ ಗಡಿ ವಿವಾದಕ್ಕೆ ತೆರೆ ಎಳೆಯುವ ದೃಷ್ಟಿಯಿಂದ ಇನ್ನೊಂದು ಆಯೋಗವನ್ನು ರಚಿಸಲು ಮುಂದೆ ಬಂದಿತು. ಇದಕ್ಕೆ ಭಾರತದ ಸರ್ವೋಚ್ಚ ನ್ಯಾಯಲಯದ ನಿವೃತ್ತ ನ್ಯಾಯಮೂರ್ತಿಗಳಾಗಿದ್ದಂತಹ ಮಹಾಜನ್‌ರವರನ್ನು ಏಕ ಸದಸ್ಯರನ್ನಾಗಿ ನೇಮಿಸಲಾಯಿತು. ಆಯೋಗವು ಅದೇ ವರ್ಷದ ಏಪ್ರಿಲ್ ತಿಂಗಳಂದು ಮಂಗಳೂರಿಗೂ, ಕಾಸರಗೋಡಿಗೂ ಭೇಟಿಯಿತ್ತು ಸಾಕ್ಷ್ಯ ಸಂಗ್ರಹ ಮಾಡಿತು. ಕರ್ನಾಟಕ ಸಮಿತಿಯ ಪರವಾಗಿ ಮಹಾಜನ್ ಆಯೋಗಕ್ಕೆ ಸಲ್ಲಿಸಲಾಗಿದ್ದ ವರದಿಗಳನ್ನು ಸುಮಾರು ಎರಡು ತಿಂಗಳಿಗಿಂತಲೂ ಹೆಚ್ಚು ದಿನ ಶ್ರಮವಹಿಸಿ ತಯಾರಿಸಿದರು. ಆಗಿನ ಕರ್ನಾಟಕ ಸಮಿತಿಯ ಅಧ್ಯಕ್ಷರು ಬಿ. ಎಸ್. ಕಕ್ಕಿಲಾಯರು. ಕರ್ನಾಟಕ ಸರ್ಕಾರವು ಮಹಾಜನ ವರದಿಗೆ ಮುಂಚೆಯೇ ನಾವು ಬದ್ಧರಾಗಿರುವುದಾಗಿ ತಿಳಿಸಿತು. ಕೊನೆಗೆ ೧೯೬೭ರಲ್ಲಿ ಪ್ರಕಟಗೊಂಡ ಮಹಾಜನ ವರದಿಯಲ್ಲಿ ಕಾಸರಗೋಡು ಕರ್ನಾಟಕಕ್ಕೆ ಸೇರಿಸುವಂತೆ ಅಭಿಪ್ರಾಯ ಪಡಲಾಯಿತು. ಕಾಸರಗೋಡಿನ ಕನ್ನಡದ ಜನತೆಗೆ, ಸಂತೋಷವಾಗುವಷ್ಟರಲ್ಲಿಯೇ ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಿಸಲಿಲ್ಲವೆಂದು ಮರಾಠಿಗಳು ಮಹಾಜನ ವರದಿಯ

* ಕೊಡಗು ಜಿಲ್ಲಾ ಗ್ಯಾಜಿಟಿಯರ್

ಜಾರಿಯ ವಿರುದ್ಧ ಉಗ್ರ ಚಳವಳಿ ಮಾಡಿ ವರದಿಗೆ ಮೊದಲು ಒಪ್ಪಿಗೆ ನೀಡಿ ನಂತರ ಒಪ್ಪುವುದಿಲ್ಲವೆಂದು ಸಾರಿ, ಮಾತಿಗೆ ತಪ್ಪಿತು.

ಕಾಸರಗೋಡಿನ ಶಾಸಕರಿಬ್ಬರು ದೆಹಲಿಗೆ ಹೋಗಿ ಮಹಾಜನ್ ವರದಿಯನ್ನು ಜಾರಿಗೊಳಿಸಬೇಕೆಂದು ಪ್ರಧಾನಿ ಇಂದಿರಾಗಾಂಧಿ ಹಾಗೂ ಜಗಜೀವನರಾಮ್ ಮೊದಲಾದವರನ್ನು, ಜೊತೆಗೆ ಪ್ರಮುಖ ಲೋಕಸಭಾ ಸದಸ್ಯರುಗಳನ್ನು ಕಂಡು ಮಹಾಜನ್ ವರದಿಯನ್ನು ಜಾರಿಗೊಳಿಸಬೇಕೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಸದಸ್ಯರಾಗಿದ್ದಂತಹ ಬಿ. ಶಂಕರಾನಂದರವರು ಆಯೋಗವನ್ನು ಪ್ರಧಾನಿಯವರಲ್ಲಿಗೆ ಕರೆದೊಯ್ದುದುದಲ್ಲದೆ ಹಲವಾರು ವಿಷಯಗಳನ್ನು ಆಯೋಗದೊಡನೆ ಮನದಟ್ಟಾಗುವಂತೆ ಪ್ರಧಾನಿಯವರಿಗೆ ತಿಳಿಸಿರುವುದು ತಿಳಿದುಬರುತ್ತದೆ.

೧೯೬೭ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನಕ್ಕೆ ನಿಯೋಗವೊಂದು ತೆರಳಿ ಪ್ರಧಾನಿ ಹಾಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದಂತಹ ಇಂದಿರಾ ಗಾಂಧಿಯವರಿಗೆ, ಉಪಪ್ರಧಾನಿಯಾಗಿದ್ದಂತಹ ಮುರಾರ್ಜಿ ದೇಸಾಯಿ, ಹಾಗೂ ಕೇಂದ್ರ ಮಂತ್ರಿ ವೈ. ಬಿ. ಚವಾಣ್, ಎಸ್. ನಿಜಲಿಂಗಪ್ಪ, ಕಾಮರಾಜ್ ಮೊದಲಾದವರನ್ನು ಕಂಡು ಮಹಾಜನ ವರದಿಯನ್ನು ತಕ್ಷಣವೇ ಜಾರಿಗೆ ತರಬೇಕೆಂದು ಒತ್ತಾಯಿಸಿದ್ದಾರೆ. ಈ ದೃಷ್ಟಿಯಿಂದ ೧೯೬೯ ಬೆಂಗಳೂರಿನಲ್ಲಿ, ೧೯೭೦ರಲ್ಲಿ ದೆಹಲಿಯಲ್ಲಿ ಉಪವಾಸ ಸತ್ಯಾಗ್ರಹಗಳನ್ನು ನಡೆಸಲಾಗಿದೆ.

ಇಂದು ಕಾಸರಗೋಡಿನ ನೆರೆಯ ತಾಲ್ಲೂಕಾಗಿರುವ ಹೊಸದುರ್ಗ ಎಂಬುವುದು ಇಂದಿಗೂ ಸಹ ಕನ್ನಡದ ಹೆಸರಿನ ಜೊತೆಗೆ ಕನ್ನಡ ಪ್ರಾಂತ್ಯವೆ. ಈ ಕೇಂದ್ರದಲ್ಲಿ ಕೆಲವು ಶಾಲೆಗಳಲ್ಲಿ ಕನ್ನಡ ಮಾಧ್ಯಮವು ಉಳಿಯುವಂತೆಯೂ ಮತ್ತೆ ಕೆಲವು ಶಾಲೆಗಳಲ್ಲಿ ಕನ್ನಡ ವಿದ್ಯಾಭ್ಯಾಸವನ್ನು ಪ್ರಾರಂಭಿಸುವಂತೆಯೂ ಒತ್ತಾಯಿಸುವ ದೃಷ್ಟಿಯಿಂದ 'ಹೊಸದುರ್ಗ ಕನ್ನಡ ಸಂಘ' ಸ್ಥಾಪನೆಗೊಂಡಿತು. ಈ ಸಂಘಕ್ಕೆ ಸರ್ವವಿಧದ ಸಹಕಾರವನ್ನು 'ಕರ್ನಾಟಕ ಏಕೀಕರಣ ಸಮಿತಿ'- ಕಾಸರಗೋಡು ನೀಡುತ್ತಾ ಬರುತ್ತಿದೆ. ಇಂದು ಈ ಗಡಿನಾಡಿನಲ್ಲಿ 'ಎ ಸ್ಟೈಲ್ ಗಡಿಯಾರ' ಕಂಪನಿಯಲ್ಲಿ ಕನ್ನಡಿಗರಿಗೆ ಉದ್ಯೋಗ ದೊರಕಿಸುವುದರಲ್ಲಿ ಚಳವಳಿ ನಡೆಸಿ ಯಶಸ್ವಿಯಾಗಿರುತ್ತದೆ. ಇವರ ಹೋರಾಟದ ಫಲವಾಗಿ ಎಲ್ಲಾ ಕನ್ನಡ ಹೈಸ್ಕೂಲುಗಳಲ್ಲಿ ಕನ್ನಡ ಬಲ್ಲ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡುವಂತೆ ಮಾಡಿದೆ. ಇದಕ್ಕೂ ಮುಂಚೆ ಕನ್ನಡ ಶಾಲೆಯಲ್ಲಿಯೇ ಕನ್ನಡ ಬಾರದ ಮಳೆಯಾಳಿ ಭಾಷೆಯವರು ಮುಖ್ಯೋಪಾಧ್ಯಾಯರಾಗಿರುತ್ತಿದ್ದರು. ರಸ್ತೆ ಮಾರ್ಗದ ಕಲ್ಲುಗಳಲ್ಲಿ ಕನ್ನಡದಲ್ಲಿಯೂ ಸ್ಥಳ ನಾಮುಗಳನ್ನು ಬರೆಸುವಂತೆ ಒತ್ತಾಯಿಸಿ ಯಶಸ್ವಿಯಾಯಿತು. ಮೇಲಿನವುಗಳೆಲ್ಲವುದಕ್ಕೂ ಕೇರಳ ಸರ್ಕಾರವು ಆದೇಶ ಹೊರಡಿಸಿ ಕರ್ನಾಟಕದ ಸಮಿತಿಗೆ ನೆರವಾಯಿತು ಎಂದರೆ ತಪ್ಪಾಗಲಾರದು.

ಇಂದು ಡಾ. ಕಯ್ಯಾರ ಕಿಞ್ಞಣ್ಣರೈರ ಅಧ್ಯಕ್ಷತೆಯಲ್ಲಿ ಮುನ್ನಡೆದುಕೊಂಡು ಬರುತ್ತಿರುವ 'ಕರ್ನಾಟಕ ಏಕೀಕರಣ ಸಮಿತಿ'ಯು ಕನ್ನಡ ಭಾಷೆಗೆ, ಕನ್ನಡ ಜನರಿಗೆ ಕೇರಳ ಸರ್ಕಾರದಿಂದ, ಸರ್ಕಾರಿ ನೌಕರರಿಂದ ಆಗುತ್ತಿರುವ ಅನ್ಯಾಯಗಳನ್ನು, ಕೇರಳ ಸರ್ಕಾರಕ್ಕೆ ಜೊತೆಗೆ ಕರ್ನಾಟಕದ ಸರ್ಕಾರಕ್ಕೆ ಎಚ್ಚರಿಸುತ್ತಾ ಬರುತ್ತಿದೆ. ಇಂದಿಗೂ ಸಹ

ಕಾಸರಗೋಡಿನಲ್ಲಿ ಕನ್ನಡಿಗರ ಏಕಮಾತ್ರ ಕಾವಲುಗಾರ ಕರ್ನಾಟಕ ಸಮಿತಿ ಎಂದರೆ 'ಕರ್ನಾಟಕ ಏಕೀಕರಣ ಸಮಿತಿ' ಎಂದರೆ ಹೆಮ್ಮೆಯ ಮಾತ.

೪.೧. ಕಾಸರಗೋಡಿನಲ್ಲಿರುವ ಕನ್ನಡ ಸಂಘಗಳು

ಕಾಸರಗೋಡು ಜಿಲ್ಲೆಯು ಇಂದಿಗೂ ಕೇರಳದಲ್ಲಿಯೇ ಉಳಿದಿದ್ದರೂ ಸಹ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ತನ್ನ ಕಾಣಿಕೆಯನ್ನು ಸಲ್ಲಿಸುತ್ತಲೇ ಬಂದಿದೆ. ಇದಕ್ಕೆ ಸಾಕ್ಷಿಯಾಗಿ ಬಹಳಷ್ಟು ಸಂಘ-ಸಂಸ್ಥೆಗಳು ಆ ನಿಟ್ಟಿನಲ್ಲಿ ಅಪಾರವಾದ ಸೇವೆ ಸಲ್ಲಿಸುತ್ತಾ ಬರುತ್ತಿವೆ. ಅವುಗಳೆಂದರೆ

ಲಲಿತ ಕಲಾಸದನ : ಕಾಸರಗೋಡು

೧೯೮೮ರಲ್ಲಿ ತನ್ನ ಬೆಳ್ಳಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸಿಕೊಂಡಿರುವ ಈ ಸಂಘವು ಕಾಸರಗೋಡಿನ ಲಲಿತಕಲೆಗಳ ಉಳಿವಿಗಾಗಿ ದುಡಿಯುತ್ತಾ ಬಂದಿರುತ್ತದೆ. ಇದು ೧೯೬೩ರಲ್ಲಿ ಹುಟ್ಟಿ ಕಾಸರಗೋಡಿನ ಸಂಸ್ಕೃತಿ, ಸಾಹಿತ್ಯ, ಕಲೆ ಉಳಿಯಬೇಕೆಂದು ದುಡಿಯುತ್ತಿದೆ. ಕಾಸರಗೂಡು ಕನ್ನಡನಾಡಾಗಬೇಕೆಂಬ ವಿಷಯದಲ್ಲಿ ಉಗ್ರಹೋರಾಟಕ್ಕಿಳಿದ ಸಂಘವಾಗಿದೆ.

ಗಡಿನಾಡಿನ ಕಲಾವಿದರು : ಕಾಸರಗೋಡು

ಜೂನ್ ೬, ೧೯೮೭ರಲ್ಲಿ ಈ ಸಂಸ್ಥೆಯು ಸ್ಥಾಪನೆಯಾಗಿ ಎಸ್.ಜಿ. ಪ್ರಸಾದರ ನೇತೃತ್ವದಲ್ಲಿ ಕಯ್ಯಾರ ಕಿಞ್ಞಣ್ಣ ರೈ ಅವರ ಆಶ್ರಯದಲ್ಲಿ ಮುನ್ನಡೆದುಕೊಂಡು ಬರುತ್ತಿದೆ.

ಆದರ್ಶ ಯುವಕ ಸಂಘ : ಉಳಿಯತ್ತಡ್ಕ

೧೯೮೧ರಲ್ಲಿ ಸ್ಥಾಪನೆಗೊಂಡು ಪ್ರಸಿದ್ಧ ಕವಿಯಾಗಿದ್ದಂತಹ ರಾಧಾಕೃಷ್ಣ, ಕೆ. ಉಳಯತ್ತಡ್ಕರವರು ಇದರ ಪ್ರಥಮ ಅಧ್ಯಕ್ಷರಾಗಿ ಯು. ಗೋಪಾಲ ಉಪಾಧ್ಯಕ್ಷರಾಗಿ, ವೇಣುಗೋಪಾಲರು ಪ್ರಧಾನ ಕಾರ್ಯದರ್ಶಿಯಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ.

ಶಿವಾಜಿ ಕಲಾಸಂಘ : ಕೊಲ್ಯ

೧೯೭೨ರಲ್ಲಿ ಸ್ಥಾಪನೆಗೊಂಡ ಈ ಸಂಘವು ಕರ್ನಾಟಕ ಸಂಗೀತ, ನಾಟಕ ಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸಿದೆ. ಇಷ್ಟಲ್ಲದೇ ಕೇರಳದ ಸಂಗೀತ ನಾಟಕ ಅಕಾಡೆಮಿಯ ಸದಸ್ಯತ್ವವನ್ನು ಪಡೆದ ಕಾಸರಗೋಡಿತನ ಎರಡು ಕನ್ನಡ ಸಂಸ್ಥೆಗಳಲ್ಲಿ ಈ ಸಂಘವು ಒಂದಾಗಿದೆ. ಈ ಸಂಘದ ವತಿಯಿಂದಲೇ ನವರಾತ್ರಿಯ ಸಂದರ್ಭದಲ್ಲಿ ದಸರಾ ನಾಡಹಬ್ಬವನ್ನು ವೈಭವದಿಂದ ಆಚರಿಸುತ್ತದಲ್ಲದೆ ಖ್ಯಾತ ಕನ್ನಡದ ಕಲಾವಿದರು, ಕವಿಗಳನ್ನು ಸತ್ಕಾರಿಸಿಕೊಂಡು ಬರುತ್ತಿದೆ. ಪ್ರತಿವರ್ಷವೂ ಕಾಸರಗೋಡಿನಲ್ಲಿ ಕನ್ನಡ ನಾಡಿನ ಹಿರಿಮೆಯನ್ನು ಸಾರುತ್ತಿದೆ.

ರೂಪಕಲಾಕರ್ಷಕ ಸಮಿತಿ : ಸುಳ್ಯಮೆ, ಪಾತೂರು

೧೯೭೪ ಮೇ, ೧೯೮೬ ಮತ್ತು ೧೬೮೭ರಲ್ಲಿ 'ಲಲಿತಕಲಾಸದನ'ವು ಸಂಘಟಿಸಿದ ನಾಟಕೋತ್ಸವಗಳಲ್ಲಿ ನಾಟಕವನ್ನಾಡಿ ಪ್ರಥಮ ಪ್ರಶಸ್ತಿ ಪಡೆದ ಕೀರ್ತಿವಂತ ಕನ್ನಡ ಸಂಘ.

ಈ ಸಂಘದಲ್ಲಿ ಪ್ರಸಿದ್ಧ ನಟರಾದ ಕೃಷ್ಣ ಎನ್. ನಚಕಿ, ಪಿ. ಆನಂದ ಪೊಯ್ಯತ್ತ ಬೈಲುಗಳು ತಮ್ಮ ನಟನೆಗಾಗಿ ಪ್ರಶಸ್ತಿ ಸ್ವೀಕರಿಸಿರುತ್ತಾರೆ. ಅನೇಕ ಸಾಮಾಜಿಕ ಕೆಲಸಗಳನ್ನು ಮಾಡಿಕೊಂಡು ಬೆಳೆದುಬರುತ್ತಿದೆ.

ಕಲಾವರ್ಧಕ ಸಂಘ : ಪೆರ್ಲ

ಸುಮಾರು ಮೂವತ್ತು ವರ್ಷಗಳ ಇತಿಹಾಸವಿರುವ 'ಯಕ್ಷಗಾನ ಕಲಾತಪಸ್ವಿ' ಅಭಿನಂದನ ಗ್ರಂಥದೊಂದಿಗೆ ಸನ್ಮಾನಿತರಾಗಿರುವ ಬಲಿಪ ನಾರಾಯಣ ಭಾಗವತರನ್ನು 'ಬೆಳ್ಳಿಯ ಜಾಗಟೆ' ನೀಡಿ ಸನ್ಮಾನಿಸಿದ ತೃಪ್ತಿ ಈ ಸಂಸ್ಥೆಯದು.

ಉದಯ ಯುವಕ ಮಂಡಲ : ಉದಯನಗರ

೨೮.೨.೧೯೮೨ರಲ್ಲಿ ಉದಯಿಸಿದ ಈ ಸಂಘವು ಸಮಾಜ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಬೆಳೆದು ಬರುತ್ತಿದೆ. ದಲಿತ ಜನಾಂಗದವರಿಗೆ ಸರ್ಕಾರ ದಿಂದ ದೊರೆಯುವ ಸೌಲಭ್ಯಗಳನ್ನು ಒದಗಿಸುವಲ್ಲಿ ಆಸಕ್ತಿ ತೋರಿಸಿಕೊಂಡು ಬರುತ್ತಿದೆ.

ಗೀತಾ ಪ್ರಕಾಶನ, ಕಾಸರಗೋಡು

೧೯೬೧ರಲ್ಲಿ ಕಾಸರಗೋಡಿನಲ್ಲಿ ಸ್ಥಾಪನೆಗೊಂಡು ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಕನ್ನಡದಲ್ಲಿ ಅತ್ಯಂತ ಹೆಚ್ಚು ಹೊತ್ತಗೆಗಳನ್ನು ಬೆಳಕಿಗೆ ತಂದ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಡೆದಿದೆ. ಇದು ಹೆಚ್ಚಾಗಿ ಕವನ, ಕತೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ ಹೀಗೆ ಹೆಚ್ಚಿನ ಪ್ರಕಾರಗಳನ್ನು ಪ್ರಕಟಿಸಿವೆ.

ಹೀಗೆ ಕಾಸರಗೋಡಿನಲ್ಲಿರುವ ಕನ್ನಡದ ಸಂಘಗಳನ್ನು ಪಟ್ಟಿ ಮಾಡುತ್ತಾ ಹೋದರೆ ಒಂದು ದೀರ್ಘವಾದ ಪಟ್ಟಿಯೇ ಬೆಳೆಯುತ್ತಾ ಹೋಗುತ್ತದೆ. ಸಂತೋಷ್ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್, ಸೀತಂಗೋಳಿ, ವಿಘ್ನೇಶ್ವರ ಯಕ್ಷಗಾನ ಸಂಘ, ನಾರಾಯಣ ಮಂಗಲಾ ತರುಣ ಕಲಾವೃಂದ (ರಿ.) ಮಧೂರು, ವೆಂಕಟರಮಣ ಕೃಪಾಶ್ರಿತ ಕಲಾಸಂಘ, ಕಾಸರಗೋಡು, ಶ್ರೀ ಸಿದ್ಧಿವಿನಾಯಕ ನಾಟಕ ಸಭಾ, ನೀರ್ಚಾಲು ಇವುಗಳಲ್ಲದೆ ಕಾಸರಗೋಡಿನ ಸರ್ಕಾರಿ ಕಾಲೇಜುಗಳಲ್ಲಿ 'ಕನ್ನಡ ಬಳಗ' ಎಂಬ ಸಂಘಗಳಿದ್ದು ಮೊದಲು ಇವು ಪ್ರಥಮದರ್ಜೆಯ ಸರ್ಕಾರಿ ಕಾಲೇಜಿನಲ್ಲಿ ಸ್ಥಾಪನೆಗೊಂಡು ಇಂದು ಡಾ.ಜಿ.ವಿ.ಗಣೇಶ್‌ರವರ ಅಧ್ಯಕ್ಷತೆಯಲ್ಲಿ ಪ್ರತಿಯೊಂದು ಕಾಲೇಜಿನಲ್ಲಿಯೂ ತನ್ನ ಘಟಕ ಸ್ಥಾಪಿಸಿ ಕನ್ನಡಪರ ಕೆಲಸಗಳನ್ನು ಮಾಡಿಕೊಂಡು ಬರುತ್ತಲಿವೆ. ವಿದ್ಯಾರ್ಥಿಗಳೆಲ್ಲರೂ ಒಂದಾಗಿ 'ಸ್ನೇಹರಂಗ' ಎಂಬ ಸಂಘಟನೆಯನ್ನು ಮಾಡಿಕೊಂಡು ಕನ್ನಡ ಅಭಿವೃದ್ಧಿಯ ಕೆಲಸಗಳ ಜೊತೆಗೆ 'ಕನ್ನಡ ಧ್ವನಿ' ಎಂಬ ಮಾಸಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವುದು ಸಂತೋಷದ ವಿಷಯ.*

ಈ ಹಿಂದೆ ತಿಳಿಸಿದಂತೆ ಕಯ್ಯಾರ ಕಿಞ್ಞಣ್ಣ ರೈ ರವರು ರಚಿಸಿ ಹಾಡಿರುವ ಗೀತೆಯನ್ನು ಮೊದಲು ೧೯೫೬ರಲ್ಲಿ ಧಾರವಾಡದಲ್ಲಿ ನಡೆದಂತಹ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಹಾಡಿದಾಗ ಸಭಾ ಸದಸ್ಯರುಗಳಲ್ಲಿ ರೋಮಾಂಚನವನ್ನುಂಟು ಮಾಡಿತು. ಏಕೆಂದರೆ

---

* ಗಡಿನಾಡಿನ ಕಿಡಿ : ಕಯ್ಯಾರ ಕಿಞ್ಞಣ್ಣ ರೈ ರವರ ಅಭಿನಂದನ ಗ್ರಂಥ.

ರಾಷ್ಟ್ರೀಯ ಪುನರ್‌ರಚನಾ ಆಯೋಗವು ಆಗ ತಾನೇ ಕಾಸರಗೋಡನ್ನು ಕೇರಳಕ್ಕೆ ಸೇರಿಸಿದ್ದ ಸಮಯ, ಬಿಸಿಬಿಸಿ ಚರ್ಚೆಯ ಸಂದರ್ಭದಲ್ಲಿ ಈ ದುಃಖ ದುಮ್ಮಾನಗಳೊಂದಿರುವ ಕವಿತೆಯ ಸಾಲುಗಳು ಪ್ರತಿಯೊಬ್ಬ ಕನ್ನಡಿಗ ಹೃದಯವನ್ನು ನಾಟಿತು. ಇಂದಿಗೂ ಸಹ ಈ ಗಡಿ ಪ್ರದೇಶವನ್ನು ಕಾಯುವ ಕಾರ್ಯ ರೈಯವರ ಹೆಗಲಿಗೆ ಬಿದ್ದಿದೆ. ಇವರ ಅಪೂರ್ವ ಸಾಧನೆಯನ್ನು ಗಮನಿಸಿಯೇ ೧೯೯೭ರಲ್ಲಿ ಮಂಗಳೂರಿನಲ್ಲಿ ನಡೆದಂತಹ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ನೀಡಿ ಸರ್ಕಾರ ಗೌರವಿಸಿದೆ.

ಕಯ್ಯಾರರು ಉತ್ತಮ ಸಂಘಟಕರು, ೧೯೪೩ರಷ್ಟು ಹಿಂದೆಯೇ ದಕ್ಷಿಣ ಕನ್ನಡ ಪತ್ರಕರ್ತರ ಸಂಘದ ಕಾರ್ಯದರ್ಶಿಯಾಗಿದ್ದಾಗಲೇ ತಮ್ಮ ಗೆಳೆಯರೊಂದಿಗೆ ಸೇರಿಕೊಂಡು ಅಖಿಲ ಕರ್ನಾಟಕ ಪತ್ರಕರ್ತರ ಸಮ್ಮೇಳನವನ್ನು ಮಂಗಳೂರಿನಲ್ಲಿ ಸಂಯೋಜಿಸಿದರು. ನಂತರ ೧೯೪೭ರಲ್ಲಿ ಕಾಸರಗೋಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ, ನಂತರ ೧೯೭೩ ಹಾಗೂ ೧೯೭೯ರಲ್ಲಿ ಹಾಗೆಯೇ ೧೯೮೦, ೧೯೯೦, ೧೯೯೬ರಲ್ಲಿ ಗಡಿನಾಡಿನ ಸಮ್ಮೇಳನಗಳನ್ನು ಸಂಘಟಿಸಿ ಅಪೂರ್ವವಾಗಿ ಕನ್ನಡದ ಕೆಲಸ ಮಾಡುತ್ತಾ ಬಂದಿರುತ್ತಾರೆ. 'ಕೊನೆಯ ಉಸಿರಿರುವರೆಗಾದರೋಮ್ಮೆ ಕಾಸರಗೋಡು ಕರ್ನಾಟಕದಲ್ಲಿ ವಿಲೀನವಾಯಿತೆಂಬ' ವಿಷಯ ಕೇಳುವ ಆಸೆಯನ್ನು ಹೊಂದಿ ಹಗಲಿರುಳು ದುಡಿಯುತ್ತಾ ಬರುತ್ತಿದ್ದಾರೆ. ಅವರಿಗೆ ನಮ್ಮ ಬೆಂಬಲದ ಜೊತೆಗೆ ಆಸೆ ಕೈಗೂಡಲೆಂದು ಹಾರೈಸೋಣ.

೪.೨. ಇಂದಿನ ಕಾಸರಗೋಡು

ಕನ್ನಡ ಪ್ರದೇಶವಾಗಿದ್ದ ಕಾಸರಗೋಡು ಕೇರಳಕ್ಕೆ ಸೇರಿದ್ದು ಈ ಶತಮಾನದ ದುರಾದೃಷ್ಟ ಘಟನೆಗಳಲ್ಲೊಂದು. ಮೊದಲು ಇದು ಐದು ಮತಗಳನ್ನೊಳಗೊಂಡಿತ್ತು. ಅವುಗಳೆಂದರೆ ೧. ಮಂಜೇಶ್ವರ, ೨. ಕುಂಬಳೆ ೩. ಕಾಸರಗೋಡು, ೪. ಹೊಸದುರ್ಗ, ೫. ನೀಲೇಶ್ವರ, ಆದರೆ ರಾಜ್ಯ ಪುನರ್‌ವಿಂಗಡಣಾ ಆಯೋಗದ ತನಿಖೆಯ ಸಂದರ್ಭದಲ್ಲಿ ಮತ್ತೆ ಕಾಸರಗೋಡು ಒಡೆದು ಕೇರಳೀಯರು ಮತ್ತೊಂದು ಹೊಸ ತಾಲ್ಲೂಕನ್ನೇ ನಿರ್ಮಾಣ ಮಾಡಿದ್ದರು. ಕೇರಳದವರು ಕಾಸರಗೋಡನ್ನು ಕರ್ನಾಟಕಕ್ಕೆ ಬಿಡಬಾರದೆಂಬ ದೃಷ್ಟಿಯಿಂದ ಇಂದು ಒಂದು ಜಿಲ್ಲಾ ಕೇಂದ್ರವನ್ನಾಗಿ ಪರಿವರ್ತಿಸಿ, ಅನೇಕ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡು ಇಂದು ಕನ್ನಡಿಗರೂ ಸಹ ಕೇರಳದೊಡನೆ ಸಂಪರ್ಕ ಹೊಂದುವಂತೆ ಮಾಡುವಲ್ಲಿ ಮುನ್ನಡೆಯುತ್ತಿದ್ದಾರೆ ಎಂದರೆ ತಪ್ಪಾಗಲಾರದು. ಇಂದಿಗೂ ಸಹ ಕಾಸರಗೋಡಿನ ಜನತೆಯು ಸಾಮಾಜಿಕವಾಗಿ, ಆರ್ಥಿಕವಾಗಿ ಕರ್ನಾಟಕದೊಂದಿಗೆ (ಮಂಗಳೂರು) ಅತಿಯಾದ ಸಂಬಂಧ ಹೊಂದಿದ್ದಾರೆ. ಮಂಗಳೂರಿನಲ್ಲಿರುವ ಬಂಟ ಸಮಾಜದವರ 'ಬಂಟರ ಯಾನೆ ನಾಡವರ ಸಂಘ'ದಲ್ಲಿ ಕಾಸರಗೋಡಿನಲ್ಲಿರುವ ಹೆಚ್ಚಿನ ಸಂಖ್ಯೆಯ ಆ ಜಾತಿಯವರು ಈಗಲೂ ಆ ಸಂಘದ ಸದಸ್ಯರುಗಳಾಗಿದ್ದಾರೆ. ಅದೇ ರೀತಿಯಲ್ಲಿ 'ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಸಂಘದ' ಅನೇಕ ಸದಸ್ಯರು ಕಾಸರಗೋಡಿನಲ್ಲಿದ್ದಾರೆ. ಇದು ಇಂದಿಗೂ ಯಾವುದೇ ರೀತಿಯ ತೊಂದರೆ ಇಲ್ಲದೆ ಮುಂದುವರಿದುಕೊಂಡು ಬರುತ್ತಿದೆ. ಮಹಾಜನ್ ಆಯೋಗವು ಕರ್ನಾಟಕ - ಕೇರಳ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಚಂದ್ರಗಿರಿ-ಪಯಸ್ವಿನಿ ನದಿಗಳ ಉತ್ತರ ಭಾಗವನ್ನು, ಅಮೂರು ಪರ್ವತ ಪ್ರದೇಶದ ದಕ್ಷಿಣಭಾಗ ಮಾತ್ರ ಕಾದಿರಿಸಿರುವ (ದೇವರಕಾಡು) ಅರಣ್ಯ ಪ್ರದೇಶ ಕೂಡ ಕೇರಳದಿಂದ

ಕರ್ನಾಟಕಕ್ಕೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿದೆ. ಈ ನಡುವೆ ಸ್ವತಃ ಕೇರಳ ರಾಜ್ಯದ ಜನಪ್ರಿಯ ಮುಖ್ಯಮಂತ್ರಿ ಗಳಾಗಿದ್ದಂತಹ ಇ.ಎಂ.ಎಸ್. ನಂಬೂದರಿಪಾಡರು ಮಹಾಜನ್ ಆಯೋಗಕ್ಕೆ ಒಂದು ದೀರ್ಘ ಪತ್ರ ಬರೆದು ಗಡಿವಿವಾದ ಕುರಿತು ಅಭಿಪ್ರಾಯಗಳನ್ನು ಸ್ಪಷ್ಟ ಮಾತಿನಿಂದ ತಿಳಿಸಿದ್ದರು. 'ಮಲೆಯಾಳಿ ಮಾತನಾಡುವ ವಿಭಾಗದ ಜನತೆಯನ್ನು ಪ್ರತಿನಿಧಿಸುತ್ತಿರುವ ಹಲವಾರು ಸಂಘ ಸಂಸ್ಥೆಗಳು, ಸಂಯುಕ್ತ ಸೋಷಲಿಸ್ಟ್ ಪಕ್ಷ, ಕಾಸರಗೋಡಿನ ಮಹಾಜನಾ ಸಭಾ ಮುಂತಾದ ಹಲವು ಪ್ರಾತಿನಿಧಿಕ ಸಂಸ್ಥೆಗಳು ಆಯೋಗಕ್ಕೆ ಮನವಿ ಒಪ್ಪಿಸಿ ಹೇಳಿಕೆ ನೀಡಿವೆ. ಹಾಗಾಗಿ ಇದು ಕೆಲವು ಕಡೆಗಳಲ್ಲಿ ಆಯೋಗದ ಶಿಫಾರಸ್ಸು ಕೇರಳದ ಮಟ್ಟಿಗೆ ನೆಪವಾಗಿದ್ದರೂ ಸಹ ಅದು ತನ್ನ ಸತ್ಯಾಂಶವನ್ನು ಕರ್ನಾಟಕದ ಕಡೆಗೆ ಆಗಿರುತ್ತದೆ." ಎಂದು ಹೇಳಿ ಕಾಸರಗೋಡು ಕರ್ನಾಟಕದ ಅವಿಭಾಜ್ಯ ಅಂಗವೆಂಬ ಅಂಶಕ್ಕೆ ಒಪ್ಪಿಗೆ ನೀಡಿದರು.

❑❑

೫. ಗಡಿಪ್ರದೇಶಗಳ ಮೂಲಭೂತ ಸಮಸ್ಯೆಗಳು

ಐತಿಹಾಸಿಕವಾಗಿ, ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಅದಕ್ಕಿಂತಲೂ ಮಿಗಿಲಾಗಿ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಕರ್ನಾಟಕದೊಂದಿಗೆ ಹೆಚ್ಚಿನ ನಿಕಟ ಸಂಪರ್ಕ ಹೊಂದಿ, ಕರ್ನಾಟಕದ ಪ್ರದೇಶಗಳಿಂದು ನಾಡಿನ ಹಿರಿಯ ನಾಯಕರುಗಳಿಂದ ಹೊಗಳಿಕೆ ಪಡೆದಿದ್ದಂತಹ ಕಾಸರಗೋಡು, ವೈನಾಡು, ಹೊಸೂರು, ಆಲೂರು, ಆದವಾನಿ, ರಾಯದುರ್ಗ, ಮಡಕಶಿರಾ, ಉತ್ತರದಲ್ಲಿ ಅಕ್ಕಲ್ಲಕೋಟೆ, ಸೊಲ್ಲಾಪುರ ಜಿಲ್ಲೆಯ ದಕ್ಷಿಣ ಸೊಲ್ಲಾಪುರ್, ದಕ್ಷಿಣ ಸತಾರಾ ಜಿಲ್ಲೆಯ ಜತ್ ತಾಲ್ಲೂಕು, ಕೊಲ್ಲಾಪುರ ಜಿಲ್ಲೆಯ ಶಿರೋಲ್ ಮತ್ತು ಗಡಿ ಹಿಂಗ್ಲೆಜ ಪ್ರದೇಶಗಳು ರಾ. ಪು. ಆಯೋಗದಿಂದ ರಾಜ್ಯದಿಂದ ನೆರೆಯ ರಾಜ್ಯಗಳಿಗೆ ಸೇರಿದ ಕನ್ನಡ ಪ್ರದೇಶಗಳು. ಇಂದಿಗೂ ಸಹ ಈ ಪ್ರದೇಶಗಳಲ್ಲಿ ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ ಕನ್ನಡ ಭಾಷೆಯನ್ನೇ ತಮ್ಮ ಮಾತೃಭಾಷೆಯನ್ನಾಗಿ ಮಾತನಾಡುತ್ತಾ ಬರುತ್ತಿದ್ದಾರೆ. ಇಲ್ಲಿ ಒಂದಲ್ಲ ಒಂದು ರೀತಿಯ ಕನ್ನಡದ ಸೊಗಡನ್ನು ಚೆಲ್ಲುವ ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿವೆ. ಇಷ್ಟೆಲ್ಲಾ ಆದರೂ ಸಹ ಇಂದು ನಮ್ಮ ಗಡಿ ನಾಡಿನ ಜನತೆಯು ಅತಂತ್ರ ಸ್ಥಿತಿಯಲ್ಲಿ ಬದುಕು ನಡೆಸುತ್ತಿರುವುದು ಕಂಡುಬರುತ್ತದೆ.

೫.೧. ಗಡಿನಾಡಿನ ಜನತೆ ಮತ್ತು ಶಿಕ್ಷಣ

ಇಂದು ಕನ್ನಡ ನಾಡಿನ ಗಡಿನಾಡಾಗಲಿ ಗಡಿಯ ಆಚೆ ಹಾಗೂ ಈಚೆ ಕನ್ನಡಿಗರ ಸ್ಥಿತಿಗತಿಯು ತುಂಬ ಶೋಚನೀಯ ಸ್ಥಿತಿಯಲ್ಲಿರುವುದು ದುಃಖದ ವಿಷಯವೇ. ಕರ್ನಾಟಕ ಏಕೀಕರಣ ಗೊಂಡಿತ್ತೆಂದು ನಾವು ೪೫ ವರ್ಷಗಳ ಹಿಂದೆಯೇ ಹೆಮ್ಮೆಯಿಂದ ಹೇಳುವ ಧೈರ್ಯಮಾಡಿದರೂ ಸಹ ಲಕ್ಷಾಂತರ ಗಡಿನಾಡಿನ ಕನ್ನಡಿಗರಿಗೆ ಇದು ಇಂದಿಗೂ ಬಾಯಿ ತೆರೆಯದಂತೆ ಮಾಡಿದೆ. ಕಾರಣ ಗಡಿನಾಡಿನ ಕನ್ನಡಿಗರು ಅನುಭವಿಸುತ್ತಿರುವ ಅನೇಕ ಸಂಕಷ್ಟಗಳಾಗಿವೆ. ಗಡಿನಾಡಿನ ಕನ್ನಡಿಗರಿಗೆ ಉನ್ನತ ಶಿಕ್ಷಣವಿರಲಿ; ಪ್ರಾಥಮಿಕ ಶಿಕ್ಷಣದಲ್ಲಿಯೇ ತೊಂದರೆ ಎದ್ದು ಕಾಣುತ್ತಿದೆ. ಪ್ರಾಥಮಿಕ ಹಂತದಲ್ಲಿ ಗಡಿ ನಾಡಿನಲ್ಲಿ ಹೆಚ್ಚಾಗಿ (ಉದಾ: ಬೆಳಗಾವಿಯಲ್ಲಾದರೆ ಮರಾಠಿ ಭಾಷೆಯ ಪ್ರಭಾವ, ಬಳ್ಳಾರಿಯಲ್ಲಾದರೆ ತೆಲುಗು ಭಾಷೆಯ ಪ್ರಭಾವ) ಭಾಷಾ ಪ್ರಭಾವದಿಂದ ಉನ್ನತ ಮಟ್ಟದ ಶಿಕ್ಷಣ ಪಡೆಯಲು ಸಾಧ್ಯವಾಗದೆ ಅನೇಕ ತೊಂದರೆಯಲ್ಲಿ ಸಿಲುಕಿದ್ದಾರೆ.

ಬೆಳಗಾವಿಯು ದಕ್ಷಿಣ ಭಾರತದಲ್ಲಿಯೇ ಒಂದು ಪ್ರಮುಖ ವಿದ್ಯಾನಗರ. ಮುಂಬೈ, ಮದ್ರಾಸ್ (ಚೆನ್ನೈ)ಗಳನ್ನು ಬಿಟ್ಟರೆ ಕೇವಲ ಬೆಳಗಾವಿ ನಗರದಲ್ಲಿಯೇ ಕಾನೂನು ಕಾಲೇಜು ಇದ್ದುದಲ್ಲದೆ ಅನೇಕ ರಾಷ್ಟ್ರೀಯ ನಾಯಕರನ್ನು ಸೃಷ್ಟಿಸಿದ ಹೆಗ್ಗಳಿಕೆ ಹೊಂದಿದೆ. ಆದರೆ ಗಡಿನಾಡಿನ ಕನ್ನಡಿಗರಿಗೆ ಇಲ್ಲಿನ 'ಲಿಂಗರಾಜ ಕಾಲೇಜು'ವೊಂದನ್ನು ಬಿಟ್ಟರೆ ಉತ್ತಮ

ರೀತಿಯ ಶಿಕ್ಷಣಸೇವೆ ಮಾಡುತ್ತಿರುವ ಸಂಸ್ಥೆಗಳು ಕಂಡುಬರುವುದಿಲ್ಲ. ಆದರೆ ಈ ಪ್ರಸಿದ್ಧ ಕಾಲೇಜು ಸಹ ಇಂದು ಸಂಪೂರ್ಣವಾಗಿ ಮರಾಠಿಗರ ಕೈಯಲ್ಲಿದೆ. ಇಲ್ಲಿ ಕನ್ನಡ ಮಾಧ್ಯಮದ ತರಗತಿಗಳು, ಕನ್ನಡವನ್ನೇ ಪ್ರಥಮ ವಿಷಯವನ್ನಾಗಿ ತೆಗೆದುಕೊಳ್ಳುವುದು, ನಡೆಯುತ್ತಲೆ ಇವೆ. ಇದು ಕೇವಲ ಸರ್ಕಾರದ ಕಾನೂನುಗಳ ಅನ್ವಯ ಆದರೆ ಆಡಳಿತ ವರ್ಗ ಹಾಗೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮರಾಠಿಗರೇ ಆಗಿರುತ್ತಾರೆ. ಇಲ್ಲಿ ಕನ್ನಡ ಭಾಷೆಯ ಅಭಿವೃದ್ಧಿ ಕಷ್ಟ ಸಾಧ್ಯವೇ ಆಗಿದೆ. ಸರ್ಕಾರ ಈ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುವುದು ಉತ್ತಮ. ಇಂದು ರಾಜ್ಯ ಸರ್ಕಾರವು ಬೆಳಗಾವಿ ನಗರದಲ್ಲಿ ತಾಂತ್ರಿಕ ಮಹಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದೆ. ಆದರೆ ಆ ವಿಶ್ವವಿದ್ಯಾಲಯದಲ್ಲಿ ಪ್ರತಿಯೊಬ್ಬ ಸಿಬ್ಬಂದಿಯೂ ಸಹ ಮರಾಠಿಮಯವಾಗಿರುತ್ತದೆ. ಆದರೆ ಇದರಿಂದ ಗಡಿನಾಡಿನ ಶಿಕ್ಷಣ ಅಭಿವೃದ್ಧಿಗೆ ಅಲ್ಪ ಸ್ವಲ್ಪ ಸಹಾಯವಾಗಬಹುದು.

ಗಡಿನಾಡಿನ ವಿದ್ಯಾರ್ಥಿಗಳಿಗೆ ಸೂಕ್ತ ಸಮಯದಲ್ಲಿ ಸರಿಯಾದ ಕನ್ನಡ ಶಿಕ್ಷಕರನ್ನು ನೇಮಿಸಿ ಹೆಚ್ಚಿಗೆ ಶಾಲೆಗಳನ್ನು ತೆರೆದು ಶಿಕ್ಷಕರಿಗೆ ಪ್ರತ್ಯೇಕವಾದ ಸವಲತ್ತುಗಳನ್ನು ನೀಡಬೇಕು. ವಿದ್ಯಾರ್ಥಿಗಳಿಗೆ ಪ್ರತ್ಯೇಕ ಪಠ್ಯಪುಸ್ತಕವನ್ನು ನೀಡಿ ಆ ಪಠ್ಯದಲ್ಲಿ ಕನ್ನಡ ನಾಡಿನ ಪ್ರಾಚೀನ ಇತಿಹಾಸ, ಸಂಸ್ಕೃತಿ, ಅದರ ಮೇರೆಯ ಬಗ್ಗೆ ಹೆಮ್ಮೆ ಬರುವ ಹಾಗೆ ರೂಪಿಸಬೇಕು. ಆದರೆ ಈ ಯಾವ ಕೆಲಸಗಳೂ ಸಹ ಇಂದು ಸರಿಯಾಗಿ ನಡೆಯುತ್ತಿಲ್ಲ. ಗಡಿನಾಡಿನ ಪ್ರದೇಶಗಳಿಗೆ ಶಿಕ್ಷಕರು ಹೋಗುವುದೇ ಒಂದು ದೊಡ್ಡ ಸವಾಲಾಗಿದೆ. ಗಡಿನಾಡಿನ ವಿದ್ಯಾರ್ಥಿಗಳಲ್ಲಿ ಯಾವ ರೀತಿಯ ವಿದ್ಯಾಭ್ಯಾಸದ ವ್ಯಾಮೋಹವೂ ಇಲ್ಲದಂತಾಗಿದೆ. ಈ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಒಟ್ಟಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳ ಅಭಿವೃದ್ಧಿಗೆ ಶ್ರಮಿಸಿದರೆ ತೊಂದರೆ ನಿವಾರಿಸಬಹುದೇನೋ? ಗಡಿನಾಡಿನ ಗ್ರಾಮೀಣ ಬಡಜನರು ಜೀವನದ ಬಗ್ಗೆಯೇ ನಿರಾಶೆಯನ್ನು ಹೊಂದಿದ್ದಾರೆ. ಅವರಿಗೆ ಸಹಾಯಹಸ್ತ ನೀಡಿದರೆ ಅವರಲ್ಲಿ ಆಶಾಭಾವನೆಯು ಮೂಡಬಹುದು.

೫.೨. ಗಡಿ ಪ್ರದೇಶಗಳಲ್ಲಿ ಸರ್ಕಾರದ ನಿರ್ಲಕ್ಷ್ಯ

ರಾಜ್ಯದ ಅಭಿವೃದ್ಧಿಗಾಗಿ ಸರ್ಕಾರವು ರೂಪಿಸುವ ನಿಗಮ ಮಂಡಳಿಗಳಲ್ಲಿ ಕೆಲವನ್ನಾದರು ಗಡಿ ಪ್ರದೇಶಗಳಲ್ಲಿ ಸ್ಥಾಪಿಸಿ ಗಡಿನಾಡಿನ ಪ್ರದೇಶದ ಕನ್ನಡಿಗರಲ್ಲಿ ಹೆಮ್ಮೆ ಮೂಡುವಂತೆ ಮಾಡಬೇಕಾಗಿದೆ. ಇಂದು ಗಡಿನಾಡಿನಲ್ಲಿ ಇವೆಲ್ಲವೂ ಚಂದ್ರ ಲೋಕದಲ್ಲಿವೆಯೋ ಎಂಬ ಭಾವನೆ ಮೂಡಿರುವಂತೆ ಕಾಣುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಏಕೆ ಉತ್ತರ ಕರ್ನಾಟಕದಲ್ಲಿ ಸ್ಥಾಪಿಸಬಾರದು ಅದು ಬೆಳಗಾವಿಯಲ್ಲಿಯೇ ಸ್ಥಾಪಿಸಿದರೆ ಉತ್ತಮವಾಗುತ್ತದೆ ಎಂದು ನನ್ನ ಭಾವನೆ. ಇಂದು ಉತ್ತರ ಕರ್ನಾಟಕ ಎಂದ ತಕ್ಷಣವೇ ಮನಸ್ಸಿಗೆ ಬರುವುದು ಕೇವಲ ಧಾರವಾಡ-ಹುಬ್ಬಳ್ಳಿಗಳು ಮಾತ್ರವೇ. ರೈಲ್ವೆ ವಿಭಾಗದ ಕಚೇರಿಯಾಗಲಿ, ರಾಜ್ಯ ಸಾರಿಗೆ ಸಂಸ್ಥೆಯ ವಿಭಾಗ ಮಟ್ಟದ ಕಚೇರಿಯಾಗಲಿ, ಆಕಾಶವಾಣಿ ಕೇಂದ್ರ, ಉತ್ತರ ಕರ್ನಾಟಕದಲ್ಲಿ ವಿಶೇಷ ವಿಧಾನಸಭೆ ನಡೆಸುವುದಾಗಲಿ ಹೈಕೋರ್ಟ್ ಪೀಠವಾಗಲಿ, ಎಲ್ಲವೂ ಸಹ ಹುಬ್ಬಳ್ಳಿ-ಧಾರವಾಡಕ್ಕೆ

ಮೀಸಲಾಗಿದೆ. ಗಡಿ ಪ್ರದೇಶಗಳಾದ ಬೆಳಗಾಂನಲ್ಲಾಗಲಿ ಅಥವಾ ಬೀದರ್ ಗುಲ್ಬರ್ಗಾಗಳಲ್ಲಿ ಈ ಬಗೆಯ ಸಂಸ್ಥೆಗಳೂ ಇರುವುದಿಲ್ಲ. ಯಾವುದೇ ರೀತಿಯ ಮಹತ್ವದ ಸಭೆ ಸಮಾರಂಭವೂ ನಡೆಯುವುದಿಲ್ಲ. ಇಂದು ಕರ್ನಾಟಕ ವಿಶ್ವವಿದ್ಯಾಲಯವು ಬೆಳಗಾವಿಯಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಿ ಅಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಬೇಕಾದ ಅನುಕೂಲತೆಯನ್ನು ಮಾಡಿಕೊಟ್ಟಿದೆ. ಆದರೆ ಇದು ಕನ್ನಡಿಗರಿಗೆ ತೊಂದರೆಯೇ ಆಗಿದೆ. ಏಕೆಂದರೆ ಅಲ್ಲಿ ಎಲ್ಲವೂ ಸಹ ಮರಾಠಿಮಯವಾಗಿದೆ. ಗಡಿನಾಡಿನಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ರಾಜ್ಯೋತ್ಸವ ಸಂದರ್ಭದಲ್ಲಿ ಪ್ರಶಸ್ತಿ ನೀಡುತ್ತಾ ಬಂದರೆ, ಅವರಲ್ಲಿರುವ ತಾತ್ಸಾರ ಮನೋಭಾವನೆಯನ್ನು ಕಡಿಮೆಗೊಳಿಸಬಹುದು. ಅವರು ನಾಡಿನ ರಕ್ಷಣೆಗಾಗಿ ತಮ್ಮನ್ನೇ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬಹುದು. ೭ನೇ ತರಗತಿ, ೧೦ನೇ ತರಗತಿಯಲ್ಲಿ ಉತ್ತಮ ಅಂಕಪಡೆದವರಿಗೆ ಸನ್ಮಾನಿಸುವುದರ ಜೊತೆಗೆ ಕೆಳಮಟ್ಟದ ವಿದ್ಯಾರ್ಥಿಗಳನ್ನು ಮೇಲೆತ್ತುವ ಕಾರ್ಯ ಮಾಡಬೇಕು.

ಗಡಿನಾಡಿನ ರೈತರಿಗೆ ಸರ್ಕಾರವು ಕಡಿಮೆ ಬಡ್ಡಿಯಲ್ಲಿ ಸಾಲಸೌಲಭ್ಯ ನೀಡಿ ಅವರು ಉತ್ತಮ ರೀತಿಯ ವ್ಯವಸಾಯ ಮಾಡಿ ಅಧಿಕ ಫಸಲು ಪಡೆದು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡಬೇಕಾಗಿದೆ. ಕೆಳವರ್ಗದ ಜನರು ಮೇಲ್ಜಾತಿಯವರಿಂದ ಅನುಭವಿಸುತ್ತಿರುವ ತೊಂದರೆಗೆ ಕಾನೂನಿನ ರೀತ್ಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಲ್ಲಿ ತಲ್ಲೀನವಾಗಬೇಕು. ಗಡಿನಾಡಿನ ಜನತೆಗೆ ಮಳೆ ಬರದೆ ಬೆಳೆಯು ಬಾರದಿದ್ದರೆ ತೆರಿಗೆಯನ್ನು ಮನ್ನಾ ಮಾಡುವ ವ್ಯವಸ್ಥೆ ಮಾಡಬೇಕು. ಈ ಮೇಲಿನ ಅಭಿವೃದ್ಧಿ ಕೆಲಸಗಳು ಇಂದು ಸರ್ಕಾರವು ಕೈಗೊಂಡಿದ್ದರೂ ಸಹ ಅವು ಸರಿಯಾಗಿ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಅವುಗಳು ಜನತೆಗೆ ತಲುಪುವಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವಂತಾಗಬೇಕು.

೫.೩. ಗಡಿ ಪ್ರದೇಶಗಳಲ್ಲಿನ ಸಾಮಾಜಿಕ ತೊಂದರೆಗಳು

ಸಾಮಾನ್ಯವಾಗಿ ಗಡಿ ಪ್ರದೇಶಗಳಲ್ಲಿ, ಗಡಿಯ ಆಚೆ ಸುಮಾರು ೬೦ ಕಿ.ಮೀ. ಈಚೆ ೬೦ ಕಿ.ಮೀ. ಅಂತರಗಳಲ್ಲಿ ದ್ವಿಭಾಷಿಕತೆಯೂ ಉಂಟಾಗಿರುತ್ತದೆ. ಇಂತಹ ಕಡೆಗಳಲ್ಲಿನ ಸಾಮಾಜಿಕ ಜೀವನವು ಸಹ ತನ್ನದೆಯಾದ ವಿಶೇಷ ರೀತಿಯ ಮಹತ್ವ ಪಡೆದುಕೊಂಡಿರುತ್ತದೆ. ಪ್ರಮುಖವಾಗಿ ಇದು ನೆರೆಯ ರಾಜ್ಯಗಳಾದಂತಹ ಕರ್ನಾಟಕ ದೊಂದಿಗೆ ಗಡಿ ಹೊಂದಿರುವ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳಿಗೆ ಹೋಲಿಸಿದರೆ ಸ್ಪಷ್ಟವಾಗುತ್ತದೆ. ನಮ್ಮ ಸಮಾಜವು ಪುರುಷ ಪ್ರಧಾನವಾದ ಸಮಾಜ. ಈ ದೃಷ್ಟಿಯಿಂದ ನಾನು ಇಲ್ಲಿ ಬೆಳಗಾವಿಯನ್ನು ಉದಾಹರಿಸಬಯಸುತ್ತೇನೆ. ಬೆಳಗಾವಿಯ ಯುವಕರು ಉದ್ಯೋಗಗಳಿಗಾಗಿ ಪುಣೆ, ಮುಂಬೈ ಹಾಗೂ ಗುಜರಾತಿನವರೆಗೂ ವಲಸೆ ಹೋಗಿ ಅಲ್ಲಿಯೇ ನೆಲಸುವಂತಹ ವಾತಾವರಣವನ್ನು ಸೃಷ್ಟಿಸಿಕೊಂಡು ಉತ್ತಮ ಜೀವನ ನಡೆಸುತ್ತಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ಅವರಿಗೆ ಮದುವೆಯಾಗುವ ಬೆಳಗಾವಿಯ ಯುವತಿಗೆ ಅವನಿರುವ (ಉದಾ: ಮಹಾರಾಷ್ಟ್ರ) ರಾಜ್ಯದ ಭಾಷೆ ತಿಳಿದಿದ್ದರೆ ದಿನನಿತ್ಯದ ವ್ಯವಹಾರಕ್ಕೆ ಅನುಕೂಲವಾಗುವುದೆಂಬ ಆಸೆಯಿಂದ ಇಂದಿಗೂ ಸಹ ಬೆಳಗಾವಿಯಲ್ಲಿ ಹೆಣ್ಣು ಮಗಳನ್ನು ಕನ್ನಡಿಗರೂ ಸಹ ಮರಾಠಿ ಶಾಲೆಗೆ ಕಳುಹಿಸುತ್ತಾರೆ. ಗಂಡುಮಕ್ಕಳು ಮಾತ್ರ ಕನ್ನಡದ ಜೊತೆ ಮರಾಠಿ ಅಥವಾ ಇಂಗ್ಲಿಷ್‌ನ್ನು ತೆಗೆದುಕೊಂಡು ವಿದ್ಯಾಭ್ಯಾಸ

ಮುಂದುವರಿಸುತ್ತಾರೆ. ಇದೆಂಥ ವಿಪರ್ಯಾಸ ನೋಡಿ. ಇದು ಕೇವಲ ಬೆಳಗಾವಿ ನಗರಕ್ಕೆ ಮೀಸಲಾಗಿರುವುದಿಲ್ಲ. ಆಂಧ್ರದ ಗಡಿಯಲ್ಲಿ ಹೆಣ್ಣುಮಕ್ಕಳನ್ನು ತೆಲುಗು ಭಾಷೆಯ ಶಾಲೆಗೆ ಸೇರಿಸಿ ಆ ಭಾಷೆಯ ಜ್ಞಾನವನ್ನು ಹೆಚ್ಚಿಸಿಕೊಳ್ಳುವಂತೆಯೂ, ಕಾಸರಗೋಡಿನಲ್ಲಿ ಮಲಯಾಳಿ ಶಾಲೆಗೆ ಸೇರಿಸುವುದು ಈ ಮೇಲಿನ ಸಮಸ್ಯೆಗಾಗಿಯೇ. ಇಲ್ಲದಿದ್ದರೆ ಉತ್ತಮ ವಿದ್ಯಾಭ್ಯಾಸದ ಜೊತೆಗೆ ಉನ್ನತ ಅಧಿಕಾರದಲ್ಲಿರುವ ಯುವಕರುಗಳು ತಮ್ಮ ಮಗಳಿಗೆ ದೊರೆಯುವುದಿಲ್ಲವೆಂಬ ವಾತವರಣ ಸೃಷ್ಟಿಯಾಗಿದೆ. ಇದೊಂದು ಗಡಿನಾಡಿನ ಪ್ರಮುಖವಾದ ಸಾಮಾಜಿಕ ಸಮಸ್ಯೆ.

೫.೪. ಗಡಿಪ್ರದೇಶಗಳು ಹಾಗೂ ದ್ವಿಭಾಷಿಕತೆ

ಸಾಮಾನ್ಯವಾಗಿ ಪ್ರಪಂಚದ ಯಾವುದೇ ಗಡಿ ಪ್ರದೇಶದಲ್ಲೇ ಆಗಲಿ ಅಥವಾ ರಾಷ್ಟ್ರದೊಳಗಿನ ಯಾವುದೇ ರಾಜ್ಯಗಳ ಗಡಿ ಪ್ರದೇಶಗಳಲ್ಲಿಯೇ ಇರಲಿ ದ್ವಿಭಾಷಿಕತೆಯು ಇರುವುದು ಸರ್ವೇಸಾಮಾನ್ಯ. ಉದಾ: ನಮ್ಮ ರಾಜ್ಯವನ್ನೇ ಚರ್ಚೆಗೆ ತೆಗೆದುಕೊಂಡರೆ ಉತ್ತರದ ಬೆಳಗಾಂ, ಗುಲ್ಬರ್ಗಾ, ಬೀದರ್, ಬಿಜಾಪುರಗಳಲ್ಲಿ 'ಕನ್ನಡ+ಮರಾಠಿ' ಭಾಷಿಗರು ಹೆಚ್ಚಾಗಿ ಕಂಡುಬರುತ್ತಾರೆ. ಅದೇರೀತಿಯಾಗಿ ಮಹಾರಾಷ್ಟ್ರದಲ್ಲಿ ಕರ್ನಾಟಕದ ಗಡಿ ಪ್ರದೇಶಗಳಾಗಿರುವಂತಹ ಸೊಲ್ಲಾಪುರ, ರತ್ನಗಿರಿ, ಪೂನಾಗಳಲ್ಲಿ ಹೆಚ್ಚಾಗಿ 'ಕನ್ನಡ+ ಮರಾಠಿ'ಗರು ಕಂಡುಬರುತ್ತಾರೆ. ಕರ್ನಾಟಕ ಮತ್ತು ಆಂಧ್ರಕ್ಕೆ ಹೋಲಿಸಿದರೆ ಆಂಧ್ರಪ್ರದೇಶದ ಗಡಿ ಜಿಲ್ಲೆಗಳಾಗಿರುವಂತಹ ಕರ್ನಾಟಕದ ರಾಯಚೂರು, ಬಳ್ಳಾರಿ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಸುಮಾರು ೫೦%ರಷ್ಟು ಕನ್ನಡದ ಜೊತೆಗೆ ತೆಲುಗು ಭಾಷೆಯ ಸಂಪೂರ್ಣ ಅರಿವಿರುವವರು ಇದ್ದಾರೆ. ಅದೇ ರೀತಿಯಲ್ಲಿ ಆಂಧ್ರದ ಗಡಿ ಪ್ರದೇಶಗಳಾದಂತಹ ಅನಂತಪುರ, ಗುಂತ್‌ಗಲ್ಲ, ತಿರುಪತಿ, ಆದವಾನಿ, ಆಲೂರು, ಮಡಕಶಿರಾ, ಕಲ್ಯಾಣಗಿರಿಗಳಲ್ಲಿ 'ತೆಲುಗು+ಕನ್ನಡ'ವನ್ನು ಶೇ೬೦% ಹೊಂದಿರುವುದು ಕಂಡುಬರುತ್ತದೆ. ಅದೇ ಪ್ರಮಾಣದಲ್ಲಿ ನಾವು ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಗಡಿ ಪ್ರದೇಶಗಳನ್ನು ನೋಡಬಹುದು. ಸಾಮಾನ್ಯವಾಗಿ ಇದು ಸ್ವಾಭಾವಿಕವಾಗಿಯೇ ಬೆಳೆದುಬರುವುದಾಗಿರುತ್ತದೆ. ಉದಾ: ರಾಜ್ಯದಲ್ಲಿರುವ ಮುಸ್ಲಿಂ ಅವರಿಗೆ ಅವರ ಮಾತೃಭಾಷೆ ಹೇಗೆ ಉರ್ದು ಆಗಿದ್ದು, ಅದರ ಜೊತೆಯಲ್ಲಿಯೇ ರಾಜ್ಯ ಭಾಷೆಯನ್ನು ಅದು ಕನ್ನಡವಾಗಿರಲಿ, ತೆಲುಗಾಗಿರಲಿ, ತಮಿಳಾಗಿರಲಿ ಕಲಿಯುವರೊ ಹಾಗೆ ಗಡಿನಾಡಿನ ಜನರಿಗೆ ಅವರಾಡುವ ಭಾಷೆಯ ಜೊತೆ ಅವರ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತಿರುವ ನೆರೆಯ ಭಾಷೆಯು ಸ್ವಾಭಾವಿಕವಾಗಿಯೇ ಬರುತ್ತದೆ.

ಗಡಿನಾಡಿನ ಪ್ರದೇಶದಲ್ಲಿ ಇರುವ ಪ್ರಮುಖ ಸಮಸ್ಯೆ ಎಂದರೆ ಗಡಿನಾಡಿನ ಬೇರೆ ಭಾಷೆಯ ಜನರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಅವರಿಗೆ ವಿಶೇಷ ರೀತಿಯ ಸವಲತ್ತುಗಳನ್ನು ನೀಡುವುದಾಗಿರುತ್ತದೆ. ಏಕೆ ಈ ಮಾತನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆಂದರೆ ಬೆಳಗಾವಿಯಲ್ಲಿ ಈಗ ಸುಮಾರು ೧೨೭ ಮಾಧ್ಯಮಿಕ ಅನುದಾನಿತ ಶಾಲೆಗಳಲ್ಲಿ ಕೇವಲ ೩೨ ಶಾಲೆಗಳು ಮಾತ್ರ ಬಹುಸಂಖ್ಯಾತರಿಗೆ ಸೇರಿದ್ದೆಂದು ತಿಳಿದುಬರುತ್ತದೆ. ಉಳಿದವುಗಳೆಲ್ಲವೂ ಸಹ ಅಲ್ಪಸಂಖ್ಯಾತರೆಂದು ಪರಿಗಣಿಸಿರುವ ಮರಾಠಿಗರಿಗೆ, ಕ್ರಿಶ್ಚಿಯನ್ನರಿಗೆ, ಮುಸಲ್ಮಾನರಿಗೆ, ಕೊಂಕಣಿ ಭಾಷಿಕರಿಗೆ ಸೇರಿವೆ. ಆದರೆ ಈ ಯಾವ

ಶಾಲೆಗಳಲ್ಲಿಯೂ ಸಹ ಯಾವುದೇ ರೀತಿಯ ರೋಸ್ಟರ್ ನಿಯಮಗಳನ್ನು ಜಾರಿಗೆ ತರುವಂತೆ ಸರ್ಕಾರ ನೋಡಿಕೊಂಡಿಲ್ಲ. ಏಕೆಂದರೆ ಈ ಶಾಲೆಗಳು ಅಲ್ಪಸಂಖ್ಯಾತರಿಗೆ ಸೇರಿದ ಶಾಲೆಗಳು. ಆದರಿಂದ ಇವುಗಳಿಗೆ ರೋಸ್ಟರ್ ನಿಯಮದಿಂದ ಸಡಿಲಿಕೆ ಇದೆ. ಎಂದು ಉತ್ತರ ಬರುತ್ತದೆ. ಇದೇ ರೀತಿಯ ನಿಯಮವು ಆಂಧ್ರ, ಕೇರಳ, ತಮಿಳುನಾಡು ಗಡಿ ಪ್ರದೇಶಗಳಲ್ಲಿಯೂ ನಡೆಯುತ್ತಿದೆ. ಈ ದೃಷ್ಟಿಯಿಂದ ಇಲ್ಲಿ ಕನ್ನಡ ಭಾಷೆ, ಕನ್ನಡದ ಜನರು ಅನೇಕ ತೊಂದರೆಯಲ್ಲಿ ಸಿಲುಕಿರುವುದು ಕಂಡುಬರುತ್ತದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ದೃಷ್ಟಿಯಿಂದ ಗಡಿನಾಡಿನ ಕನ್ನಡಿಗರು ಸರ್ಕಾರದ ಗಮನಕ್ಕೆ ಹಾಗೂ ಸಂಬಂಧಿಸಿದ ನಿಗಮಗಳಿಗೆ ತಿಳಿಸಿದ್ದರೂ ಸಹ ಯಾವುದೇ ರೀತಿಯ ಪರಿಹಾರ ಕಂಡುಬಂದಂತೆ ಕಾಣುವುದಿಲ್ಲ. ಇದರ ವಿರುದ್ಧ ಬೆಳಗಾವಿಯಲ್ಲಿ ಕನ್ನಡ ಪರ ಸಂಘಗಳು ೧೯೮೦ರಿಂದಲೂ ಉಗ್ರಹೋರಾಟ ನಡೆಸಿಕೊಂಡು ಬರುತ್ತಿವೆ.

೫.೫. ಕೋಲಾರ ಜಿಲ್ಲಾ ಗಡಿಸಮಸ್ಯೆ ಮತ್ತು ಚಳವಳಿ

ಬೆಳಗಾವಿ, ಕಾಸರಗೋಡು ಅಥವಾ ಅದವಾನಿ ಪ್ರದೇಶಗಳ ಗಡಿ ಸಮಸ್ಯೆಯು ಒಂದು ರೀತಿಯದಾದರೆ ತಮಿಳುನಾಡಿಗೆ ಮತ್ತು ಆಂಧ್ರಕ್ಕೆ ಚಾಚಿಕೊಂಡಂತೆ ಇರುವ ಕೋಲಾರ ಜಿಲ್ಲೆಯ ಸಮಸ್ಯೆಯೇ ಬೇರೆ ರೀತಿಯದು. ಪ್ರಾಂತ್ಯಗಳ ಪುನರ್ವಿಂಗಡಣೆಗಾಗಿ ಕೇಂದ್ರ ಸರ್ಕಾರ ನೇಮಿಸಿದ್ದಂತಹ ಎಸ್.ಆರ್.ಸಿ ಕಮೀಷನ್‌ರವರು ಒಂದು ರೀತಿಯಲ್ಲಿ ಕರ್ನಾಟಕವನ್ನು ಬಹುವಾಗಿ ಬಲ್ಲವರು. ಕೋಲಾರ ಜಿಲ್ಲೆಯು ಆಂಧ್ರಪ್ರದೇಶಕ್ಕೆ ಅತ್ಯಂತ ಸಮೀಪದಲ್ಲಿಯೇ ಇದೆ. ಬಾಗೇಪಲ್ಲಿ, ಶ್ರೀನಿವಾಸಪುರ, ಚಿಂತಾಮಣಿ, ಮುಳಬಾಗಿಲು, ಗೌರಿಬಿದನೂರು, ಕೋಲಾರ ಮುಂತಾದ ಪ್ರದೇಶಗಳಂತು ಆಂಧ್ರದೊಂದಿಗೆ ಯಾವ ರೀತಿಯ ಸಂಬಂಧ ಹೊಂದಿವೆ ಎಂದರೆ ಆಂಧ್ರ ಪ್ರದೇಶಕ್ಕೆ ನೆಗಡಿಯಾದರೆ ಇವುಗಳೆಲ್ಲವೂ ಸೀನುವ ಪರಿಪಾಟ ಮಾಡಿಕೊಂಡು ಬರುತ್ತಿದೆ. ಮೇಲೆ ತಿಳಿಸಿದ ಹಾಗೆ ಈ ಜಿಲ್ಲೆಯು ಎರಡು ರಾಜ್ಯಗಳಿಗೆ ಮೇರೆಯಾಗಿದ್ದು ಕೋಲಾರ ಸಮೀಪದ ಕೆಲವು ಊರುಗಳಲ್ಲಿ ಹೆಚ್ಚಿನ ಜನರು ತಮಿಳು ಮಾತನಾಡುತ್ತಾರೆ. ಕೆ.ಜಿ.ಎಫ್ ಎಂದು ಕರೆಸಿಕೊಳ್ಳುವ ಚಿನ್ನದ ಗಣಿ ಪ್ರದೇಶವಂತು ಇಂದು ಪುಟ್ಟ ತಮಿಳುನಾಡೇ ಆಗಿದೆ. ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ, ಶ್ರೀನಿವಾಸಪುರಗಳಲ್ಲಿ ಶೇಕಡ ೧೦೦ಕ್ಕೆ ೭೫%ರಷ್ಟು ತೆಲುಗು ಮಾತನಾಡುತ್ತಾರೆ. ಆದರೆ ನಾನು ಕ್ಷೇತ್ರಕಾರ್ಯದ ಸಮಯದಲ್ಲಿ ಗಮನಿಸಿದ ಅಂಶವೆಂದರೆ ಇವರ್‍ಯಾರಿಗೂ ತೆಲುಗು ಬರೆಯಲು ಬರುವುದಿಲ್ಲ. ತೆಲುಗು ಭಾಷೆಯನ್ನು ಕನ್ನಡದ ಅಕ್ಷರಗಳಲ್ಲಿ ಮುದ್ರಿಸಿ, ಮದುವೆ ಇತ್ಯಾದಿ ಸಮಾರಂಭಗಳ ಶುಭಾಶಯ ಪತ್ರಿಕೆಗಳನ್ನು ವಿತರಿಸುತ್ತಾರೆ.

ಕೋಲಾರದ ಜಿಲ್ಲೆಯ ಗಡಿ ತಾಲ್ಲೂಕು ಪ್ರದೇಶಗಳ ಶಾಲೆಗಳಲ್ಲಿ ತೆಲುಗು ಭಾಷೆಯ ಮುಖಾಂತರ ಕನ್ನಡ ಪಾಠ ಮಾಡಿಕೊಂಡು ಬರುತ್ತಿದೆ. ಕನ್ನಡದ ಚಲನಚಿತ್ರಗಳಂತು ಇಲ್ಲಿ ಒಂದು ದಿನವೂ ನಡೆಯುವುದೇ ಇಲ್ಲ. ಅದಕ್ಕಿಂತ ಮುಖ್ಯವಾಗಿ ಈ ಪ್ರದೇಶಗಳಲ್ಲಿ ಕನ್ನಡದ ಚಿತ್ರಗಳನ್ನೇ ಬಿಡುಗಡೆ ಮಾಡುವುದೇ ಇಲ್ಲ.

ಎಸ್.ಆರ್.ಸಿ. ಕಮಿಷನ್‌ಗೆ ದೊರೆತ ಸಾಕ್ಷ್ಯಾಧಾರಗಳಿಂದ ಅಥವಾ ಕರ್ನಾಟಕ ದವರ ದುರ್ದೈವವೊ ಏನೋ ಎಂಬುವುದಕ್ಕೆ ಕಾಸರಗೋಡನ್ನು ಕರ್ನಾಟಕದಿಂದ ಕಿತ್ತು

ಕೋಲಾರವನ್ನು ಕರ್ನಾಟಕಕ್ಕೆ ಸೇರಿಸುವ ಶಿಫಾರಸ್ಸನ್ನು ಮಾಡಿತು. ಇಂದಿಗೂ ಕಾಸರಗೋಡು ನೆರೆ ರಾಜ್ಯದಲ್ಲಿದ್ದರೂ ಸಹ ಕರ್ನಾಟಕದ ಒಳಿತನ್ನು ಬಯಸುತ್ತಿದೆ. ಆದರೆ ಕರ್ನಾಟಕದ ಒಳಗಿರುವ ಕೋಲಾರ ಹಾಗೂ ಬೆಳಗಾವಿ ಕರ್ನಾಟಕದಲ್ಲಿದ್ದರೂ ಸಹ ಕರ್ನಾಟಕದಿಂದ ಬೇರ್ಪಡಲು ಬಯಸುತ್ತಿವೆ. ಈ ಪ್ರದೇಶಗಳಲ್ಲಿ ಕಾಸರಗೋಡಿಗೆ ಹೋಲಿಸಿದರೆ ಕನ್ನಡ ಅಭಿಮಾನಿ ಸಂಘಗಳೂ ಸಹ ಕಡಿಮೆಯೇ.

ಇದಕ್ಕೆಲ್ಲ ಮೂಲಕಾರಣವೆಂದರೆ ಕನ್ನಡಿಗರಾದಂತಹ ನಮ್ಮಲ್ಲಿನ ಅಭಿಮಾನ ಶೂನ್ಯತೆ. ಈ ದೃಷ್ಟಿಯಿಂದ ನಮ್ಮ ರಾಜಕಾರಣಿಗಳು, ಸಮಾಜ ಕಾರ್ಯಕರ್ತರುಗಳು ನಿಜಕ್ಕೂ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕನ್ನಡ ಪ್ರಜ್ಞೆ ಬೆಳೆಸಲು ಚಳವಳಿಯನ್ನೇ ನಡೆಸಬೇಕಾಗಿದೆ. ಪ್ರಸ್ತುತವಾಗಿ ಮಳೆ, ಬೆಳೆ ದೃಷ್ಟಿಯಿಂದಲೂ ಕೋಲಾರ ಜಿಲ್ಲೆ ರಾಜ್ಯದಲ್ಲಿಯೇ ಹಿಂದುಳಿದ ಪ್ರದೇಶ. ಅಷ್ಟಲ್ಲದೆ ಇಲ್ಲಿ ಹೆಚ್ಚಾಗಿ ಹಿಂದುಳಿದ ಜನರೇ ವಾಸಿಸುತ್ತಿರುವುದರಿಂದ ಇಲ್ಲಿನ ಜನತೆಯು ಜಾಗೃತಿಯ ದೃಷ್ಟಿಯಿಂದಲೂ ಹಿಂದೆ ಬಿದ್ದಿರುವ ಪ್ರದೇಶವಾಗಿದೆ. ಬೆಳಗಾವಿಯಲ್ಲಿ ಮರಾಠಿ ಭಾಷೆಯ ಪ್ರಭಾವ ಹೇಗೆ ಕಾಡುತ್ತಿದೆಯೋ ಹಾಗೆಯೇ ಕೋಲಾರದಲ್ಲಿ ತೆಲುಗಿನ ಪ್ರಭಾವ ಹೆಚ್ಚಾಗಿಯೇ ಕಾಣುತ್ತಿದೆ.

ನಾವು ಇಂದು ಗಡಿನಾಡಿನಲ್ಲಿ ಅವರನ್ನು ಜಾಗೃತಿಗೊಳಿಸಲು ಗಡಿನಾಡಿನ ಉತ್ಸವಗಳನ್ನು ಏರ್ಪಡಿಸುವುದರಿಂದಾಗಲಿ, ಗಡಿನಾಡಿನ ಎಂ.ಎಲ್.ಎ.ಗಳಿಗೆ ಸರ್ಕಾರದಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡುವುದರಿಂದಾಗಲಿ ಅಥವಾ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿಕೊಂಡು ಕನ್ನಡದ ಬಗೆಗೆ ಭಾಷಣಗಳನ್ನು, ಗೋಷ್ಠಿಗಳನ್ನು ನಡೆಸಿದ ಮಟ್ಟಿಗೆ ಗಡಿ ಜಿಲ್ಲೆಗಳಲ್ಲಿ ಕನ್ನಡದ ಸ್ಥಿತಿ ಸುಧಾರಿಸುತ್ತದೆ ಎಂದು ಧೈರ್ಯವಾಗಿ ಹೇಳಲು ಸಾಧ್ಯವಾಗಿಲ್ಲ. ಅದರ ಬದಲು ಕನ್ನಡದ ಗುಣಮಟ್ಟವನ್ನು ಹೆಚ್ಚಿಸಿದರೆ ಅದು ತಾನಾಗಿಯೇ ಮಹತ್ವ ಪಡೆಯುತ್ತದೆ ಎಂದು ನನ್ನ ಭಾವನೆ. ಇಂದು ಕೋಲಾರ ಮತ್ತು ಬೆಳಗಾವಿಗಳಲ್ಲಿ ಕೆಲವು ನಿರ್ದಿಷ್ಟ ಕೋಮಿನವರ ಭಾಷೆಯಾಗಿ ಉಳಿದುಕೊಂಡು ಬರುತ್ತಿರುವ ಕನ್ನಡ ಹೀಗೆಯೇ ಮುಂದುವರೆದರೆ ಅದು ಶುಭ ಲಕ್ಷಣವಾಗಿ ಕಾಣುವುದಿಲ್ಲ. ಪ್ರಮುಖವಾಗಿ ಇಂದು ಕನ್ನಡವೆಂದರೆ ವಿದ್ಯಾರ್ಥಿ ಸಮೂಹದಲ್ಲಂತೂ ಏನೋ ಒಂದು ರೀತಿಯ ತಾತ್ಸಾರ ಮನೋಭಾವನೆ ಮೂಡಿರುವುದು ಎಲ್ಲರಿಗೂ ತಿಳಿದಿರುವುದರ ಜೊತೆಗೆ ವಿಷಾದ ತರುವ ಸಂಗತಿಯಾಗಿದೆ. ಇದಕ್ಕೆಂದು ಕೊನೆ ?

❑❑

೬. ಗಡಿನಾಡಿನ ಬಗ್ಗೆ ಗಣ್ಯರ ಅಭಿಪ್ರಾಯಗಳು

ಗಡಿ ಪ್ರದೇಶಗಳ ನಿರ್ಣಯಕ್ಕಾಗಿ ರಚಿತವಾದಂತಹ ಆಯೋಗಗಳು ರಾಜಕೀಯ ಹಾಗೂ ಸ್ವಾರ್ಥಕ್ಕೆ ಒಳಗಾಗಿ ಕನ್ನಡದ ಪ್ರದೇಶಗಳನ್ನು ನೆರೆಯ ರಾಜ್ಯಗಳಲ್ಲಿ ಸೇರಿಸಿತು. ಇದರಿಂದ ಕರ್ನಾಟಕಕ್ಕೆ ಆದ ನಷ್ಟ ಅಪಾರ. ಇದಕ್ಕಾಗಿ ರಾಜ್ಯದ ಗಣ್ಯ ವ್ಯಕ್ತಿಗಳು ಉಗ್ರರೀತಿಯ ಪ್ರತಿಭಟನೆ ವ್ಯಕ್ತಪಡಿಸಿ ಹೋರಾಡಿರುವುದು ಸತ್ಯ. ಅಂದು ಕರ್ನಾಟಕದ ಸಂಪೂರ್ಣ ಏಕೀಕರಣಕ್ಕಾಗಿ ಹೋರಾಡಿದಂತಹ ನಾಡಿನ ಈ ಹಿರಿಯ ಚೇತನರ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ನೀಡಿರುತ್ತೇನೆ.

ಡಾ. ಪಾಟೀಲ ಪುಟ್ಟಪ್ಪ (ಪಾಪು)

ಕಾಸರಗೋಡು ಕುರಿತು- "ಕನ್ನಡಿಗರ ನೆಚ್ಚಿನ ಕವಿ, ಸಂಶೋಧಕರಾದ ಮಂಜೇಶ್ವರದ ಗೋವಿಂದ ಪೈ ಅವರು ಬಾಳಿ, ಬೆಳೆದ ಮಂಜೇಶ್ವರವೂ ಕೈ ಬಿಡಲಿದೆ. ಕಾಸರಗೋಡು ಅಚ್ಚಕನ್ನಡ ಪ್ರದೇಶವೆಂದು ಯಾವ ಐತಿಹಾಸಿಕ ಸಂಶೋಧನೆಗಳು ಸಾರುತ್ತಾ ಬಂದಿದೆಯೋ ಅವರ ಹುಟ್ಟೂರೇ ಕನ್ನಡಕ್ಕೆ ಇಲ್ಲದಾಗಿದೆ. ಇದು ವಿಧಿಯ ಆಟವೇ ಸರಿ! ಕನ್ನಡದ ಸಾರಸ್ವತ ಪ್ರಪಂಚಕ್ಕೆ ವಿಶಿಷ್ಟ ರೀತಿಯಲ್ಲಿರುವ ಈ ಹಿರಿಯರ ವೃದ್ಧ ಸ್ಫೂರ್ತಿ ಚೇತನಗಳು ವಿಕಾಸವಾದ ಮಂಜೇಶ್ವರ ಕನ್ನಡ ಕುಲಕೋಟಿಗೆ ಪವಿತ್ರ ಸ್ಥಳ. ಮಂಜೇಶ್ವರಕ್ಕಾಗಿಯಾದರೂ ಕಾಸರಗೋಡನ್ನು ಉಳಿಸಿಕೊಳ್ಳುವುದು ಕನ್ನಡದ ಭೀಮ ಶಕ್ತಿಗೆ ಎಟುಕದ ವಿಷಯವಿಲ್ಲ."

ಹೆಚ್.ವಿ.ಕಾಮತ್ (ಮಾಜಿ ಲೋಕಸಭಾ ಸದಸ್ಯರು)

'ರಾ.ಪು. ಆಯೋಗವು ಕೇವಲ ಅರ್ಧ ವಾಕ್ಯದಲ್ಲಿ ಕಾಸರಗೋಡಿನ ಎರಡು ಲಕ್ಷ ಕನ್ನಡಿಗರನ್ನು ಕೇರಳಕ್ಕೆ ಬಲಿಕೊಡುವಂತೆ ಬರೆದದ್ದು ಶುದ್ಧ ತಿಳಿಗೇಡಿತನ.'

ಜಿ. ವೆಂಕಟಸುಬ್ಬಯ್ಯ (ಕ.ಸಾ.ಪ. ಮಾಜಿ ಗೌರವ ಕಾರ್ಯದರ್ಶಿಗಳು)

'ಪ್ರಾಂತ ಪುನರ್ವಿಂಗಡಣೆಯ ವಿಚಾರದಲ್ಲಿ ಎಸ್.ಆರ್.ಸಿ. ಸಮಿತಿಯ ವರದಿಯಿಂದಾಗಿ ಕೇರಳಕ್ಕೆ ಸೇರಿಸಿರುವ ಚಂದ್ರಗಿರಿ ನದಿಯ ಉತ್ತರ ಭಾಗವನ್ನು ಏಕೀಕೃತ ಕರ್ನಾಟಕದಲ್ಲೇ ಉಳಿಯುವಂತೆ ಚಳವಳಿಯನ್ನು ಆರಂಭಿಸುವುದು ಅಗತ್ಯವಾಗಿ ಕಾಣುತ್ತದೆ. ಕಾಸರಗೋಡು ಕನ್ನಡಿಗರು ನಡೆಸುತ್ತಿರುವ ಅಹಿಂಸಾತ್ಮಕ ಚಳವಳಿಯಿಂದಾಗಿ ಕಾಸರಗೋಡು ಕರ್ನಾಟಕದಲ್ಲೇ ಉಳಿಯುವಂತಾಗಲೆಂದು ಕನ್ನಡದ ಮೂರು ಕೋಟಿ ಜನರ ಪರವಾಗಿ ನಾನು ಹಾರೈಸುತ್ತೇನೆ.'

ಡಾ. ಕಯ್ಯಾರ ಕಿಞ್ಞಣ್ಣ ರೈ

"ತೇಲುವೆವೋ ಮುಳುಗುವೆವೋ, ಎಲ್ಲರೂ ಒಮ್ಮೆಗೆ ಎಲ್ಲ ಸಮಸ್ತ ಕನ್ನಡಿಗರೂ ಕೋಟಿ ಕೋಟಿ ಕಂಠಗಳಿಂದ ಜಯಘೋಷ ಮಾಡಿರಿ! ಕಾಸರಗೋಡು ಕನ್ನಡಿಗರ

ಹೃದಯ ಇಂದು ವೇದನೆಗೊಂಡು ಮೊರೆಯಿಡುತ್ತಿದೆ; ಇದು ಇಂದು ನಮ್ಮ ಕರುಳಿನ ಕರೆಯಾಗಿದೆ. ಇಂದಿನ ನಮ್ಮ ಹೃದಯದ ನೋವಿಂದ ಎಲ್ಲಿಯಾದರೂ ಮಾತು ತುಸು ಅಪ್ರಿಯವಾಗಿ ಬಂದಿದ್ದಾದರೆ ನಿಮ್ಮ ಮನಸ್ಸಿನ ದೊಡ್ಡತನವನ್ನು ಮೆರೆಸಿ, ಸಂತೈಸಿ ಮನ್ನಿಸುವಿರೆಂದು ನಾವು ನಂಬಿರುವೆವು. ನಮಗೆ ಬೆಂಗಾವಲಿಗರಾಗಿ ನಿಂತು ನೀವೆಲ್ಲರೂ ಕಾಸರಗೋಡನ್ನುಳಿಸಲು ಪ್ರತಿಜ್ಞಾಬದ್ಧರಾಗಿ ಹೋರಾಡುವಿರೆಂದು ಪೂರ್ಣ ಭರವಸೆ ಗೊಂಡಿರುವೆವು.''

ಜಯದೇವಿತಾಯಿ ಲಿಗಾಡೆ, ಸೊಲ್ಲಾಪುರ

''ಇಂದಿನ ನಮ್ಮ ದೇಶದ ಹಿರಿಯ ಮುಖಂಡರಿಗೆ ಈ ರಾಷ್ಟ್ರೀಯ ಪುನರ್‌ರಚನಾ ಆಯೋಗವು ಉಂಟುಮಾಡಿದ ಸಮಸ್ಯೆಯು ಸರಿಯಾಗಿ ಅರ್ಥವಾಗಿಲ್ಲವೆಂದು ಅನಿಸುತ್ತದೆ. ಅವರಿಗೆ ಸರಿಯಾಗಿ ತೋರಿಸಿ ಕೊಡುವ ಕಾರ್ಯ ಇಂದಿಗೂ ಕರ್ನಾಟಕದ ಮುಖಂಡರ ಮೇಲೆ ಇದೆ. ತಮ್ಮ ಧ್ಯೇಯವನ್ನು ಬಿಡದೆ ಮುಂದುವರಿಯುತ್ತಿರುವ ಕಾಸರಗೋಡಿನ ಜನತೆಗೆ ನನ್ನ ಅಭಿನಂದನೆಗಳು''

ವ್ಯಾಸರಾಯ ಬಲ್ಲಾಳ, ಮುಂಬಯಿ

''ನಾವು ಕರ್ನಾಟಕದ ಮಟ್ಟಿಗಲ್ಲ, ಬೇರೆ ಎಲ್ಲಾ ಪ್ರಾಂತ್ಯಗಳ ಬಗ್ಗೆಯೂ ಸಾಧಿಸಬೇಕಾದ್ದಷ್ಟನ್ನು ಸಾಧಿಸಿದ್ದೇವೆ ಅಂತ ಹೇಳುವುದು ಕಷ್ಟ ಆಗುತ್ತದೆ. ಕನ್ನಡದ ಮೂಲಕವೇ ಎಲ್ಲವೂ ಸಾಧಿತವಾಗಬೇಕು ಎನ್ನುವ ಕಾರಣದಿಂದಲೇ ಕರ್ನಾಟಕ ಪ್ರಾಂತ್ಯ ಆಗಬೇಕು ಅಂತ ಹೇಳುತ್ತಾ ಇದ್ದದ್ದು. ಆ ಪರಿಸ್ಥಿತಿ ಈಗ ಕರ್ನಾಟಕದಲ್ಲಿ ಇಲ್ಲ; ಮಹಾರಾಷ್ಟ್ರದಲ್ಲಿಯೂ ಇಲ್ಲ'' ಗಡಿ ಸಮಸ್ಯೆ ಸಮಸ್ಯೆಯಾಗಿಯೇ ಇದೆ.

ಕೆ. ಆರ್. ಆಚಾರ್

''ಮೀನು ನೀರಿನಲ್ಲಿ ಬಾಳಿ ಬದುಕಬೇಕು, ಹಕ್ಕಿ ಆಕಾಶದಲ್ಲಿ ಹಾರಾಡಿ ಮರಗಿಡಗಳಲ್ಲಿ ಜೀವಿಸಬೇಕು. ಕಾಸರಗೋಡಿನ ಜನತೆಯ ಸಂಸ್ಕೃತಿ, ವಿದ್ಯೆ ಮತ್ತು ಆರ್ಥಿಕ ಜೀವನ ಉಳಿಯಲು ಕಾಸರಗೋಡು ಕರ್ನಾಟಕದಲ್ಲಿಯೇ ಉಳಿಯಬೇಕು.''

ಆಲೂರು ವೆಂಕಟರಾಯರು

ಏಕತಂತ್ರ ಕರ್ನಾಟಕದ ರಚನೆಯಲ್ಲಿ ೧೦೦ಕ್ಕೆ ೧೦೦ರಷ್ಟು ನಿಸ್ವಾರ್ಥ ಮನೋಭಾವದಿಂದ ದುಡಿದ ಹಿರಿಯರಲ್ಲಿ ಆಲೂರರು ಮೊದಲಿಗರು. ಇವರು ''೧೯೫೬ನೇ ನವೆಂಬರ್ ೧ ರಂದು ಭಾಷೆಯ ಆಧಾರದ ಮೇಲೆ ರಚಿತವಾದ ರಾಜ್ಯ ಪುನರ್ವಿಂಗಡಣೆಯ ಕಾಲದಲ್ಲಿ, ಈ ವಿಂಗಡಣೆಯು ನ್ಯಾಯವಾಗಿಲ್ಲವೆಂದೂ ಕನ್ನಡ ಮಾತನಾಡುವ ಅನೇಕ ಪ್ರದೇಶಗಳೂ ಮಹಾರಾಷ್ಟ್ರ, ತಮಿಳುನಾಡು, ಆಂಧ್ರ ಹಾಗೂ ಕೇರಳಗಳಲ್ಲಿ ಸೇರಿ ಹೋಗಿವೆಯೆಂದು ಈ ರಾಜ್ಯಗಳಲ್ಲಿ ಸೇರಿರುವ ಪ್ರದೇಶಗಳು ಕರ್ನಾಟಕಕ್ಕೆ ಸೇರಿದರೆ ಆಗ ಅಖಂಡ ಕರ್ನಾಟಕ ಉದಯವಾಗುವುದೆಂದು'' ತಿಳಿಸಿದ್ದಾರೆ. ಜೊತೆಗೆ ಅವರು;

"ಈ ರಾಜ್ಯದ ಹೆಸರನ್ನು 'ಮೈಸೂರು ರಾಜ್ಯ'ವೆಂದು ಕರೆಯುವುದರ ಬದಲು 'ಕರ್ನಾಟಕ' ಎಂದು ಕರೆದ ದಿನವೇ ನನ್ನ ಬಾಳಿನಲ್ಲಿ ಹೊಸಚೇತನ ಉಂಟಾಗುವುದು. ಆಗ ನಾನು ೨೦ ವರ್ಷದ ಪ್ರಾಯದವನಾಗುತ್ತೇನೆ" ಎಂಬ ಉತ್ಸಾಹದ ಮಾತನ್ನು ಹೇಳಿದ್ದಾರೆ.

ಎಸ್. ನಿಜಲಿಂಗಪ್ಪ (ಮಾಜಿ ಮುಖ್ಯಮಂತ್ರಿಗಳು)

"ಕಾಸರಗೋಡಿಗಾಗಿ ನಾನು ಏನು ಮಾಡಲು ಸಿದ್ಧ, ಕಾಸರಗೋಡು ಹೋದರೆ ಕರ್ನಾಟಕ ಬಡವಾದೀತು, ಕಾಸರಗೋಡಿಗೆ ಅಗತ್ಯ ಬಿದ್ದಲ್ಲಿ ಕರೆದಾಗ ಬರುವೆನು."

ರಾಷ್ಟ್ರಕವಿ ಎಂ. ಗೋವಿಂದ ಪೈ

"ನಮ್ಮ ಮನೆಯ ಒಂದು ಕೋಣೆಯನ್ನು ನಮ್ಮಿಂದ ಕಿತ್ತುಕೊಂಡು ನೆಮ್ಮದಿಯಾಗಿ ನಮ್ಮ ನೆರೆ ಮನೆಯವರಿಗೆ ಬಿಟ್ಟುಬಿಡುವ ಈ ಬಗೆಯ ನ್ಯಾಯ ಭಾರತ ಭೂಮಿಯಲ್ಲಿ ಮಾತ್ರ ನಡೆಯಬೇಕಲ್ಲದೆ ಇತರ ಕಡೆ ಸರ್ವಥಾ ಸಲ್ಲದು. ಇದನ್ನು ಎದುರಿಸುವುದರಿಂದ ಒಳಜಗಳವನ್ನು ಎಬ್ಬಿಸಿದಂತಾಗುವುದಲ್ಲ? ಆ ಕಾರಣ ನಿಮ್ಮ ಮನಸ್ಸು ಕದಡುತ್ತದಲ್ಲ ಎಂಬ ಲವಲೇಶವೂ ಮನಗುಂದದೆ ನಮ್ಮ ಈ ಹುಟ್ಟು ಹಕ್ಕಿನ ಬಗ್ಗೆ ಹೋರಾಡಲೇ ಬೇಕು. ಇದು ಪ್ರತ್ಯೇಕ ವ್ಯಕ್ತಿಯ ಜನ್ಮಸಿದ್ಧವಾದ ಕರ್ತವ್ಯ. ಹಾಗೆ ಹೋರಾಡಿ ನಮ್ಮ ಚಿಕ್ಕಚಿಕ್ಕ ಹಕ್ಕುಗಳನ್ನು ಇಂದು ಕಾಪಾಡಿಕೊಳ್ಳದಾದರೆ ಮುಂದೆ ನಮ್ಮ ಹಿಂದೂ ಸಂಸ್ಥಾನದ ಸ್ವಾತಂತ್ರ್ಯವನ್ನು ಕಾಯಲಿಕ್ಕೂ ಸರಿಯಾಗಲಾರೆವು."

ನಮ್ಮ ಜಿಲ್ಲೆಯಿಂದ (ದ.ಕ) ಕಾಸರಗೋಡು ತಾಲ್ಲೂಕು ಸರ್ವಥಾ ತೊಲಗದು ಎಂಬ ದೃಢವಾದ ನಂಬುಗೆಯನ್ನಿತ್ತು ನಮ್ಮ ಪ್ರಾರ್ಥನೆಗಳನ್ನು ನೆರವೇರಿಸಿ ಕಾಪಾಡು ಎಂದು ಆ ದೇವರನ್ನು ಪ್ರಾರ್ಥಿಸುತ್ತೇನೆ.

ಬಿ. ಎಸ್. ಕಕ್ಕಿಲ್ಲಾಯ

"ಕಾಸರಗೋಡು ಕರ್ನಾಟಕದ ಕನ್ಯಾಕುಮಾರಿ! ಉತ್ತರದಲ್ಲಿ ಬೆಳಗಾವಿ, ಬಳ್ಳಾರಿಗಳಂತೆಯೇ ದಕ್ಷಿಣ ಕನ್ನಡದಲ್ಲಿ ನಮ್ಮದು ಕರ್ನಾಟಕದ ಗಡಿನಾಡು. ಕನ್ನಡ ನಾಡಿನ ಈ ತೆಂಕಣ ಬಾಗಿಲನ್ನು ತೆರೆದಿಟ್ಟು ಎಚ್ಚರತಪ್ಪಿ ನಿದ್ದೆ ಹೋದುದೇ ಆದರೆ ನಮ್ಮ ಜನರಿಗೂ ನಮ್ಮ ನಾಡಿಗೂ ಅಮೂಲ್ಯವಾದ ನಮ್ಮ ಕನ್ನಡ ಸಂಸ್ಕೃತಿಗೂ ಪ್ರಮಾದವು ಒದಗುವುದರಲ್ಲಿ ಸಂದೇಹವಿಲ್ಲ."

ಕವಿರಾಜ/ಡಾ. ಕೆ.ಸಿ. ಆಳ್ವ

"ಕನ್ನಡದ ಕಾಸರಗೋಡು ಎಂದಿಗೂ ಅನ್ಯಭಾಷಾ ಕೇರಳದ ಅಂಗವಾಗಿ ಉಳಿಯಲಿಕ್ಕಿಲ್ಲ. ಅದು ಇಂದಲ್ಲ ನಾಳೆಯಾದರೂ ಕರ್ನಾಟಕದಲ್ಲಿ ಸೇರಿಯೇ ಸೇರಿತು. ಇದಕ್ಕೆ ಯಾವ ಸಂಶಯವೂ ಇಲ್ಲ, ದೈವ ಸಂಕಲ್ಪವೇ ಈ ಭೂಮಿ ಕರ್ನಾಟಕದಲ್ಲಿ ಉಳಿಯಬೇಕೆಂದಿರುವಾಗ ಇಂದಿನ ರಾಜಕೀಯ ಡೊಂಬರು ಏಷ್ಟೆ ಹಾರಿದರೆ ಏನು ಪ್ರಯೋಜನ? ಕಾಸರಗೋಡು ಕರ್ನಾಟಕದಲ್ಲಿ ಉಳಿದೇ ತೀರಬೇಕು."

ಚಂದ್ರಶೇಖರ ಶಾಸ್ತ್ರಿ , ಮಾಗಳ

"ಬಳ್ಳಾರಿ ಜಿಲ್ಲೆಯಲ್ಲಿ ಈಡಿಗರು ಶ್ರೀಮಂತರು. ಇವರೆಲ್ಲ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಪ್ರಯತ್ನ ಮಾಡಿದರು. ಸಂಜೀವರೆಡ್ಡಿ ಮತಕ್ಕೆ ಹಾಕಲು ಸೂಚಿಸಿದಾಗ ಕರ್ನಾಟಕಕ್ಕೆ ಹೆಚ್ಚು ಮತಗಳು ಬಂದು ಈಡಿಗರು ಸುಮ್ಮನಾಗಬೇಕಾಯಿತು. ಫಜಲಾಲಿ (ರಾವು) ಆಯೋಗದ ಮೂರು ಜನರಲ್ಲಿ ಕೆ.ಎಂ. ಪಣ್ಣಿಕ್ಕರ್ ಕೇರಳದವನಾಗಿದ್ದರಿಂದ ಕಾಸರಗೋಡನ್ನು ಕೇರಳಕ್ಕೆ ಸೇರಿಸಿದ. ಈಗ ಕನ್ನಡಿಗರಾದ ನಾವು ನಮ್ಮದು ಅಂತ ಹೋರಾಡುತ್ತಿದ್ದೇವೆ. ಆಲೂರು, ಆದವಾನಿ, ರಾಯದುರ್ಗಗಳು ಕೈಬಿಟ್ಟು ಹೋದವು. ಅವು ಎಂದು ಕರ್ನಾಟಕದ ಭಾಗವಾಗುವುವೋ ನೋಡಬೇಕು.

ಮಹದೇವ ಬಣಕಾರ (ಮಾಜಿ ಎಂ.ಎಲ್.ಎ.)

"ಹೊರನಾಡಿನಿಂದ ಬಂದು ಕರ್ನಾಟಕವನ್ನು, ಅದರಲ್ಲೂ ರಾಜಧಾನಿ ಬೆಂಗಳೂರನ್ನು ಆಕ್ರಮಿಸಿಕೊಂಡು, ಕನ್ನಡಿಗರನ್ನೇ ಅಲ್ಪ ಸಂಖ್ಯಾತರನ್ನಾಗಿ ಮಾಡಿರುವ ಔದ್ಯಮಿಕರ ಆಮದನ್ನು ತಡೆಗಟ್ಟಬೇಕಾಗಿದೆ. ಭಾರತದಲ್ಲಿ ಎಲ್ಲಿಯೂ ಅವಕಾಶ ಸಿಗದೇ ಇರುವ ಉದ್ಯಮಿಗಳಿಗೆ, ಕೂಲಿಕಾರರಿಗೆ, ವ್ಯಾಪಾರಿಗಳಿಗೆ, ಕರ್ನಾಟಕದಲ್ಲಿ ಆಶ್ರಯ ದೊರೆಯುತ್ತಿರುವುದನ್ನು ಪ್ರತಿಬಂಧಿಸದೇ ಹೋದರೆ ಈ ನಾಡು ತನ್ನ ಮೂಲ ಅಸ್ತಿತ್ವವನ್ನೇ ಕಳೆದುಕೊಳ್ಳಬಹುದು."

ಸಿ. ಅಚ್ಯುತ ಮೇನನರು (ಕೇರಳದ ಮಾಜಿ ಮುಖ್ಯಮಂತ್ರಿಗಳು)

"Some Villages in the northern part of Kasaragod Taluk have got a majority of Kannada Speaking people. There is no reason to day this fact. At the time of re-organisation of states and also at other time they have put forth this agreement. In the three elections, after the state re-organisation, people who were for the amalgamation of these parts into Mysore, have won. Therefore any measure to salve fairly the border issue may be based on this fact which we cannot deney specially a communist".

ಕೆ. ಸಿ. ಅಬ್ರಾಹಾಂ (ಕೇರಳ ಪ್ರದೇಶ ಕಾಂಗ್ರೆಸ್ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಗುಜರಾತ್ ರಾಜ್ಯಪಾಲರು)

"The K.P.C.C is agreable to give liberty of conscience. On the question of merger to the two congress candidates from Manjeswar and Kasaragod assembly constituencies and reopen the question of marger of the Kannada area in the Mysore state according to the whisher of two people."

ರಾಷ್ಟ್ರೀಯ ಪುನರ್‌ರಚನಾ ಆಯೋಗದ ವಿರುದ್ಧ ಗಡಿನಾಡಿನಲ್ಲಿ ಎದ್ದಿದ್ದಂತಹ ಸಮಸ್ಯೆಯನ್ನು ಬಗೆಹರಿಸಲು ಮತ್ತೆ ೧೯೬೬ರಲ್ಲಿ ಮಹಾಜನ್‌ರವರ ನೇತೃತ್ವದ ಏಕ

ಪಾಸ್ಕರ ಆಯೋಗವು ನೇಮಕವಾಗಿ ಆ ವರದಿಯು ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವಂತೆ ಶಿಫಾರಸ್ಸು ಮಾಡಿತು. ಮಹಾಜನ್‌ರವರು ಕಾಸರಗೋಡಿನ ಬಗ್ಗೆ ತಮ್ಮ ವರದಿಯಲ್ಲಿ

"Sri K.M. Panikkar, one of the members of that August Body who visited the area. I am told by very respectable persons. Who give evidence before me, had assured the people, that the area north of the river was Kannada area and should remain in the state of Mysore." ಎಂಬ ಮಹತ್ವದ ನಿರ್ಣಯವನ್ನು ನೀಡಿದ್ದಾರೆ.

ಅಳವಾಡಿ ಶಿವಮೂರ್ತಿಸ್ವಾಮಿ, ಗಂಗಾವತಿ

"ಕರ್ನಾಟಕ ಏಕೀಕರಣವಾದದ್ದು ಸರಿ : ಆದರೆ ನಾವು ಕಂಡಿದ್ದ ಕನಸು ನನಸಾಗಿಲ್ಲ. ಕರ್ನಾಟಕಕ್ಕೆ ಸೇರಲೇಬೇಕಾದಂತಹ ಇನ್ನೂ ಹಲವು ಪ್ರದೇಶಗಳು ನೆರೆ ರಾಜ್ಯಗಳಲ್ಲೇ ಉಳಿದಿವೆ. ಅವು ಸೇರ್ಪಡೆಯಾಗದೆ ಕರ್ನಾಟಕವು ಅಪೂರ್ಣವೇ ಆಗಿರುತ್ತದೆ. ರಾಜಕೀಯಾಗಿ ಹಾಗೂ ಆಡಳಿತಾತ್ಮಕವಾಗಿ ಕರ್ನಾಟಕವು ಏಕೀಕರಣ ಆಗಿದ್ದರೂ ಭಾವನಾತ್ಮಕವಾಗಿ ಇನ್ನೂ ಆಗಿಲ್ಲ. ಕಾಸರಗೋಡು, ಜತ್ತಿ, ಕೋಲಾಪುರ, ಅಥವನಿ, ಆಲೂರುಗಳು ಕರ್ನಾಟಕಕ್ಕೆ ಸೇರದಾಗಲೇ ಕರ್ನಾಟಕ ಏಕೀಕರಣವಾಯಿತೆನ್ನಬಹುದು".

ವೀರಣ್ಣ ತಿಮ್ಮಾಜಿ, ಗುಲ್ಬರ್ಗಾ

"ಏಕೀಕರಣ ಬಗ್ಗೆ ಸಂತೋಷವಿದ್ದರೂ, ನಮ್ಮಲ್ಲಿ ಪರಿಪೂರ್ಣತೆಯಿಲ್ಲ. ಗಡಿ ಪ್ರಾಂತ್ಯಗಳಲ್ಲಿ ಕನ್ನಡದ ಕೆಲಸವನ್ನು ನಮ್ಮ ಸರ್ಕಾರ ಹೆಚ್ಚು ಮಾಡಬೇಕು. ಗಡಿ ಪ್ರಂತ್ಯಗಳಲ್ಲಿರುವ ಅಂದರೆ, ಹೊರನಾಡು ಕನ್ನಡಿಗರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಆಗ ಅಕ್ಕಲಕೋಟೆ, ಶೋಲ್ಲಾಪುರ, ಕಾಸರಗೋಡುಗಳೆಲ್ಲ ರಾಜ್ಯಕ್ಕೆ ಸೇರುತ್ತವೆ. ಆಗಮಾತ್ರ ಅಖಂಡ ಕರ್ನಾಟಕ ನಿರ್ಮಾಣ.

ಪ್ರೊ. ಎ. ಎಂ. ರಾಜಶೇಖರಯ್ಯ, ಧಾರವಾಡ

"ಬಳ್ಳಾರಿ ಕರ್ನಾಟಕದಲ್ಲಿ ಉಳಿಯಲು ಅಬುಲ್ ಕಾಲಂ ಆಜಾದ್ ಅವರೇ ಕಾರಣ. ಆಂಧ್ರದವರು ತಮಗೆ ಎಲ್ಲ ಭಾಗಗಳು ಬೇಕು ಅಂತಿದ್ದರು ಒಂದು ಹಂತದಲ್ಲಿ ನಿಮಗೆ ಹೈದರಾಬಾದ್ ಬೇಕಾದರೆ ಬಳ್ಳಾರಿ ಬಿಡಿ, ಬಳ್ಳಾರಿ ಬೇಕಿದ್ದರೆ ಹೈದರಾಬಾದ್ ಬಿಡಿ ಅಂತ ನಿರ್ಬಂಧಿಸಿದರು. ಹಾಗಾಗಿ ಬಳ್ಳಾರಿಯು ಕರ್ನಾಟಕದಲ್ಲಿ ಉಳಿಯಿತು.

ಕೊ. ಚನ್ನಬಸಪ್ಪ, ಬೆಂಗಳೂರು

"ಬಳ್ಳಾರಿಯನ್ನು ಕರ್ನಾಟಕದಲ್ಲೇ ಉಳಿಸಿಕೊಳ್ಳಲು ತುಂಗಭದ್ರಾ ಹೋರಾಟ ಸಮಿತಿಯನ್ನು ಮಾಡಿಕೊಂಡವು. ಅದರಲ್ಲಿ ಅಕರಾನಿ ಪರಿಷತ್ತಿನ ಅಳವಾಡಿ ಶಿವಮೂರ್ತಿ ಸ್ವಾಮಿಯೂ ಇದ್ದರು. ಹೋರಾಟ ಸಮಿತಿಯ ಕಾರ್ಯ ಏನೆಂದರೆ ಪ್ರತಿದಿನ ನೂರಾಒಂದು ಜನ ಸತ್ಯಾಗ್ರಹ ಮಾಡುವುದು. ಪ್ರತಿಯೊಬ್ಬರೂ ತುಂಗಭದ್ರಾ ಕಾಲುವೆಯಿಂದ ಒಂದೊಂದು ಬಿಂದಿಗೆ ನೀರನ್ನು ತುಂಬಿಕೊಂಡು ಕರ್ನಾಟಕದ ಜಮೀನಿಗೆ ಹಾಕುವುದು

೩೦ನೇ ದಿನ ಆಜಾದರಿಂದ ತಂತಿ ಬಂತು "ಮಿಶ್ರವರದಿಯನ್ನು ಒಪ್ಪಿಕೊಳ್ಳಲಾಗುತ್ತದೆ. ಸತ್ಯಾಗ್ರಹವನ್ನು ನಿಲ್ಲಿಸಿ" ಅಂತ ನಿಲ್ಲಿಸಿದೆವು. ೧೯೫೪ರಲ್ಲಿ ಬಳ್ಳಾರಿ ಕರ್ನಾಟಕಕ್ಕೆ ಸೇರಿತು.

ವಾಲ್ಟರ್ ಹೆಮಿಲ್ಟನ್

"ಮಲಬಾರಿನ ಎಲ್ಲೆ ಚಂದ್ರಗಿರಿ ನದಿಗೆ ಅಂತ್ಯವಾಗುತ್ತವೆ. ಚಂದ್ರಗಿರಿನದಿಯ ಉತ್ತರ ಪ್ರದೇಶವೇ ತುಳುವ ನಾಡು" ಅಂದರೆ ಕರ್ನಾಟಕ.

ಎಂ. ರಾಮಣ್ಣ ರೈ (ಮಾಜಿ ಲೋಕಸಭಾ ಸದಸ್ಯರು)

ಅವರು 'ಮಲೆಯಾಳ ಮನೋರಮಾ' ಎಂಬ ದೈನಿಕ ಪತ್ರಿಕೆಗೆ ನೀಡಿರುವ ಸಂದರ್ಶನವೊಂದರಲ್ಲಿ "ಕೇರಳದಯಾವುದೇ ಪಕ್ಷದ ಸರ್ಕಾರವಾಗಲಿ, ಕಾಸರಗೋಡನ್ನು ಅಂದಿನಿಂದ ಇಂದಿನವರೆಗೂ ತೀರಾ ಅವಗಣನೆ ಮಾಡುತ್ತಾ ಬಂದಿದೆ; ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡಿಲ್ಲ, ಈ ಪ್ರದೇಶ ಮುಂದೆ ಒಂದು ದಿನ ಕರ್ನಾಟಕಕ್ಕೆ ಸೇರುವುದೆಂದು ಅವರೆಲ್ಲರೂ ಭಾವಿಸಿದ್ದಾರೆ. ಹಲವು ಪಕ್ಷಗಳ ಮುಖಂಡರು ಕರ್ನಾಟಕದ ಸೇರ್ಪಡೆಯನ್ನು ಒಪ್ಪಿಯೂ ಇದ್ದಾರೆ. ಹಾಗಾಗಿ ಕಾಸರಗೋಡು ಇಂದಿಲ್ಲವಾದರೂ ಮುಂದೊಂದು ದಿನ ಕರ್ನಾಟಕದೊಂದಿಗೆ ಸೇರಿಯೇ ಸೇರಬೇಕು" - ಎಂಬ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮೇಲಿನ ಗಣ್ಯ ವ್ಯಕ್ತಿಗಳ ಹೇಳಿಕೆಗಳನ್ನು ಮಹಾಜನ್‌ರವರ ನಿರ್ಣಯವನ್ನು ನೋಡಿದರೆ ಇಂದಿಗೂ ನಾವು ಶಾಂತಿಯುತವಾಗಿಯೇ ಪ್ರತಿಭಟಿಸಿ ಸರ್ಕಾರದ ಉನ್ನತ ಮಟ್ಟದಲ್ಲಿ ಚರ್ಚಿಸಿ ಮಹಾಜನ್ ವರದಿಯನ್ನು ಜಾರಿಗೆ ತರುವಂತೆ ಮಾಡಿದರೆ ಕಾಸರಗೋಡು ನಮ್ಮದಾಗುತ್ತದೆ. ಈ ಸಂಬಂಧ ಇತ್ತೀಚೆಗೆ ಮುಖ್ಯಮಂತ್ರಿ ಜೆ. ಹೆಚ್. ಪಟೇಲ್ ಮತ್ತು ವಾಟಾಳ್ ನಾಗರಾಜ್ ಸೇರಿದಂತೆ ಉನ್ನತಮಟ್ಟದ ನಿಯೋಗದೊಂದಿಗೆ ಪ್ರಧಾನಮಂತ್ರಿಯನ್ನು ಭೇಟಿ ಮಾಡಿ ಮಹಾಜನ್ ವರದಿಯನ್ನು ಜಾರಿಗೆ ತಂದು ಬೆಳಗಾವಿಯಲ್ಲಿ ಎದ್ದಿರುವ ದುರಾಗ್ರಹಕ್ಕೆ ತಕ್ಕ ಶಾಸ್ತವನ್ನು, ಕಾಸರಗೋಡನ್ನು ನಮ್ಮ ಮಡಿಲಿಗೆ ಬರುವಂತೆ ಮಾಡಬೇಕೆಂದು ತಿಳಿಸಿ ಬಂದಿರುತ್ತಾರೆ. ಇದಕ್ಕೆ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಬೆಂಬಲವೂ ಸಹ ದೊರಕಿರುವುದು ಸಂತೋಷದ ವಿಷಯವಾಗಿದೆ. ಇದು ೧೯೯೯ರಲ್ಲಿ ದೇಶವು ಎದುರಿಸುತ್ತಿರುವ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಿಗೆ ತಮ್ಮ ಪಕ್ಷದ ಜಯಕ್ಕಾಗಿ ನೀಡಿದ ಆಶ್ವಾಸನೆಯಾಗದೆ, ಅದಷ್ಟು ಬೇಗ ಕಾರ್ಯರೂಪಕ್ಕೆ ಬರಲೆಂದು ನಾವು ನಿರೀಕ್ಷಿಸೋಣ.

❑❑

೭. ರಾಜ್ಯದ ಒಟ್ಟು ಜಿಲ್ಲೆಗಳು ಮತ್ತು ತಾಲ್ಲೂಕುಗಳು : ಏಳು ಹೊಸ ಜಿಲ್ಲೆಗಳ ಪರಿಚಯ

ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿದ್ದ ಜೆ. ಹೆಚ್. ಪಟೇಲ್ ಮುಖಂಡತ್ವದ ಜನತಾದಳ ಸರ್ಕಾರವು ೧೯೯೭ನೇ ಆಗಸ್ಟ್ ೧೫ರಂದು ನೂತನವಾಗಿ ಏಳು ಜಿಲ್ಲೆಗಳನ್ನು ಪ್ರಾರಂಭಿಸಿತು. ಈ ದೃಷ್ಟಿಯಿಂದ ನಾನು ನಾಡಿನಲ್ಲಿರುವ ಒಟ್ಟು ಜಿಲ್ಲೆಗಳು ಹಾಗೂ ಆಯಾ ಜಿಲ್ಲೆಗಳು ಹೊಂದಿರುವ ತಾಲ್ಲೂಕುಗಳನ್ನು ಇಲ್ಲಿ ತಿಳಿಸಬಯಸುತ್ತೇನೆ. ಈ ಅಧ್ಯಯನದಲ್ಲಿ ಇದು ನಮ್ಮ ನಾಡಿನ ಓದುಗರಿಗೆ ಅವಶ್ಯಕವಾಗಿರಬಹುದೆಂದು ನನ್ನ ಭಾವನೆ. ಇದರ ಜೊತೆಗೆ ಏಳು ಹೊಸ ಜಿಲ್ಲೆಗಳ ಪರಿಚಯ ಮಾಡಿಕೊಡಬಯಸುತ್ತೇನೆ.

ಜಿಲ್ಲೆಗಳು	ತಾಲ್ಲೂಕುಗಳು
೧. ಬೆಂಗಳೂರು (ನಗರ)	೧. ಆನೆಕಲ್ಲು
	೨. ಬೆಂಗಳೂರು ಉತ್ತರ
	೩. ಬೆಂಗಳೂರು ದಕ್ಷಿಣ
೨. ಬೆಂಗಳೂರು (ಗ್ರಾಮಾಂತರ)	೪. ದೊಡ್ಡಬಳ್ಳಾಪುರ
	೫. ದೇವನಹಳ್ಳಿ
	೬. ಹೊಸಕೋಟೆ
	೭. ರಾಮನಗರ
	೮. ಚನ್ನಪಟ್ಟಣ
	೯. ಕನಕಪುರ
	೧೦. ಮಾಗಡಿ
	೧೧. ನೆಲಮಂಗಲ
೩. ಬೆಳಗಾವಿ	೧೨. ಬೆಳಗಾವಿ
	೧೩. ಬೈಲಹೊಂಗಲ
	೧೪. ಖಾನಾಪುರ
	೧೫. ಸವದತ್ತಿ
	೧೬. ರಾಮದುರ್ಗ
	೧೭. ಗೋಕಾಕ್
	೧೮. ಚಿಕ್ಕೋಡಿ

	೧೯. ಅಥಣಿ
	೨೦. ಹುಕ್ಕೇರಿ
	೨೧. ರಾಯಬಾಗ್
೪. ಬಳ್ಳಾರಿ	೨೨. ಬಳ್ಳಾರಿ
	೨೩. ಹೊಸಪೇಟೆ
	೨೪. ಸಂಡೂರು
	೨೫. ಸಿರಗುಪ್ಪ
	೨೬. ಹೂವಿನ ಹಡಗಲಿ
	೨೭. ಹಗರಿಬೊಮ್ಮನಹಳ್ಳಿ
	೨೮. ಕೂಡ್ಲಿಗಿ
೫. ಬೀದರ್	೨೯. ಬೀದರ್
	೩೦. ಔರಾದ್
	೩೧. ಬಸವಕಲ್ಯಾಣ
	೩೨. ಹುಮನಾಬಾದ್
	೩೩. ಬಾಲ್ಕಿ
೬. ಬಿಜಾಪುರ	೩೪. ಬಿಜಾಪುರ
	೩೫. ಬಸವನ ಬಾಗೇವಾಡಿ
	೩೬. ಇಂಡಿ
	೩೭. ಮುದ್ದೇಬಿಹಾಳ್
	೩೮. ಸಿಂದಗಿ
೭. ಬಾಗಲಕೋಟೆ (ಹೊಸಜಿಲ್ಲೆ)	೩೯. ಬಾಗಲಕೋಟೆ
	೪೦. ಬಾದಾಮಿ
	೪೧. ಬೀಳಗಿ
	೪೨. ಹುನಗುಂದ
	೪೩. ಜಮಖಂಡಿ
	೪೪. ಮುಧೋಳ
೮. ಚಿಕ್ಕಮಗಳೂರು	೪೫. ಕಡೂರು
	೪೬. ಮೂಡಿಗೆರೆ
	೪೭. ತರೀಕೆರೆ
	೪೮. ನರಸಿಂಹರಾಜಪುರ
	೪೯. ಕೊಪ್ಪ
	೫೦. ಶೃಂಗೇರಿ
	೫೧. ಚಿಕ್ಕಮಗಳೂರು

೯. ಚಿತ್ರದುರ್ಗ	೪೨. ಚಿತ್ರದುರ್ಗ
	೪೩. ಹೊಳಲ್ಕೆರೆ
	೪೪. ಚಳ್ಳಕೆರೆ
	೪೫. ಹಿರಿಯೂರು
	೪೬. ಮೊಳಕಾಲ್ಮೂರು
	೪೭. ಹೊಸದುರ್ಗ
೧೦. ದಾವಣಗೆರೆ (ಹೊಸಜಿಲ್ಲೆ)	೪೮. ದಾವಣಗೆರೆ
	೪೯. ಚನ್ನಗಿರಿ
	೫೦. ಹೊನ್ನಾಳಿ
	೫೧. ಹರಿಹರ
	೫೨. ಹರಪನಹಳ್ಳಿ
	೫೩. ಜಗಳೂರು
೧೧. ದಕ್ಷಿಣ ಕನ್ನಡ	೫೪. ಮಂಗಳೂರು
	೫೫. ಬಂಟ್ವಾಳ
	೫೬. ಪುತ್ತೂರು
	೫೭. ಸುಳ್ಯ
	೫೮. ಬೆಳ್ತಂಗಡಿ
೧೨. ಉಡುಪಿ (ಹೊಸಜಿಲ್ಲೆ)	೫೯. ಕಾರ್ಕಳ
	೬೦. ಕುಂದಾಪುರ
	೬೧. ಉಡುಪಿ
೧೩. ಧಾರವಾಡ	೬೨. ಧಾರವಾಡ
	೬೩. ಹುಬ್ಬಳ್ಳಿ
	೬೪. ಕಲಘಟಗಿ
	೬೫. ಕುಂದಗೋಳ
	೬೬. ನವಲಗುಂದ
೧೪. ಗದಗ (ಹೊಸಜಿಲ್ಲೆ)	೬೭. ಗದಗ
	೬೮. ಮುಂಡರಗಿ
	೬೯. ನರಗುಂದ
	೭೦. ರೋಣ
	೭೧. ಶಿರಹಟ್ಟಿ
೧೫. ಗುಲಬರ್ಗಾ	೭೨. ಗುಲಬರ್ಗಾ
	೭೩. ಚಿತ್ತಾಪುರ

	೮೪. ಆಳಂದ
	೮೫. ಅಫಜಲಪುರ
	೮೬. ಚಿಂಚೋಳಿ
	೮೭. ಯಾದಗಿರಿ
	೮೮. ಶಹಪುರ
	೮೯. ಸುರಪುರ
	೯೦. ಜೇವರ್ಗಿ
	೯೧. ಸೇಡಂ
೧೬. ಹಾಸನ	೯೨. ಹಾಸನ
	೯೩. ಅರಕಲಗೂಡು
	೯೪. ಆಲೂರು
	೯೫. ಬೇಲೂರು
	೯೬. ಸಕಲೇಶಪುರ
	೯೭. ಚನ್ನರಾಯಪಟ್ಟಣ
	೯೮. ಅರಸೀಕೆರೆ
	೯೯. ಹೊಳೆನರಸೀಪುರ
೧೭. ಕೊಡಗು	೧೦೦. ಮಡಿಕೇರಿ
	೧೦೧. ಸೋಮವಾರಪೇಟೆ
	೧೦೨. ವೀರಾಜಪೇಟೆ
೧೮. ಕೋಲಾರ	೧೦೩. ಕೋಲಾರ
	೧೦೪. ಮಾಲೂರು
	೧೦೫. ಬಂಗಾರಪೇಟೆ
	೧೦೬. ಮುಳಬಾಗಿಲು
	೧೦೭. ಚಿಕ್ಕಬಳ್ಳಾಪುರ
	೧೦೮. ಗುಡಿಬಂಡೆ
	೧೦೯. ಶಿಡ್ಲಘಟ್ಟ
	೧೧೦. ಗೌರಿಬಿದನೂರು
	೧೧೧. ಚಿಂತಾಮಣಿ
	೧೧೨. ಬಾಗೇಪಲ್ಲಿ
	೧೧೩. ಶ್ರೀನಿವಾಸಪುರ
೧೯. ಮಂಡ್ಯ	೧೧೪. ಮಂಡ್ಯ
	೧೧೫. ಮದ್ದೂರು

	೧೧೬. ಮಳವಳ್ಳಿ
	೧೧೭. ನಾಗಮಂಗಲ
	೧೧೮. ಕೆ.ಆರ್. ಪೇಟೆ
	೧೧೯. ಶ್ರೀರಂಗಪಟ್ಟಣ
	೧೨೦. ಪಾಂಡವಪುರ
೨೦. ಮೈಸೂರು	೧೨೧. ಮೈಸೂರು
	೧೨೨. ಟಿ. ನರಸೀಪುರ
	೧೨೩. ನಂಜನಗೂಡು
	೧೨೪. ಕೆ. ಆರ್. ನಗರ
	೧೨೫. ಹುಣಸೂರು
	೧೨೬. ಪಿರಿಯಾಪಟ್ಟಣ
	೧೨೭. ಹೆಗ್ಗಡದೇವನಕೋಟೆ
೨೧. ಚಾಮರಾಜನಗರ (ಹೊಸಜಿಲ್ಲೆ)	೧೨೮. ಚಾಮರಾಜನಗರ
	೧೨೯. ಗುಂಡ್ಲುಪೇಟೆ
	೧೩೦. ಕೊಳ್ಳೇಗಾಲ
	೧೩೧. ಯಳಂದೂರು
೨೨. ರಾಯಚೂರು	೧೩೨. ರಾಯಚೂರು
	೧೩೩. ಲಿಂಗಸಗೂರು
	೧೩೪. ಮಾನ್ವಿ
	೧೩೫. ದೇವದುರ್ಗ
	೧೩೬. ಸಿಂಧನೂರು
೨೩. ಶಿವಮೊಗ್ಗ	೧೩೭. ಶಿವಮೊಗ್ಗ
	೧೩೮. ಭದ್ರಾವತಿ
	೧೩೯. ಸಾಗರ
	೧೪೦. ಹೊಸನಗರ
	೧೪೧. ತೀರ್ಥಹಳ್ಳಿ
	೧೪೨. ಸೊರಬ
	೧೪೩. ಶಿಕಾರಿಪುರ
೨೪. ತುಮಕೂರು	೧೪೪. ತುಮಕೂರು
	೧೪೫. ಗುಬ್ಬಿ
	೧೪೬. ಕುಣಿಗಲ್
	೧೪೭. ತುರುವೇಕೆರೆ

	೧೪೮. ತಿಪಟೂರು
	೧೪೯. ಮಧುಗಿರಿ
	೧೫೦. ಚಿಕ್ಕನಾಯಕನಹಳ್ಳಿ
	೧೫೧. ಕೊರಟಗೆರೆ
	೧೫೨. ಶಿರಾ
	೧೫೩. ಪಾವಗಡ
೨೫. ಉತ್ತರ ಕನ್ನಡ	೧೫೪. ಕಾರವಾರ
	೧೫೫. ಅಂಕೋಲ
	೧೫೬. ಕುಮಟಾ
	೧೫೭. ಹೊನ್ನಾವರ
	೧೫೮. ಭಟ್ಕಳ
	೧೫೯. ಸೂಫ
	೧೬೦. ಶಿರಸಿ
	೧೬೧. ಯಲ್ಲಾಪುರ
	೧೬೨. ಹಳಿಯಾಳ
	೧೬೩. ಸಿದ್ದಾಪುರ
	೧೬೪. ಮುಂಡಗೋಡು
೨೬. ಹಾವೇರಿ	೧೬೫. ಬ್ಯಾಡಗಿ
(ಹೊಸಜಿಲ್ಲೆ)	೧೬೬. ಹಾನಗಲ್
	೧೬೭. ಹಾವೇರಿ
	೧೬೮. ಹಿರೇಕೆರೂರು
	೧೬೯. ರಾಣಿಬೆನ್ನೂರು
	೧೭೦. ಸವಣೂರು
	೧೭೧. ಶಿಗ್ಗಾವಿ
೨೭. ಕೊಪ್ಪಳ	೧೭೨. ಗಂಗಾವತಿ
(ಹೊಸಜಿಲ್ಲೆ)	೧೭೩. ಕುಷ್ಟಗಿ
	೧೭೪. ಕೊಪ್ಪಳ
	೧೭೫. ಯಲಬುರ್ಗಿ

ಏಕೀಕರಣಗೊಂಡಾಗ ರಾಜ್ಯದಲ್ಲಿ ಇದ್ದಂತಹ ೧೯ ಜಿಲ್ಲೆಗಳಲ್ಲಿ ಕೆಲವು ಅತಿದೊಡ್ಡ ಜಿಲ್ಲಾ ಕೇಂದ್ರಗಳಾಗಿದ್ದವು. ಈ ದೃಷ್ಟಿಯಿಂದ ಆಡಳಿತದ ಸ್ಥಿತಿಯು ಕೆಳಮಟ್ಟಕ್ಕೆ ಇಳಿದಿತ್ತು. ಇದಕ್ಕಾಗಿ ಮಧ್ಯೆ ಮಧ್ಯೆ ದೊಡ್ಡ ಜಿಲ್ಲೆಗಳಲ್ಲಿರುವ ತಾಲ್ಲೂಕುಗಳಲ್ಲದೆ ನೆರೆಯ ಜಿಲ್ಲೆಯ ತಾಲ್ಲೂಕುಗಳನ್ನು ಸೇರಿಸಿಕೊಂಡು ೧೯೯೭ನೇ ಆಗಸ್ಟ್ ೧೫ ಭಾರತದ ೫೦ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಹೊಸ ಜಿಲ್ಲೆಗಳನ್ನು ನಿರ್ಮಿಸಲಾಯಿತು. ಈ ಹೊಸ ಜಿಲ್ಲೆಗಳ

ಇತಿಹಾಸ, ಇವುಗಳು ಹೊಂದಿರುವ ಗಡಿ ಪ್ರದೇಶಗಳು ಹಾಗೂ ರಾಜ್ಯದ ಒಳಗಡೆ ಈ ಹೊಸ ಜಿಲ್ಲೆಗಳನ್ನು ಜಾರಿಗೊಳಿಸುವಾಗ ಉಂಟಾದ ಗಡಿ ಸಮಸ್ಯೆಯ ಬಗ್ಗೆ ತಿಳಿಸಬಯಸುವುದು ಉತ್ತಮವೆಂದು ಅನಿಸುತ್ತದೆ.

೭.೧. ಚಾಮರಾಜನಗರ

ರಾಜ್ಯದ ದಕ್ಷಿಣದ ತುತ್ತತುದಿಯಲ್ಲಿರುವ ಈ ನೂತನ ಜಿಲ್ಲೆಯು ಮೂಲತಃ ಮೈಸೂರು ಜಿಲ್ಲೆಯ ಒಂದು ದೊಡ್ಡ ತಾಲ್ಲೂಕು ಕೇಂದ್ರವಾಗಿತ್ತು. ಇಂದು ಹೊಸ ಜಿಲ್ಲೆಯಾಗಿ ರೂಪಗೊಂಡ ನಂತರ ತನ್ನ ಮೇರೆಗಳನ್ನಾಗಿ ಉತ್ತರಕ್ಕೆ ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು, ಈಶಾನ್ಯ ಮತ್ತು ಆಗ್ನೇಯಕ್ಕೆ ತಮಿಳುನಾಡನ್ನೂ, ನೈರುತ್ಯಕ್ಕೆ ಕೇರಳವನ್ನೂ ವಾಯುವ್ಯಕ್ಕೆ ತನ್ನ ಮೂಲ ಜಿಲ್ಲೆಯಾದಂತಹ ಮೈಸೂರನ್ನು ಹೊಂದಿದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣ ೫೬೮೬ ಚದರ ಕಿ.ಮೀ. ಜಿಲ್ಲೆಯ ಮುಖ್ಯ ಆಳ್ವಿಕೆಯ ಕೇಂದ್ರ ಸ್ಥಳವು ಚಾಮರಾಜನಗರವಾಗಿದೆ.

೧೧ ತಾಲ್ಲೂಕುಗಳನ್ನು ಹೊಂದಿ ರಾಜ್ಯದಲ್ಲಿಯೇ ಶ್ರೀಮಂತ ಜಿಲ್ಲೆಯಾಗಿದ್ದಂತಹ ಮೈಸೂರಿನಿಂದ ದಕ್ಷಿಣದ ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ ತಾಲ್ಲೂಕುಗಳನ್ನು ಒಳಗೊಂಡಂತೆ ಚಾಮರಾಜನಗರವನ್ನು ಆಡಳಿತ ಕೇಂದ್ರವನ್ನಾಗಿಸಿ ೧೯೯೭ನೇ ಆಗಸ್ಟ್ ೧೫ರಂದು ಹೊಸಜಿಲ್ಲೆಯನ್ನಾಗಿ ಮಾರ್ಪಡಿಸಲಾಯಿತು. ನೂತನ ಜಿಲ್ಲೆಯ ಜನಸಂಖ್ಯೆಯು (೧೯೯೧ರ ಜನಗಣತಿಯ ಪ್ರಕಾರ) ೮,೭೮,೧೭೧. ಇದರಲ್ಲಿ ೭,೫೯,೬೯೦ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ೧,೧೮,೪೮೧ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದ ಜನರೇ ಕಂಡುಬರುತ್ತಾರೆ. ಈ ಜಿಲ್ಲೆಯ ಜನರ ಮುಖ್ಯ ಭಾಷೆ ಕನ್ನಡ, ಗಡಿನಾಡಿನ ಪ್ರದೇಶವಾಗಿರುವುದರಿಂದ ಸ್ವಾಭಾವಿಕವಾಗಿಯೇ ಗಡಿ ಪ್ರದೇಶಗಳಲ್ಲಿ ತಮಿಳು, ಮಲಯಾಳಿ ಭಾಷೆಯನ್ನಾಡುವ ಜನರು ಸುಮಾರು ೨೧% ರಷ್ಟು ಕಂಡುಬರುತ್ತಾರೆ. ಇವರ ಜೊತೆಗೆ ಇಲ್ಲಿ ಗುಡ್ಡಗಾಡಿನ ಭಾಷಿಗಳು ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತಾರೆ. (ಜಿಲ್ಲೆಯ ಬಿಳಗಿರಿ ರಂಗನಾಥಸ್ವಾಮಿ ಬೆಟ್ಟದ ಅರಣ್ಯದಲ್ಲಿ ವಾಸಿಸುತ್ತಿರುವ ಸೋಲಿಗ ಜನರಾಡುವ ಭಾಷೆ) ನೂತನ ಜಿಲ್ಲೆಯಲ್ಲಿ ಹಿಂದೂ ಧರ್ಮದವರು ಹೆಚ್ಚಾಗಿದ್ದು, ಬ್ರಿಟಿಷ್ ಪ್ರಭಾವದಿಂದ ದಲಿತ ವರ್ಗದವರು ಹೆಚ್ಚಿನ ಪ್ರಮಾಣದಲ್ಲಿ (ಆರ್ಥಿಕ ಹಾಗೂ ಸಾಮಾಜಿಕ ತೊಂದರೆಯಿಂದಾಗಿ) ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿ ಕ್ರೈಸ್ತ ಧರ್ಮವು ಇಂದು ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನ ಮುಸ್ಲಿಮರದು.

ಚಾಮರಾಜನಗರ ಜಿಲ್ಲೆಯು ಮಳೆಯನ್ನೇ ನಂಬಿರುವ ಜಿಲ್ಲೆಯಾಗಿದೆ. ಇಲ್ಲಿನ ವ್ಯವಸಾಯವು ಕೇವಲ ೩೨%ರಷ್ಟು ಮಾತ್ರ ನೀರಾವರಿ ಪ್ರದೇಶದಲ್ಲಿ ನಡೆದರೆ ಮಿಕ್ಕ ೬೮% ರಷ್ಟು ಶುಷ್ಕ ಭೂಮಿಯಾಗಿದೆ. ಜನರ ಆರ್ಥಿಕ ಸ್ಥಿತಿ ಕೆಳಮಟ್ಟದಲ್ಲಿ ಇರುವುದು ಕಂಡುಬರುತ್ತದೆ. ನೀರಾವರಿ ಭೂಮಿಯಲ್ಲಿ ಕಬ್ಬು, ಭತ್ತ ಬೆಳೆದರೆ ಶುಷ್ಕ ಭೂಮಿಯಲ್ಲಿ ಹೆಚ್ಚಾಗಿ ರೇಷ್ಮೆ (ಹಿಪ್ಪೇನೇರಳೆ ಕೃಷಿ) ಬೆಳೆ ಬೆಳೆದು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಈ ಜಿಲ್ಲೆಯು ಉತ್ತಮ ಪ್ರವಾಸಿತಾಣವೂ ಆಗಿದೆ. ಇಲ್ಲಿ

ಸುಂದರ ಅರಣ್ಯಪ್ರದೇಶವಾಗಿರುವ ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟ ಇದ್ದು ಇದು ವನ್ಯಜೀವಿಗಳಿಂದ ಕೂಡಿದ ಸುಂದರ ಪ್ರದೇಶವಾಗಿದೆ. ಇದು ಪ್ರತಿವರ್ಷ ೧೦ಲಕ್ಷ ಪ್ರವಾಸಿಗರನ್ನು ಆಕರ್ಷಿಸುತ್ತದೆ ಇದರ ಜೊತೆಗೆ ಮಲೆ ಮಹಾದೇಶ್ವರಸ್ವಾಮಿ ಬೆಟ್ಟವು ಪ್ರಸಿದ್ಧ ಯಾತ್ರಾಸ್ಥಳದ ಜೊತೆಗೆ ಪ್ರವಾಸಿತಾಣವೂ ಆಗಿದೆ. ಆಳ್ವಿಕೆಯ ಹಿತದೃಷ್ಟಿಯಿಂದ ಕೊಳ್ಳೇಗಾಲವು ಉಪ ವಿಭಾಗವಾಗಿ ಕಾರ್ಯನಿರ್ವಹಿಸುತ್ತಿದೆ.

೭.೨. ಉಡುಪಿ

ಅರಬ್ಬೀ ಸಮುದ್ರಕ್ಕೆ ಚಾಚಿಕೊಂಡಂತೆ ಇರುವ ಉಡುಪಿಯು ರಾಜ್ಯದಲ್ಲಿಯೇ ಅನೇಕ ದೃಷ್ಟಿಯಿಂದ ಶ್ರೀಮಂತ ಜಿಲ್ಲೆಯಾಗಿದೆ. ಇದು ೧೯೯೭ನೇ ಆಗಸ್ಟ್ ೧೫ರಂದು ದಕ್ಷಿಣ ಕನ್ನಡ ಜಿಲ್ಲೆಯಿಂದ ಮೂರು ತಾಲ್ಲೂಕುಗಳನ್ನು ಒಂದುಗೂಡಿಸಿ ಉಡುಪಿಯನ್ನು ಜಿಲ್ಲಾಕೇಂದ್ರವನ್ನಾಗಿ ಪರಿವರ್ತಿಸಲಾಯಿತು. ಈ ನೂತನ ಜಿಲ್ಲೆಯು ಇಂದು ರಾಜ್ಯದಲ್ಲಿಯೇ ಅತ್ಯಂತ ಚಿಕ್ಕ ಜಿಲ್ಲೆಯಾಗಿದ್ದು, ತನ್ನ ಮೇರೆಯನ್ನಾಗಿ ಪಶ್ಚಿಮದಲ್ಲಿ ನೈಸರ್ಗಿಕವಾದ ಅರಬ್ಬಿಸಮುದ್ರ, ಉತ್ತರಕ್ಕೆ ಉತ್ತರ ಕನ್ನಡ ಜಿಲ್ಲೆ, ಈಶಾನ್ಯಕ್ಕೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ದಕ್ಷಿಣಕ್ಕೆ ತನ್ನ ಮೂಲಜಿಲ್ಲೆಯಾದಂತಹ ದಕ್ಷಿಣ ಕನ್ನಡವನ್ನು ಒಳಗೊಂಡಿದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣ ೩೮೫೨ ಚದರ ಕಿ.ಮೀ.

ನೂತನ ಜಿಲ್ಲೆಯು ಕಾರ್ಕಳ, ಕುಂದಾಪುರ, ಉಡುಪಿಗಳನ್ನೊಳಗೊಂಡಂತೆ ರೂಪಗೊಂಡಿದೆ. ಆಳ್ವಿಕೆಯ ಹಿತದೃಷ್ಟಿಯಿಂದ ಕುಂದಾಪುರವನ್ನು ಉಪ-ವಿಭಾಗವನ್ನಾಗಿ ಪರಿವರ್ತಿಸಿಕೊಳ್ಳಲಾಗಿದೆ. ಉಡುಪಿ ಜಿಲ್ಲೆಯನ್ನು ಬೇರ್ಪಡಿಸುವುದಕ್ಕೆ ಇತಿಹಾಸದ ದಾಖಲೆಗಳಲ್ಲಿ ತಿಳಿದಿರುವ ಹಾಗೆ ಬ್ರಿಟೀಷರು ಆಳ್ವಿಕೆಯ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿಯನ್ನು ಬೇರ್ಪಡಿಸಿ ಅದನ್ನು ಉಪವಿಭಾಗವನ್ನಾಗಿ ಮಾಡಿಕೊಂಡಿದ್ದರು. ನಂತರ ಬ್ರಿಟೀಷರು ೧೮೬೦ ಮತ್ತು ೧೮೬೨ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು, ಉತ್ತರ ಕನ್ನಡ ಜಿಲ್ಲೆಯನ್ನು ಬಾಂಬೆ ಪ್ರೆಸಿಡೆನ್ಸಿಗೂ ಸೇರಿಸಲಾಯಿತು. ನಂತರ ಇವುಗಳನ್ನು ೧೯೭೭ರಲ್ಲಿ ಜಿಲ್ಲಾ ಕೇಂದ್ರವನ್ನಾಗಿ ಪರಿವರ್ತಿಸಲಾಯಿತು. ಮತ್ತೆ ೧೯೯೭ರಂದು ದಕ್ಷಿಣ ಕನ್ನಡ ಜಿಲ್ಲೆಯನ್ನು ಇಬ್ಭಾಗ ಮಾಡಿ ಉಡುಪಿಯನ್ನು ಜಿಲ್ಲೆಯನ್ನಾಗಿ ಮಾಡಲಾಗಿದೆ.

ಉಡುಪಿ ಜಿಲ್ಲೆಯು ೧೯೯೧ರ ಜನಗಣತಿಯ ಪ್ರಕಾರ ೧೧,೨೬,೪೪೪ರಷ್ಟು ಜನಸಂಖ್ಯೆ ಇದ್ದು ಇದರಲ್ಲಿ ೮,೮೧,೪೨೪ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ೨೪.೫೦೨೦ರಷ್ಟು ಜನಸಂಖ್ಯೆಯು ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಈ ಜಿಲ್ಲೆಯ ಜನರ ಭಾಷೆಯು ಕನ್ನಡವಾಗಿದ್ದು ಮಲಯಾಳಿ, ಕೊಂಕಣಿ, ತುಳು ಹಾಗೂ ಹಿಂದಿ ಭಾಷೆಗಳನ್ನು ಸ್ವಲ್ಪ ಪ್ರಮಾಣದಲ್ಲಿ ಮಾತನಾಡುವವರೂ ಇದ್ದಾರೆ. ಈ ಜಿಲ್ಲೆಯಲ್ಲಿ ಗಂಗೋಳವಲಿ, ಸೋತುನದಿ ಮತ್ತು ಸ್ವರ್ಣ ಎಂಬ ಮೂರು ಪ್ರಮುಖ ನದಿಗಳು ಹರಿಯುತ್ತವೆ. ಇವುಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ ಕೃಷಿಗೆ ಸಹಕಾರಿಯಾಗುವಂತೆ ಮಾಡಲಾಗಿದೆ. ಜಿಲ್ಲೆಯು ೧೩ ನಗರ ಪ್ರದೇಶಗಳನ್ನು, ೨೭೭ ಗ್ರಾಮಗಳನ್ನು ಹೊಂದಿ ಉತ್ತಮ ವೈದ್ಯಕೀಯ ಸೌಲಭ್ಯ, ಸಾರಿಗೆ ಸಂಪರ್ಕದ ವ್ಯವಸ್ಥೆಯನ್ನು ಹೊಂದಿದೆ.

ಅರಬ್ಬೀಸಮುದ್ರದ ತಪ್ಪಲಲ್ಲಿರುವುದರಿಂದ ಪ್ರಸಿದ್ಧ ಪ್ರವಾಸಿ ಕೇಂದ್ರವಾಗಿಯೂ ರೂಪಗೊಂಡು ಸುಂದರ ಪ್ರಕೃತಿರಮ್ಯವಾದ ತಾಣವಾಗಿದೆ.

೭.೩. ದಾವಣಗೆರೆ

ರಾಜ್ಯದ ಹೃದಯ ಭಾಗದಲ್ಲಿರುವ ದಾವಣಗೆರೆ ಜಿಲ್ಲೆ ರಾಜ್ಯದಲ್ಲಿಯೇ ಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿದೆ. ಅದರ ಜನಸಂಖ್ಯೆ ಹಾಗೂ ಪ್ರಸಿದ್ಧಿಯನ್ನು ಗಮನಿಸಿ ೧೯೯೭ನೇ ಆಗಸ್ಟ್ ೧೫ರಂದು ನೂತನ ಜಿಲ್ಲೆಯಾಗಿ ನಿರ್ಮಿಸಲಾಯಿತು. ಈ ನೂತನ ಜಿಲ್ಲೆಯು ತನ್ನ ಮೇರೆಗಳನ್ನಾಗಿ ಉತ್ತರಕ್ಕೆ ಮತ್ತು ವಾಯುವ್ಯಕ್ಕೆ ಬಳ್ಳಾರಿಯನ್ನು, ಪೂರ್ವಕ್ಕೆ ತನ್ನ ಮೂಲ ಜಿಲ್ಲೆಯಾದಂತಹ ಚಿತ್ರದುರ್ಗವನ್ನು, ದಕ್ಷಿಣಕ್ಕೆ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಮತ್ತು ಪಶ್ಚಿಮಕ್ಕೆ ಶಿವಮೊಗ್ಗ ಮತ್ತು ಸ್ವಲ್ಪ ಪ್ರಮಾಣದಲ್ಲಿ ಹಾವೇರಿ ಜಿಲ್ಲೆಯನ್ನು ಹೊಂದಿದೆ. ದಾವಣಗೆರೆ ನಗರವನ್ನು ಜಿಲ್ಲಾ ಕೇಂದ್ರವಾಗಿಸಿಕೊಂಡಿರುವ ನೂತನ ಜಿಲ್ಲೆಯ ಒಟ್ಟು ವಿಸ್ತೀರ್ಣವು ೫೯,೪೧೪ ಚದರ ಕಿ.ಮೀ. ಆಗಿರುತ್ತದೆ.

ಈ ಜಿಲ್ಲೆಯು ರಾಜ್ಯದ ಮಧ್ಯಭಾಗದಲ್ಲಿಯೇ ಇರುವುದರಿಂದ ಸ್ವಲ್ಪ ವಿಶೇಷ ರೀತಿಯಲ್ಲಿ ನಿರ್ಮಿಸಬೇಕಾಯಿತು. ತನ್ನ ಸುತ್ತಲೂ ಇರುವಂತಹ ಜಿಲ್ಲೆಗಳಿಂದ ಒಂದೊಂದು ತಾಲ್ಲೂಕುಗಳನ್ನು ತೆಗೆದುಕೊಂಡು ದಾವಣಗೆರೆ ಜಿಲ್ಲೆಯನ್ನು ರೂಪಿಸಲಾಗಿದೆ. ಅಂದರೆ ಮೂಲ ಜಿಲ್ಲೆಯಾದ ಚಿತ್ರದುರ್ಗದಿಂದ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳು. ಬಳ್ಳಾರಿಯಿಂದ ಹರಪನಹಳ್ಳಿ,ಶಿವಮೊಗ್ಗದಿಂದ ಚನ್ನಗಿರಿ, ಹೊನ್ನಾಳಿಗಳನ್ನು ಒಟ್ಟಿಗೆ ಸೇರಿಸಿಕೊಂಡು ನೂತನ ಜಿಲ್ಲೆ ನಿರ್ಮಾಣವಾಗಿದೆ. ಆಡಳಿತದ ಅನುಕೂಲ ದೃಷ್ಟಿಯಿಂದ ಹರಪನಹಳ್ಳಿಯನ್ನು ಉಪ-ವಿಭಾಗವನ್ನಾಗಿ ಮಾಡಲಾಗಿದೆ. ೧೯೯೧ರಲ್ಲಿ ಜಿಲ್ಲೆಯ ಒಟ್ಟು ಜನಸಂಖ್ಯೆ ೧೨,೯೭,೧೪೦ ಇದ್ದು, ಇದರಲ್ಲಿ ೧೧,೧೮,೭೧೪ ಜನರು ಗ್ರಾಮೀಣ ಪ್ರದೇಶಗಳಲ್ಲಿಯೂ ೧,೭೪,೪೨೬ ಜನರು ನಗರ ಪ್ರದೇಶಗಳಲ್ಲಿಯೂ ವಾಸಿಸುತ್ತಿರುವುದು ಕಂಡುಬರುತ್ತದೆ. ಈ ಜಿಲ್ಲೆಯ ಜನರ ಪ್ರಮುಖ ಭಾಷೆ ಕನ್ನಡವಾಗಿದ್ದು ಜೊತೆಗೆ ಸುಮಾರು ೩೫%ರಷ್ಟು ಜನರು ತೆಲುಗು, ಹಿಂದಿ, ಉರ್ದು ಭಾಷೆಯನ್ನಾಡುತ್ತಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ತುಂಗಭದ್ರ ನದಿಯು ಹರಿಯುತ್ತದೆ. ಈ ನದಿಗೆ ಇಲ್ಲಿ 'ಪಂಪನದಿ' ಎಂದು ಕರೆಯಲಾಗುತ್ತದೆ. ಇದರಿಂದ ಈ ಪ್ರದೇಶವು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಒದಗಿಸಿದೆ. ನೂತನ ಜಿಲ್ಲೆಯು ಬೃಹತ್ ಕೆರೆಗಳ ಜಿಲ್ಲೆಯಾಗಿದೆ. ಜಗಳೂರು ಕೆರೆ, ಸಂಗನಹಳ್ಳಿ ಕೆರೆ, ಕೊಡುಗೇರೆ ಕೆರೆ, ಸೂಳೇಕೆರೆ ಮತ್ತು ದಾವಣಗೆರೆ ಕೆರೆಗಳು ಇಂದಿಗೂ ಹೆಚ್ಚಾಗಿ ವ್ಯವಸಾಯಕ್ಕೆ ಯೋಗ್ಯರೀತಿಯಲ್ಲಿ ಸಹಕರಿಸುತ್ತಿವೆ. ಈ ದೃಷ್ಟಿಯಿಂದಲೆ ಜಿಲ್ಲೆಯು ಉತ್ತಮ ಜಾತಿಯ ಹತ್ತಿ ಬೆಳೆದು ಹೆಚ್ಚಿನ ಪ್ರಮಾಣದಲ್ಲಿ ಬಟ್ಟೆ ನೇಯುವ ಬೃಹತ್ ಕೈಗಾರಿಕೆಗಳು ಹಾಗೂ ಗೃಹ ಕೈಗಾರಿಕೆಗಳನ್ನು ಹೊಂದಿದ್ದು ಆರ್ಥಿಕವಾಗಿ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ.

೭.೪. ಕೊಪ್ಪಳ

ನೂತನ ಕೊಪ್ಪಳ ಜಿಲ್ಲೆಯು ರಾಜ್ಯದ ವಾಯುವ್ಯ ಭಾಗದಲ್ಲಿ ಕಂಡುಬರುತ್ತವೆ. ಈ ಜಿಲ್ಲೆಯು ಸಹ ಖನಿಜ ಸಂಪತ್ತಿನಿಂದ ತುಂಬಿ ಉತ್ತಮ ವ್ಯವಸಾಯದ ಭೂಮಿಯನ್ನು

ಪಡೆದು ರಾಜ್ಯದಲ್ಲಿ ಶ್ರೀಮಂತ ಜಿಲ್ಲೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಇದು ಉತ್ತರಕ್ಕೆ ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳನ್ನು, ಪಶ್ಚಿಮಕ್ಕೆ ರಾಯಚೂರು ಜಿಲ್ಲೆಯನ್ನು, (ಮೂಲಜಿಲ್ಲೆ) ದಕ್ಷಿಣಕ್ಕೆ ಬಳ್ಳಾರಿ ಜಿಲ್ಲೆಯನ್ನು, ಪೂರ್ವಕ್ಕೆ ಗದಗ ಜಿಲ್ಲೆಯನ್ನು ತನ್ನ ಗಡಿ ಪ್ರದೇಶಗಳನ್ನಾಗಿ ಹೊಂದಿದೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ನೈಸರ್ಗಿಕವಾಗಿ ತುಂಗಭದ್ರ ನದಿಯು ಬೇರ್ಪಡಿಸುತ್ತದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣ ೫೫೫೯ ಚದರ ಕಿ.ಮೀಗಳಷ್ಟಾಗಿದೆ.

ಮೂಲ ರಾಯಚೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದಂತಹ ಕೊಪ್ಪಳವು ಪ್ರಸ್ತುತವಾಗಿ ಗಂಗಾವತಿ, ಕೊಪ್ಪಳ, ಕುಷ್ಠಗಿ ಮತ್ತು ಯಲಬುರ್ಗಾ ತಾಲ್ಲೂಕುಗಳನ್ನು ಒಳಗೊಂಡಂತೆ ಹೊಸ ಜಿಲ್ಲೆಯಾಗಿ ೧೯೯೭ ಆಗಸ್ಟ್ ೧೫ರಂದು ಜನ್ಮತಾಳಿತು. ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿದ್ದ ಕೊಪ್ಪಳವನ್ನು ೧೯೦೫ರಲ್ಲಿ ಕರ್ನಾಟಕದೊಂದಿಗೆ ವಿಲೀನಗೊಳಿಸಿಕೊಳ್ಳಲಾಯಿತು. ನೂತನ ಜಿಲ್ಲೆಗೆ ಪ್ರಾಚೀನ ಇತಿಹಾಸವಿದ್ದು ಇದು ಪ್ರಸಿದ್ಧ ಕಲ್ಯಾಣ ಚಾಲುಕ್ಯರು, ವಿಜಯನಗರದ ಅರಸರು ಹಾಗೂ ಮುಸ್ಲಿಂ(ನಿಜಾಂ) ದೊರೆಗಳ ಆಳ್ವಿಕೆಗೆ ಒಳಪಟ್ಟು ವಿಶಿಷ್ಟ ರೀತಿಯ ಸಂಸ್ಕೃತಿಯನ್ನು ಹೊಂದಿದೆ.

ಜಿಲ್ಲೆಯು ೧೯೯೧ರ ಜನಗಣತಿಯ ಪ್ರಕಾರ ೯,೫೮,೦೭೮ ಜನರನ್ನು ಹೊಂದಿದ್ದು ಇವರಲ್ಲಿ ೮,೧೦,೦೦೭ ಜನರು ಗ್ರಾಮೀಣ ಪ್ರದೇಶಗಳಲ್ಲಿಯು ೧,೪೮,೦೭೧ ಜನರು ನಗರ ಪ್ರದೇಶಗಳಲ್ಲಿಯೂ ವಾಸಿಸುತ್ತಿದ್ದು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಪ್ರಬಲ ಜಿಲ್ಲೆಯೇ ಆಗಿದೆ. ಗ್ರಾಮೀಣ ಜನರ ಮುಖ್ಯ ಉದ್ಯೋಗವು ವ್ಯವಸಾಯವಾಗಿದ್ದು ಹತ್ತಿ, ಜೋಳ, ಭತ್ತ, ಕಬ್ಬು, ಸಾಂಬಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ವ್ಯವಸಾಯಕ್ಕೆ ಮಳೆಯನ್ನೇ ಆಶ್ರಯಿಸಿಕೊಂಡಿದ್ದಾರೆ. ಹೊಸಪೇಟೆಯ ಬಳಿಯಿರುವಂತಹ ತುಂಗಭದ್ರ ಅಣೆಕಟ್ಟೆಯಿಂದ ಅನೇಕ ಭೂ ಪ್ರದೇಶವು ನೀರಾವರಿ ಪ್ರದೇಶವಾಗಿರುತ್ತದೆ.

ಜಿಲ್ಲೆಯ ಪ್ರಮುಖ ಬಾಷೆ ಕನ್ನಡವಾಗಿದ್ದು, ತೆಲುಗು, ಉರ್ದು, ಹಿಂದಿ ಭಾಷೆಗಳ ಪರಿಚಯ ಇರುವವರೂ ಕಂಡುಬರುತ್ತಾರೆ. ಕೊಪ್ಪಳ ಆಂಧ್ರದ ಗಡಿ ಪ್ರದೇಶವಾಗಿರುವುದರಿಂದ ದ್ವಿಭಾಷಿಕತೆಯ ನಗರವಾಗಿದೆ. ಜಿಲ್ಲೆಯು ಉತ್ತಮ ಸಾರಿಗೆ ಸಂಪರ್ಕ ಹೊಂದಿದ್ದು ನಗರದ ಹೃದಯ ಭಾಗದಲ್ಲಿಯೇ ೧೩ನೇ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತದೆ. ಇದು ಕೊಪ್ಪಳ ಜಿಲ್ಲೆಯ ಯಲಬುರ್ಗಾ, ಕೊಪ್ಪಳ, ಕುಷ್ಠಗಿ ತಾಲ್ಲೂಕುಗಳ ಮೂರರ ಮಧ್ಯೆ ಹಾದು ಹೋಗುತ್ತದೆ. ಹುಬ್ಬಳ್ಳಿ, ಗದಗ, ಹೊಸಪೇಟೆ, ಬಳ್ಳಾರಿ, ಗುಂತಕಲ್, ಹೈದ್ರಾಬಾದ್‌ಗಳೊಂದಿಗೆ ಉತ್ತಮ ರೈಲ್ವೆ ವ್ಯವಸ್ಥೆ ಹೊಂದಿರುತ್ತದೆ.

೭.೫. ಬಾಗಲಕೋಟೆ

ಏಕೀಕೃತ ಕರ್ನಾಟಕದ ೧೯ ಜಿಲ್ಲೆಗಳಲ್ಲಿ ಅತ್ಯಂತ ದೊಡ್ಡ ಜಿಲ್ಲೆಯಾಗಿದ್ದಂತಹ ಬಿಜಾಪುರದ ತಾಲ್ಲೂಕು ಕೇಂದ್ರವಾಗಿದ್ದ ಬಾಗಲಕೋಟೆಯು ೧೯೯೭ ಆಗಸ್ಟ್ ೧೫ರಂದು ಬಿಜಾಪುರ ಜಿಲ್ಲೆಯ ಆರು ತಾಲ್ಲೂಕುಗಳನ್ನು ತನ್ನ ಮಡಿಲಿಗೆ ಹಾಕಿಕೊಂಡು ನಿರ್ಮಾಣವಾಗಿದೆ. ಜಿಲ್ಲಾ ಮೇರೆಗಳಾಗಿ ಉತ್ತರ ಮತ್ತು ಪಶ್ಚಿಮಕ್ಕೆ ಮೂಲ ಜಿಲ್ಲೆಯಾದ ಬಿಜಾಪುರವನ್ನು ದಕ್ಷಿಣ ಹಾಗೂ ಪೂರ್ವಕ್ಕೆ ರಾಯಚೂರು ಹಾಗೂ ಧಾರವಾಡ

ಜಿಲ್ಲೆಗಳನ್ನು, ಪೂರ್ವ ಮತ್ತು ಈಶಾನ್ಯ ದಿಕ್ಕಿಗೆ ಬೆಳಗಾವಿ ಜಿಲ್ಲೆಗಳನ್ನು ಒಳಗೊಂಡಿದೆ. ಒಟ್ಟು ಜಿಲ್ಲೆಯ ವಿಸ್ತೀರ್ಣ ೬೫೮೭.೮೯ ಚದರ ಕಿ.ಮೀ.ಗಳಾಗಿದೆ.

ನೂತನ ಬಾಗಲಕೋಟೆ ಜಿಲ್ಲೆಯು ಬಾದಾಮಿ, ಬಾಗಲಕೋಟೆ, ಬೀಳಗಿ, ಹುನಗುಂದ, ಜಮಖಂಡಿ ಮತ್ತು ಮುಧೋಳ ತಾಲ್ಲೂಕುಗಳನ್ನು ಹೊಂದಿ ಮಲಪ್ರಭ ನದಿಯ ದಂಡೆಯ ಮೇಲೆ ಪ್ರಕೃತಿಯ ಮಡಿಲಲ್ಲಿ ಕಂಗೊಳಿಸುತ್ತಿದೆ. ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ೧೩,೬೭,೮೮೧ ಜನರಿದ್ದು ಇವರಲ್ಲಿ ೬,೮೮,೩೪೪ ಗಂಡಸರೂ, ೬,೭೫,೫೩೭ ಹೆಂಗಸರೂ ಇದ್ದಾರೆಂದು ತಿಳಿದುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ೧೦,೦೫,೨೨೯ ಜನರು ವಾಸಿಸುತ್ತಿದ್ದು ನಗರವಾಸಿಗಳಾಗಿ ೩,೫೮,೬೫೨ ಜನರಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಜಿಲ್ಲೆಯ ಪ್ರಮುಖ ಭಾಷೆ ಕನ್ನಡವಾಗಿದ್ದರೂ ಗಡಿ ಪ್ರದೇಶದ ಜಿಲ್ಲೆಯಾಗಿರುವುದರಿಂದ ಮರಾಠಿ, ಹಿಂದಿ ಭಾಷೆಗಳನ್ನು ಸುಮಾರು ೪೦% ಬಲ್ಲವರಾಗಿರುವುದು ಕಂಡುಬರುತ್ತದೆ. ಈ ಜಿಲ್ಲೆಯ ಮತ್ತೊಂದು ವಿಶೇಷವೆಂದರೆ ಹಿಂದೂ ಮತ್ತು ಮುಸ್ಲಿಂ ಧರ್ಮದವರು ಸಮಾನ ಸಂಖ್ಯೆಯಲ್ಲಿರುವುದಾಗಿದೆ, ಬಿಜಾಪುರವು ನಿಜಾಂ ಅವರ ಆಡಳಿತ ಕೇಂದ್ರವಾಗಿದ್ದರಿಂದ ಈ ಬದಲಾವಣೆಯನ್ನು ಕಾಣಬಹುದಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಘಟಪ್ರಭ ಮತ್ತು ಮಲಪ್ರಭ ನದಿಗಳು ಪ್ರಮುಖವಾದರೆ ಸಹ್ಯಾದ್ರಿ ಪರ್ವತಗಳ ಮಹಾಬಲೇಶ್ವರ ಬೆಟ್ಟದಿಂದ ಉಗಮವಾಗುವ ಕೃಷ್ಣಾ ನದಿಯು ಜಮಖಂಡಿ ತಾಲ್ಲೂಕಿನ ಮೂಲಕ ಕರ್ನಾಟಕವನ್ನು ಪ್ರವೇಶಿಸಿ ಸಂಪತ್‌ಭರಿತ ಜಿಲ್ಲೆಯನ್ನಾಗಿಸಿದೆ. ಜಿಲ್ಲೆಯು ಉತ್ತಮ ಪ್ರವಾಸಿ ಕೇಂದ್ರವೂ ಆಗಿರುವುದು ಅಲ್ಲಿನ ಐತಿಹಾಸಿಕ ಸ್ಥಳಗಳಿಂದ. ಬಾದಾಮಿ ಪಟ್ಟಣವು ಇತಿಹಾಸದಲ್ಲಿ ಮೆರೆದು ಇಂದು ಚರಿತ್ರೆಯ ಪುಟಗಳಲ್ಲಿ ರಾಜಿಸುತ್ತಿರುವ ಕ್ಷೇತ್ರ. ಐತಿಹಾಸಿಕ ದೇವಾಲಯಗಳ ತೊಟ್ಟಿಲಾಗಿರುವ ಪಟ್ಟದ ಕಲ್ಲು (Pattadakal) ಇಲ್ಲಿದ್ದು ಇಲ್ಲಿ ಚಾಲುಕ್ಯರ ಕಲೆಯನ್ನು ಬಿಂಬಿಸುವ ಪ್ರಸಿದ್ಧ Kisevolal ಅಥವಾ Pattadakisuvol ದೇವಾಲಯ ಹಾಗೂ ಲೋಕ ಮಹಾದೇವಿ ದೇವಾಲಯವಿರುತ್ತದೆ. ಈ ಎಲ್ಲ ದೇವಾಲಯಗಳು ನಾಗರಶೈಲಿಗೆ ಉದಾಹರಣೆಗಳಾಗಿವೆ.

ಬಾಗಲಕೋಟೆ ಇಂದು ಚಾರಿತ್ರಿಕ ಪ್ರಸಿದ್ಧ ಜಿಲ್ಲೆಯಾಗಿಯೇ ಉಳಿಯದೆ ಆಧುನಿಕ ಯುಗಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಾ ಉತ್ತಮ ಶಿಕ್ಷಣ ಕ್ಷೇತ್ರವಾಗಿಯೂ ಮುನ್ನುಗ್ಗುತ್ತಿದೆ. ರಾಜ್ಯದ ರಾಷ್ಟ್ರದ ರಾಜಕೀಯದಲ್ಲಿ ತನ್ನದೆ ಆದ ಸ್ಥಾನಮಾನವನ್ನು ಪಡೆದುಕೊಂಡಿದೆ.

೭.೬. ಗದಗ

ರಾಜ್ಯದ ಸಾಂಸ್ಕೃತಿಕ ರಾಜಧಾನಿಯಾಗಿರುವ ಧಾರವಾಡವನ್ನು ಆಡಳಿತದ ದೃಷ್ಟಿಯಿಂದ ಮೂರು ಜಿಲ್ಲೆಗಳನ್ನಾಗಿ ವಿಭಾಗಿಸಲಾಯಿತು. ಶತಮಾನಗಳಿಂದಲೂ ಧಾರವಾಡದ ತಾಲ್ಲೂಕು ಕೇಂದ್ರಗಳಾಗಿದ್ದಂತಹ ಗದಗ ಮತ್ತು ಹಾವೇರಿಗಳಿಗೆ ಕೆಲವು ತಾಲ್ಲೂಕುಗಳನ್ನು ಸೇರಿಸಿ ಜಿಲ್ಲಾ ಸ್ಥಾನಮಾನವನ್ನು ನೀಡಲಾಯಿತು. ಈ ರೀತಿಯಲ್ಲಿ ಜಾರಿಗೆ ಬಂದ ಗದಗ ಜಿಲ್ಲೆಯೂ ಸಹ ರಾಜ್ಯದ ಮಧ್ಯಭಾಗದಲ್ಲಿಯೇ ಕಂಡುಬರುತ್ತದೆ. ಜಿಲ್ಲೆಯು ತನ್ನ ಗಡಿ ಪ್ರದೇಶಗಳನ್ನಾಗಿ ಉತ್ತರಕ್ಕೆ ಬೆಳಗಾಂ ಮತ್ತು ಬಾಗಲಕೋಟೆ,

ಪೂರ್ವಕ್ಕೆ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳನ್ನು, ದಕ್ಷಿಣಕ್ಕೆ ಬಳ್ಳಾರಿ ಹಾಗೂ ಹಾವೇರಿ, ಪಶ್ಚಿಮಕ್ಕೆ ತನ್ನ ಮೂಲ ಜಿಲ್ಲೆಯಾದಂತಹ ಧಾರವಾಡವನ್ನು ಒಳಗೊಂಡಿರುತ್ತದೆ.

ನೂತನ ಜಿಲ್ಲೆಯು ಗದಗ, ಮುಂಡರಗಿ, ನರಗುಂದ, ನವಲಗುಂದ, ರೋಣ ಮತ್ತು ಶಿರಹಟ್ಟಿ ಎಂಬ ಆರು ತಾಲ್ಲೂಕುಗಳನ್ನು ಒಂದುಗೂಡಿಸಿ ಗದಗವನ್ನು ಜಿಲ್ಲಾಕೇಂದ್ರವಾಗಿ ಆಯ್ಕೆ ಮಾಡಿದೆ. ಜಿಲ್ಲೆಯು ೧೯೯೧ರ ಜನಗಣತಿಯ ಪ್ರಕಾರ ೧೦,೨೦,೫೧೩ ರಷ್ಟಿದ್ದು ಇದರಲ್ಲಿ ೬,೭೭,೮೭೪ ರಷ್ಟು ಜನರು ಗ್ರಾಮೀಣ ಪ್ರದೇಶದ ವಾಸಿಗಳಾಗಿದ್ದಾರೆ. ಜಿಲ್ಲೆಯು ಕನ್ನಡವನ್ನೇ ತನ್ನ ಮಾತೃಭಾಷೆಯನ್ನಾಗಿ ಹೊಂದಿದ್ದರೂ ಸಹ ಮರಾಠಿ, ಉರ್ದು ಭಾಷೆಗಳು ಬೆಳೆಯಲು ಒಂದು ರೀತಿಯ ತಾಣವಾಗಿದೆ. ಭೌಗೋಳಿಕವಾಗಿ ಕಪ್ಪು ಮಣ್ಣಿನಿಂದ ಕೂಡಿರುವ ಪ್ರದೇಶವಾಗಿರುವುದರಿಂದ ಇಲ್ಲಿ ಹತ್ತಿ, ಭತ್ತ, ರಾಗಿ, ಜೋಳ, ನವಣೆ, ಹೆಚ್ಚಾಗಿ ಸಾಂಭಾರ ಪದಾರ್ಥಗಳನ್ನು ಬೆಳೆಯಲು ಯೋಗ್ಯವಾಗಿದೆ. ಈ ಜಿಲ್ಲೆಯಲ್ಲಿಯೂ ಉತ್ತರಕ್ಕೆ ಮಲಪ್ರಭ, ಈಶಾನ್ಯಕ್ಕೆ ತುಂಗಭದ್ರ ನದಿಗಳು ಹರಿಯುತ್ತಿರುವುದರಿಂದ ಹಾಗೂ ಅನೇಕ ದೊಡ್ಡ ಕೆರೆಗಳನ್ನು ತನ್ನ ಮಡಿಲಲ್ಲಿ ನಿರ್ಮಿಸಿಕೊಂಡಿರುವುದರಿಂದ ವ್ಯವಸಾಯವು ಉತ್ತಮ ರೀತಿಯಲ್ಲಿ ಇದೆ. ಜಿಲ್ಲೆಯು ಉತ್ತಮ ಸಾರಿಗೆ ಸಂಪರ್ಕ ಹೊಂದಿದ್ದು ಜಿಲ್ಲೆಯ ಮಧ್ಯಭಾಗದಲ್ಲಿಯೇ ಹುಬ್ಬಳ್ಳಿ ಸೊಲ್ಲಾಪುರ ರೈಲು ಮಾರ್ಗ ಮತ್ತು ರಾಷ್ಟ್ರೀಯ ರಸ್ತೆ ಹೆದ್ದಾರಿಯನ್ನು ಹೊಂದಿರುತ್ತದೆ. ಪ್ರಸಿದ್ಧ ವಿದ್ಯಾಕೇಂದ್ರವಾಗಿರುವ ಗದಗಿನಲ್ಲಿ ಹಿಂದೊಮ್ಮೆ ಕನ್ನಡ ಪುಸ್ತಕಗಳ ಮುದ್ರಿಸುವ ಹಾಗೂ ಪ್ರಕಟಿಸುವ ನಿಟ್ಟಿನಲ್ಲಿ ಮಹತ್ತರವಾದ ಸಾಧನೆ ಮಾಡಿದೆ.

೭.೭. ಹಾವೇರಿ

೧೯೯೭ನೇ ಆಗಸ್ಟ್ ೧೫ರಂದು ನೂತನ ಜಿಲ್ಲೆಯಾಗಿ ಹೊರಹೊಮ್ಮಿದ ಹಾವೇರಿಯು ತನ್ನ ಮಡಿಲಿಗೆ ಮೂಲ ಜಿಲ್ಲೆಯಾದ ಧಾರವಾಡದಿಂದಲೇ ಆರು ತಾಲ್ಲೂಕುಗಳನ್ನು ತನ್ನ ಸೀಮಾರೇಖೆಗೆ ಸೇರಿಸಿಕೊಂಡು ರಚಿತವಾಗಿದೆ. ಜಿಲ್ಲೆಯ ಉತ್ತರಕ್ಕೆ ಧಾರವಾಡ ಮತ್ತು ಗದಗ, ಪೂರ್ವಕ್ಕೆ ಬಳ್ಳಾರಿ ಮತ್ತು ದಾವಣಗೆರೆ, ದಕ್ಷಿಣಕ್ಕೆ ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು, ಹಾಗೆಯೇ ಪಶ್ಚಿಮಕ್ಕೆ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಹೊಂದಿರುತ್ತದೆ. ಈ ಜಿಲ್ಲೆಗೂ ಸಹ ನೈಸರ್ಗಿಕವಾಗಿಯೇ ತುಂಗಭದ್ರ ನದಿಯು ಗಡಿರೇಖೆಯಾಗಿರುವುದು ಕಂಡುಬರುತ್ತದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೪೨೬೨.೭ ಚದರ ಕಿ.ಮೀ.

ಹಾವೇರಿ ಜಿಲ್ಲೆಯು ತನ್ನೊಳಗೆ ಹಿರೇಕೆರೂರು, ಬ್ಯಾಡಗಿ, ರಾಣೇಬೆನ್ನೂರು, ಸವಣೂರು, ಹಾನಗಲ್ಲು ತಾಲ್ಲೂಕುಗಳನ್ನು ಹೊಂದಿದ್ದು, ೧೯೯೧ರ ಜನಗಣತಿಯ ಪ್ರಕಾರ ೧೧,೨೧,೭೧೪ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ೯,೩೭,೭೫೮ ಜನರು ಗ್ರಾಮೀಣ ಪ್ರದೇಶದಲ್ಲಿಯೂ, ೧,೮೩,೯೫೬ ರಷ್ಟು ಜನರು ನಗರ ಪ್ರದೇಶಗಳಲ್ಲಿಯೂ ವಾಸಿಸುತ್ತಿರುವುದು ದಾಖಲೆಗಳಿಂದ ತಿಳಿದುಬರುತ್ತದೆ. ಜಿಲ್ಲೆಯ ಪ್ರಮುಖ ಭಾಷೆ ಕನ್ನಡ, ಇದರ ಜೊತೆಗೆ ಮರಾಠಿ, ಹಿಂದಿ, ಉರ್ದು, ಇನ್ನಿತರ ಭಾಷೆಗಳನ್ನು ಮಾತನಾಡುವ ಜನರು ಸಹ ಇದ್ದಾರೆ. ಈ ಜಿಲ್ಲೆಯು ಭೌಗೋಳಿಕವಾಗಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಣ್ಣಪುಟ್ಟ ಬೆಟ್ಟಗುಡ್ಡಗಳ ಪ್ರದೇಶವಾಗಿದ್ದು ಕಪ್ಪು ಮಣ್ಣಿನ

ಭೂಮಿಯನ್ನು ಹೊಂದಿರುತ್ತದೆ. ಈ ಮಣ್ಣು ಹೆಚ್ಚು ಕಾಲ ತೇವಾಂಶವನ್ನು ಇಟ್ಟುಕೊಳ್ಳುವ ಶಕ್ತಿ ಹೊಂದಿರುವುದರಿಂದ ಇದು ಕೃಷಿ ಬೇಸಾಯಕ್ಕೆ ಯೋಗ್ಯ ಭೂಮಿಯಾಗಿದೆ. ಇಲ್ಲಿ ಬೆಳೆಯುವ ಹತ್ತಿ, ಕಬ್ಬು, ಉತ್ಕೃಷ್ಟ ಪ್ರಮಾಣದಾಗಿರುತ್ತದೆ. ಈ ಜಿಲ್ಲೆಯು ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಸಂರಕ್ಷಣ ಕೇಂದ್ರ, ನೂಲು ಕೈಗಾರಿಕೆಗಳನ್ನು ಹೊಂದಿದೆ. ಜಿಲ್ಲೆಯು ಪ್ರಸಿದ್ಧ ಪ್ರವಾಸಿ ಕೇಂದ್ರವೂ ಆಗಿದ್ದು ಇಂದು ಆಧುನಿಕ ಶಿಕ್ಷಣದಲ್ಲಿ ಮುನ್ನಡೆಯುತ್ತಿದೆ.

ಗಡಿನಾಡಿನ ಸಮಸ್ಯೆಗಳು, ಚಳವಳಿಗಳ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ರಾಜ್ಯದ ಒಟ್ಟು ಜಿಲ್ಲೆಗಳು ಹಾಗೂ ಪ್ರತಿಯೊಂದು ಜಿಲ್ಲೆಯು ಹೊಂದಿರುವ ತಾಲ್ಲೂಕುಗಳ ಪರಿಚಯ ಜೊತೆಗೆ ಹೊಸದಾಗಿ ಕಾರ್ಯ ಆರಂಭ ಮಾಡಿದ ಏಳು ಜಿಲ್ಲೆಗಳ ಪರಿಚಯ ನೀಡಿರುವುದು ಆಡಳಿತಾತ್ಮಕವಾದ ಅನುಕೂಲದ ದೃಷ್ಟಿಯಿಂದಲಾದರೂ, ಅಂತರ್ಯದಲ್ಲಿ ನವ ಜಿಲ್ಲೆಗಳ ನಿರ್ಮಾಣದಲ್ಲಿ ಬಹುತೇಕ ಒಮ್ಮತಗೊಂಡ ಜನಾಭಿಪ್ರಾಯ ಗಡಿ ಸಮಸ್ಯೆಗಳ ಸಂದರ್ಭದಲ್ಲಿ ಮೂಡುವಂತಾಗಲೆಂದು.

❑❑

೮. ಉಪಸಂಹಾರ

ನಾವು ಚರಿತ್ರೆಯಿಂದ ತಿಳಿದುಕೊಂಡಿರುವ ಹಾಗೆ ನೃಪತುಂಗ, ಪಂಪ, ರನ್ನ, ಆಂಡಯ್ಯ, ಜನ್ನ, ದಾಸರು ಇನ್ನಿತರ ಸಾಹಿತ್ಯಾದಿ ಕವಿಗಳು ಕನ್ನಡ ನಾಡಿನ ವ್ಯಾಪ್ತಿ, ಕನ್ನಡಿಗರ ಶೀಲ, ದಾನಧರ್ಮ, ಔದಾರ್ಯಗಳನ್ನು ಕುರಿತು ರಸವತ್ತಾಗಿ ವರ್ಣಿಸಿ ಬರವಣಿಗೆಯ ಮೂಲಕ ಇಂದು ನಮಗೆ ಕಾಣಿಕೆಯಾಗಿ ನೀಡಿದ್ದಾರೆ. ಕನ್ನಡದ ದೊರೆಗಳು ತಮ್ಮ ಈ ನಾಡಿನ ಗತವೈಭವವನ್ನು ಹೇಗೆ ಕಟ್ಟಿದರು, ಬೆಳೆಸಿದರು ಎಂಬುವುದನ್ನು ಅಭಿಮಾನದಿಂದಲೇ ವರ್ಣಿಸಿದ್ದಾರೆ. ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತೆಂದು ನೃಪತುಂಗ ಸಾರಿದ್ದಾನೆ. ಅಷ್ಟೆ ಅಲ್ಲದೆ ಕನ್ನಡಿಗರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎಂದು ನಮ್ಮ ನಾಡಿನ ಸಾಹಿತಿಗಳ ಬಗ್ಗೆ ಅಂದಿನ ಕಾಲದಲ್ಲಿಯೇ ಹೆಮ್ಮೆಯಿಂದ ಹೇಳಿದ್ದಾರೆ. ನಮ್ಮ ನಾಡಿನ ನಿಸರ್ಗದ ವೈಭವವನ್ನು ವರ್ಣಿಸುವಾಗಂತೂ ಹಿಂದಿನ ಹಾಗೂ ಇಂದಿನ ರಸಕವಿಗಳು ತಮ್ಮ ಮೈಮರೆತಿದ್ದಾರೆ, ಮರೆಯುತ್ತಿದ್ದಾರೆ. ಇಷ್ಟೆಲ್ಲ ಇದ್ದರೂ ಸಹ ಇಂದು ಕನ್ನಡ ನಾಡಿನ ಮಕ್ಕಳಾದ ನಾವು ಕನ್ನಡ ನಾಡಿನಲ್ಲಿಯೇ ಕೆಲವು ಪ್ರದೇಶದಲ್ಲಿ ಕನ್ನಡಿಗರೆಂದು ಹೇಳಿಕೊಳ್ಳಲು ಹಿಂಜರಿಯುತ್ತಿದ್ದೇವೆ. ಇದಕ್ಕೇನು ಕಾರಣ? ಎಂಬ ಪ್ರಶ್ನೆ ಪ್ರತಿಯೊಬ್ಬ ಪ್ರಜ್ಞಾವಂತ ಕನ್ನಡ ಪ್ರೇಮಿಯ ಮನಸ್ಸಿನಲ್ಲಿ ಮೂಡದೆ ಇರಲಾರದು.

ನಮ್ಮ ಗಡಿನಾಡಿನಲ್ಲಿ ಕನ್ನಡದ ಪ್ರದೇಶದಲ್ಲಿದ್ದೂ ನೆರೆಯ ರಾಜ್ಯಕ್ಕೆ ಸೇರಲು ಹೋರಾಡುತ್ತಿರುವ ಸಹೋದರ-ಸಹೋದರಿಯರಿಗೆ ಅಜಂತೆಯ ಚಿತ್ರಕಲಾ ವೈಭವ, ಬೇಲೂರು, ಹಳೆಬೀಡು, ಸೋಮನಾಥಪುರ, ತಲಕಾಡು, ಬಾದಾಮಿ, ವಿಜಯನಗರಗಳ ಶಿಲ್ಪ ವೈಭವ. ಮೈಸೂರು, ಬೆಂಗಳೂರು ಅರಮನೆಗಳ ಸುಂದರ ಸೊಬಗಿನ ವೈಭವ, ಕರ್ನಾಟಕ ಸಂಗೀತದ ನಾದವೈಭವ ಸಾವಿರಾರು ವರ್ಷಗಳಿಂದ ಬೆಳೆದುಬಂದಿರುವ ಸಾಹಿತ್ಯ ಸಂಸ್ಕೃತಿಗಳ ವೈಭವಗಳು ಮರೆಯುತ್ತಿರುವುದೇಕೆ? ಕನ್ನಡದ ಗಡಿ ಪ್ರದೇಶಗಳು ಅದು ಬೆಳಗಾವಿಯೇ ಆಗಿರಲಿ, ಕಾಸರಗೋಡೇ ಆಗಲಿ ಅಥವಾ ಆಂಧ್ರದ ಗಡಿಭಾಗಗಳೇ ಆಗಲಿ ಇವುಗಳೆಲ್ಲವೂ ವೀರರ ಭೂಮಿಗಳು. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಸಹ ಆ ಭಾಗದ ಊರುಊರುಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಕಂಡುಬರುವ ವೀರಗಲ್ಲುಗಳು, ಕನ್ನಡದ ಶಾಸನಗಳಲ್ಲಿ ಉಲ್ಲೇಖವಾಗಿರುವ ಪ್ರಾಣತ್ಯಾಗ ಮತ್ತು ಬಲಿದಾನ ವಿಷಯಗಳನ್ನು ಸಾರುತ್ತಾ ನಿಂತಿವೆ. ಕನ್ನಡ ನಾಡು ಮಹಾತಪಸ್ವಿಗಳ ನಾಡು. ಜಗಜ್ಯೋತಿ ಬಸವಣ್ಣನವರು ತಮ್ಮ ಧರ್ಮಜ್ಯೋತಿಯನ್ನು ಬೆಳಗಿಸಿದುದು ಇಲ್ಲಿಯೇ. ಕನಕದಾಸರು, ಪುರಂದರದಾಸರು, ರಾಮಾನುಜಾಚಾರ್ಯರು, ಶಂಕರಾಚಾರ್ಯರು ಈ ಮಣ್ಣಿನಲ್ಲೇ, ನಾಡಿಗಾಗಿ ತಮ್ಮ ತತ್ವಜ್ಞಾನವನ್ನು ಧಾರೆಯಾಗಿ ಹರಿಸಿದ್ದಾರೆ. ಇಂದು ಆಧುನಿಕ ಯುಗದಲ್ಲಿ ಸಾಹಿತ್ಯಿಕವಾಗಿ,

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಅನೇಕ ರೀತಿಯ ಬದಲಾವಣೆಗಳು ಉಂಟಾಗಿದ್ದರೂ ಸಹ ಈ ಗಡಿನಾಡಿನ ಸಮಸ್ಯೆಗಳು ಮಾತ್ರ ಹಾಗೆಯೇ ಉಳಿದಿದೆ.

'ಸುಖದ ಮೂಲ ಧರ್ಮ, ಧರ್ಮದ ಮೂಲ ಅರ್ಥ, ಅರ್ಥದ ಮೂಲ ರಾಜ್ಯ' ಎಂದು ದಂಡನೀತಿಯನ್ನು ರಾಷ್ಟ್ರಕ್ಕೆ ಸಾರಿದ ಚಾಣುಕ್ಯನು ಮೇಲಿನದನ್ನು ಎಷ್ಟೋ ಶತಮಾನಗಳ ಹಿಂದೆ ಸಾರಿದ್ದರೂ ಸಹ ಇಂದಿಗೂ ಸಹ ಪ್ರಸ್ತುತವೆನಿಸುತ್ತವೆ. ಇಂದು ನಮ್ಮ ನಾಡು ಎಲ್ಲ ರೀತಿಯಲ್ಲಿಯೂ ಏಕೀಕರಣಗೊಂಡಿದೆ. ಅದು ರಾಜಕೀಯ ಏಕೀಕರಣವಿರಬಹುದು, ಅಖಂಡ ಕರ್ನಾಟಕದ ಸಾಂಸ್ಕೃತಿಕ ಏಕೀಕರಣವಿರಬಹುದು ನನ್ನ ದೃಷ್ಟಿಯಲ್ಲಿ ಕರ್ನಾಟಕ ಪ್ರಾಂತ್ಯಗಳ ಏಕೀಕರಣ ಸಂಪೂರ್ಣವಾಗಿ ಕೊನೆ ಗೊಂಡಿಲ್ಲ. ಕನ್ನಾಡಿನ ನೆಲ-ಜಲಗಳು ಇಂದಿಗೂ ವಿವಾದಗಳ ಸುಳಿಯಲ್ಲಿ ಸಿಕ್ಕಿಕೊಂಡಿರುವುದು, ನಮ್ಮ ಕನ್ನಡ ಹಾಗೂ ರಾಷ್ಟ್ರೀಯತೆಯ ಅಧೋಗತಿಗೆ ಹಿಡಿದ ಕನ್ನಡಿಯಾಗಿದೆ. ನಿಜ ಹೇಳಬೇಕೆಂದರೆ ಕನ್ನಡ ನಾಡಿನಲ್ಲಿ ಬೆಳೆದು, ಜೀವನ ನಡೆಸುತ್ತಿದ್ದೂ, ಕನ್ನಡ ನಾಡನ್ನು ನುಡಿಯನ್ನು ಮರೆಯುತ್ತಿರುವವರನ್ನು, ಆ ಭಾಷೆಯನ್ನು ಅಲಕ್ಷದಿಂದ ಕಾಣುತ್ತಿರುವವರನ್ನು ನಾವು ಏನೆಂದು ಕರೆಯೋಣ? ನಾವು ಅಂಥವರೆಲ್ಲರನ್ನು ಹಿಟ್ಲರ್ -ಮುಸಲೋನಿಗಳಂತೆ ಹೊರದೂಡಲು ಯತ್ನಿಸಬೇಕು. ಇಂದು ಕರ್ನಾಟಕದ ಗಡಿಯ ಉದ್ದಗಲಕ್ಕೂ ಮೇಲಿನ ತೊಂದರೆ ಕಾಣುತ್ತಿದೆ. ಬೆಳಗಾವಿ, ಕೋಲಾರಗಳಲ್ಲಿ ಮರಾಠಿಗರು ಹಾಗೂ ತೆಲುಗರು ಕನ್ನಡದ ಮಣ್ಣಿನಲ್ಲಿ ತಿಂದು ತೇಗುತ್ತಿದ್ದರೂ ಅವರಿಗೆ ಕನ್ನಡದ ಬಗ್ಗೆ ಕಿಂಚಿತ್ತೂ ಪ್ರೀತಿ ಇಲ್ಲ. ಕನ್ನಡದ ಕಾರ್ಯಕ್ರಮಗಳು ನಡೆಯುವುದಕ್ಕೂ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಈ ಪ್ರದೇಶಗಳಲ್ಲಿ ಕನ್ನಡ ಕಾರ್ಯಕ್ರಮ ನಡೆಸುವುದಕ್ಕಿಂತ ದೂರದ ದೆಹಲಿಯಲ್ಲಿ ಯಾವುದೇ ಭಯವಿಲ್ಲದೆ ಅದ್ದೂರಿಯಾಗಿ ಕಾರ್ಯಕ್ರಮ ನಡೆಸಿ ಕನ್ನಡವನ್ನು ಮುನ್ನಡೆಸಿ ಬೆಳೆಸಬಹುದು. ಇದಕ್ಕೆಲ್ಲ ನಮ್ಮಲ್ಲಿರುವ ಅಭಿಮಾನ ಶೂನ್ಯತೆಯೇ ಕಾರಣವೆಂದೆನಿಸುತ್ತದೆ.

ಇಂದು ನಾವು ನಮ್ಮ ನಾಡಿನ ಪ್ರಜೆಗಳಲ್ಲಿ ನಾಡಿನ ಬಗ್ಗೆ ಹೆಮ್ಮೆ ಉಂಟುಮಾಡು ವಂತಹ ಕೆಲಸಗಳನ್ನು ಹೆಚ್ಚುಹೆಚ್ಚಾಗಿ ಮಾಡಬೇಕಾಗಿದೆ. ನಮ್ಮ ನಿತ್ಯ ಪತ್ರಿಕೆಗಳು, ನಿಯತಕಾಲಿಕೆಗಳು ತಪ್ಪದೆ ಒಂದು ಪುಟವನ್ನು ಮೀಸಲಾಗಿಟ್ಟು ಅದರಲ್ಲಿ ಪ್ರತಿದಿನ ಹಾಗೆಯೇ ಪ್ರತಿವಾರ ಗಡಿನಾಡ ಕನ್ನಡಿಗರ, ಕನ್ನಡ ನಾಡಿನ ಹಿರಿಮೆಯ ಬಗ್ಗೆ ಲೇಖನ ಬರೆದು ಜನರಿಗೆ ಅರಿವು ಮೂಡಿಸಬೇಕಾಗಿದೆ. ಇಂದಂತು ನಗರ ಪ್ರದೇಶಗಳಲ್ಲಿ ಕನ್ನಡ ಹೇಳಲೂ ಇಲ್ಲದಂತಾಗುತ್ತಿದೆ. ಕನ್ನಡ ಇಂದು ಉಳಿದಿದ್ದರೆ ಅದು ಹಳ್ಳಿಗಳಲ್ಲಿ ಎಂದು ಧೈರ್ಯವಾಗಿ ಹೇಳಬಹುದು. ನೆಮ್ಮದಿ ಇಲ್ಲದವರು ನೆಮ್ಮದಿ ಆಗುವ ಸಂದರ್ಭ ಬಂದರೂ ಅದನ್ನು ಸದುಪಯೋಗ ಮಾಡಿಕೊಳ್ಳುವುದಿಲ್ಲ. ಅದೇ ರೀತಿ ನೆಮ್ಮದಿಯಾಗಿರುವವರು ನೆಮ್ಮದಿ ಕೆಡಿಸುವ ಸಂದರ್ಭಗಳು ಒದಗಿದರೂ ತಲೆಕೆಡಿಸಿಕೊಳ್ಳುವುದಿಲ್ಲ, ಮೇಲಿನ ಈ ಮಾತು ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿ ಪ್ರದೇಶಕ್ಕೆ ಸಂಬಂಧಿಸುತ್ತದೆ. ಏಕೆಂದರೆ ಮಹಾರಾಷ್ಟ್ರಿಯರಿಗೆ ನೆಮ್ಮದಿ ಇರುವಂತೆ ಕಾಣುವುದಿಲ್ಲ. ಅವರಿಗೆ ಸರ್ಕಾರದಿಂದಾಗಲಿ, ಇತರೆ ಯಾವುದೇ ಮೂಲದಿಂದಲೇ ಆಗಲಿ ಯಾವುದೇ ರೀತಿಯ ನೆಮ್ಮದಿ ತರುವ ಕೆಲಸ ಮಾಡಿದರೂ ಸಹ ಅದು ಅವರಿಗೆ ನೆಮ್ಮದಿ ತರುವುದಿಲ್ಲ. ಏಕೆಂದರೆ ಬೆಳಗಾವಿಯ

ಮರಾಠಿಗರು ಆ ಪದದ ಅರ್ಥವನ್ನೇ ಕಳೆದುಕೊಂಡಿದ್ದಾರೆ. ಅದೇ ರೀತಿ ಕರ್ನಾಟಕ ಗಡಿಪ್ರದೇಶದಲ್ಲಿ ಏನೆಲ್ಲ ಕಲಹಗಳು ನಡೆಯುತ್ತಿದ್ದರೂ ಸಹ ನೆಮ್ಮದಿಯಾಗಿದೆ.

ಇಂದು ಕರ್ನಾಟಕ-ಮಹಾರಾಷ್ಟ್ರಗಳ ಗಡಿ ಸಮಸ್ಯೆಯು ದಿನದಿನಕ್ಕೂ ಉಲ್ಬಣ ಪರಿಸ್ಥಿತಿಯನ್ನು ತಳೆಯುತ್ತಲಿದೆ. ಬೆಳಗಾವಿ ಪೂರ್ತಿ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಬೆಳಗಾವಿಯ ಮಹಾರಾಷ್ಟ್ರ ಏಕೀಕರಣ ಸಮಿತಿಯ ಕೆಲವು ಕಿಡಿಗೇಡಿ ರಾಜಕೀಯ ಪುಡಾರಿಗಳು ದೆಹಲಿಯವರೆಗೂ ಪ್ರಯಾಣ ಬೆಳೆಸಿ ಪ್ರಧಾನಮಂತ್ರಿಯನ್ನು ಭೇಟಿಮಾಡಿ ಬರುವಂತೆಯೂ ಆಗಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರವೂ ಸೂಕ್ತ ಕ್ರಮವನ್ನೇನೋ ತೆಗೆದುಕೊಂಡಿಲ್ಲ. ಮಹಾಜನ್ ವರದಿಯನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಪ್ರಧಾನಿಯವರಿಗೆ ಒತ್ತಾಯಿಸಿ ಮುಖ್ಯಮಂತ್ರಿಯಾಗಿದ್ದಾಗ ಜೆ.ಹೆಚ್. ಪಟೇಲರು ತಮ್ಮ ನಿಯೋಗದೊಂದಿಗೆ ದೆಹಲಿಗೆ ಹೋಗಿ ಬಂದಿರುತ್ತಾರೆ. ಪ್ರಸ್ತುತ ಇಂದಿನ ಗಡಿ ಸಮಸ್ಯೆಯು ಗಡಿನಾಡಿನ ಸಾಮಾನ್ಯ ಜನರ ಸಮಸ್ಯೆಯಾಗಿರುವುದಿಲ್ಲ; ಪ್ರಮುಖವಾಗಿ ರಾಜಕೀಯ ಮುಖಂಡರ ಸ್ವಾರ್ಥದ ಕೆಲಸವಾಗಿದೆ. ಈ ಗಡಿ ವಿವಾದವು ಲೋಕಸಭೆ ಅಥವಾ ವಿಧಾನಸಭೆಯ ಚುನಾವಣೆಗಳು ಬಂತೆಂದರೆ ತಾನಾಗಿಯೇ ಸೃಷ್ಟಿಗೊಳ್ಳುತ್ತವೆ. ರಕ್ತಗತವಾಗಿ ಬೆಳೆದುಬಂದಿರುವ ಅವರುಗಳ ಈ ಕೆಟ್ಟ ನಡವಳಿಕೆಗೆ ನಾಲ್ಕು ಕೋಟಿ ಕನ್ನಡಿಗರು ಸಹ ಏಕವ್ಯಕ್ತಿಯಂತೆ ಎದುರಿಸಬೇಕಾಗಿದೆ. ಇತ್ತೀಚೆಗೆ ರಾಜ್ಯದ ಎಲ್ಲಾ ಲೋಕಸಭಾ ಸದಸ್ಯರು ಒಟ್ಟಿಗೆ ಸೇರಿ ಪಕ್ಷಭೇದ ಮರೆತು ಏಕವ್ಯಕ್ತಿಯಂತೆ ಮಹಾರಾಷ್ಟ್ರೀಯರ ಧೋರಣೆಯನ್ನು ಖಂಡಿಸಿ ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗ, ಅದನ್ನು ಎಂದಿಗೂ ನಾವು ಬಿಟ್ಟುಕೊಡೆವು. ಮಹಾಜನ್ ವರದಿಯನ್ನು ಜಾರಿಗೆತಂದು ಈ ಸಮಸ್ಯೆಯನ್ನು ಬಗೆಹರಿಸ ಬೇಕೆಂಬ ನಿರ್ಣಯವನ್ನು ಪ್ರಧಾನಮಂತ್ರಿ, ಗೃಹಮಂತ್ರಿಗಳಿಗೆ ಸಲ್ಲಿಸಿರುವುದು ಸಂತೋಷದ ವಿಷಯ.

ಬೆಳಗಾವಿಯನ್ನು ಹೇಗಾದರೂ ಮಾಡಿ ಕಬಳಿಸುವ ಹವಣಿಕೆಯಲ್ಲಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯ ರಾಜಕೀಯ ಕಿಡಿಗೇಡಿಗಳು ರಾಜ್ಯ ವಿಧಾನಸಭೆಯ ಕಾರ್ಯ ಕಲಾಪಗಳಿಗೆ ಅಡ್ಡಿಯುಂಟು ಮಾಡಿದ್ದಲ್ಲದೆ ದೆಹಲಿಗೆ ಹೋಗಿ ಪ್ರಧಾನಿಯವರನ್ನು ಭೇಟಿಮಾಡಿ ಸಂಬಂಧಿಸಿದ ವಿಷಯದ ಬಗ್ಗೆ ಚರ್ಚಿಸುವಷ್ಟು ಮುಂದುವರಿದಿರುವುದನ್ನು ರಾಜ್ಯದ ನಾಯಕರು ತೀವ್ರವಾಗಿ ಗಮನಿಸಬೇಕಾದದ್ದು ಅಗತ್ಯವಾಗಿದೆ. ಒಂದು ದೃಷ್ಟಿಯಲ್ಲಿ ಇಂಥ ನಿರ್ಧಾರವೇ ನಮ್ಮ ರಾಜ್ಯ ಸರ್ಕಾರದ ಕಣ್ಣು ತೆರೆಸುವುದೆಂದು ಹೇಳಿದರೆ ತಪ್ಪಾಗದು. ಅವರು ಎಷ್ಟೇ ಹೋರಾಡಿದರೂ ಸಹ ಬೆಳಗಾವಿಯಲ್ಲಿರುವ ಒಂದು ಗೇಣು ಜಮೀನು ಸಹ ಸಿಗದು. ಬೇರೆ ಬೇರೆ ರಾಜ್ಯದ ನಿರ್ವಸತಿಗರಿಗೆ ಸಾಕಷ್ಟು ಭೂಮಿಯನ್ನು ಕಷ್ಟದ ಸಮಯದಲ್ಲಿ ಕಾಣಿಕೆಯಾಗಿ ಕೊಡುತ್ತೇವೆ (ಇದು ಪ್ರತಿಯೊಂದು ರಾಜ್ಯದಲ್ಲಿಯೂ ಕಂಡುಬರುತ್ತದೆ) ಕೊಡಲಿ ಅದಕ್ಕೆ ಸಂತೋಷಪಡೋಣ. ನಮ್ಮ ಆದಿಕವಿ ಪಂಪನು ಹೇಳಿರುವ ಹಾಗೆ 'ಮನುಷ್ಯ ಜಾತಿ ಒಂದೇ' ಎಂಬ ಮಾತಿನಂತೆ ಮನುಷ್ಯರೆಲ್ಲ ಒಂದೇ ನಿಜ. ಆದರೆ ಈ ರೀತಿ ಹೊರಗಿನಿಂದ ಬಂದಂತಹ ಜನ ಸಂಯಮ ಹಾಗೂ ಪರಿಸರ, ಭಾಷೆ, ಸಂಸ್ಕೃತಿಗೆ ವಿಧೇಯರಾಗಿ ನಡೆಯುವುದನ್ನು ಬಿಟ್ಟು ದುರಾಗ್ರಹ ಪೀಡಿತರಾಗಿ ತಮ್ಮದೆ ರಾಜ್ಯ ಕೇಳಿದರೆ ಹೇಗೆ, ಮಹಾರಾಷ್ಟ್ರದಿಂದ ಶಿಕ್ಷಣಕ್ಕಾಗಿಯೂ,

ಉದ್ಯೋಗಕ್ಕಾಗಿಯೂ ಬೇಗಾಟಿಗೆ ಬಂದು ನೆಲಸಿದ ವಲಸಿಗರಿಗೆ ಇಲ್ಲಿಯ ನೆಲಬೇಕಾಗಿತ್ತು, ನೀರು ಬೇಕಾಗಿತ್ತು, ಗಾಳಿ ಬೇಕಾಗಿತ್ತು, ಉದ್ಯೋಗ ಬೇಕಾಗಿತ್ತು. ಆದರೆ ಇಲ್ಲಿಯ ಭಾಷೆ ಬೇಡವಾಗಿತ್ತು! ಇಲ್ಲಿಯ ಭಾಷೆಯನ್ನು ಅವರು ಕಲಿಯದೆ ಇದ್ದರೆ ಈ ನಾಡಿನ ಬಗ್ಗೆ ಬಾಂಧವ್ಯ ಕುದುರುವಂತಾಗುತ್ತದೆಯೇ? ಹೃದಯ ಹೃದಯಗಳು ಒಂದಾಗಲು ಸಾಧ್ಯವೇ. ಅದೆಲ್ಲಕ್ಕಿಂತಲೂ ಮಿಗಿಲಾಗಿ ಇಲ್ಲಿ ಸಿಗುವ ಎಲ್ಲ ರೀತಿಯ ಸೌಲಭ್ಯಗಳನ್ನೆಲ್ಲ ಪಡೆದುಕೊಂಡು (ರಾಜಕೀಯವಾಗಿ ಮತ್ತು ಆರ್ಥಿಕವಾಗಿ) ಇರುವ ನೆಲದಲ್ಲಿಯೇ ಪರಕೀಯರಾಗಿಯೇ ಉಳಿದು ಬದುಕುವುದು ತರವೇ? ರಾಜ್ಯದಲ್ಲೆಲ್ಲ ಪರಭಾಷಾ ದ್ವೀಪಗಳು ದಿನೇದಿನೇ ಹೆಚ್ಚುತ್ತಾ ಹೋದರೆ ಸಣ್ಣಪುಟ್ಟ ಸಂಘ ಸಂಸ್ಥೆಗಳೆಲ್ಲವೂ ಕೊಬ್ಬುತ್ತಿದ್ದರೆ ನಮ್ಮಲ್ಲಿ ಸಮಗ್ರತೆ ಉಳಿಯುವುದಾದರೂ ಹೇಗೆ? ನಮ್ಮ ರಾಜಕೀಯ ನಾಯಕರು ಶತಮಾನದ ಆಚೆಗಿನ ಪರಿಸ್ಥಿತಿಯನ್ನು ಕುರಿತು ಆಲೋಚಿಸುತ್ತಿರುವುದು ನಿಜಕ್ಕೂ ದುಃಖದ ಸಂಗತಿಯೇ ಆಗಿದೆ. ಏಕೆಂದರೆ ನೆರೆಯ ರಾಜ್ಯಗಳಲ್ಲಿ ಅಲ್ಲಿಯ ಭಾಷೆ ಬರದಿದ್ದರೆ ಅವರಿಗೆ ಜವಾನನ ಹುದ್ದೆಯೂ ಸಿಗುವುದಿಲ್ಲ. ಆದರೆ ನಮ್ಮಲ್ಲಿ ಮೇಲಿನದಕ್ಕೆ ವಿರುದ್ಧವಾದದ್ದು. ಇಲ್ಲಿ ಕನ್ನಡ ಬಾರದವನಿಗ ದಿವಾನನ ಹುದ್ದೆ ಬೇಕಾದರೆ ಸಿಗುತ್ತದೆ. ಇದಕ್ಕೆ ಪರಿಹಾರ ಎಂದು. ಕನ್ನಡ ಬಾರದ ಜನರು ಆಡಳಿತದಲ್ಲಿ ಹೆಚ್ಚಿದಷ್ಟು ರಾಜ್ಯವು ಕುಟ್ಟೆ ಹಿಡಿದ ಮರದಂತಾಗುತ್ತದೆ. ಇದಕ್ಕೆ ಸರ್ಕಾರ ಕನ್ನಡ ಕಲಿತಿಲ್ಲವಿದ್ದರೆ ಕೆಲಸವಿಲ್ಲವೆಂಬ ನಿಯಮವನ್ನು ಕಡ್ಡಾಯವಾಗಿ ಮಾಡಿದರೆ ಕಷ್ಟಪಟ್ಟು ಕಲಿಯುವ ಪ್ರಯತ್ನವನ್ನಾದರೂ ಮಾಡುತ್ತಾರೆ. ಈ ಎಲ್ಲ ದೃಷ್ಟಿಯಿಂದ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು. (ಇದಕ್ಕಾಗಿ ರಾಜ್ಯಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಚಂದ್ರಶೇಖರ ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಿತು. ಅದು ಪ್ರಾಥಮಿಕ ಶಿಕ್ಷಣವನ್ನು ಕನ್ನಡವಲ್ಲಿಯೇ ನೀಡಬೇಕೆಂಬ ವರದಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುವುದು ಸಂತೋಷಕರ ವಿಷಯ) ಇಂದು ರಾಜ್ಯದ ಹಳ್ಳಿಹಳ್ಳಿಗಳಲ್ಲಿಯೂ ಕಾನ್ವೆಂಟ್ ಶಾಲೆಗಳು ತಲೆ ಎತ್ತಿ ಅ ಆ ಇ ಈ ಅಕ್ಷರವನ್ನು ತಮ್ಮ ತೊದಲು ನಾಲಿಗೆಯ ಮೇಲೆ ಉದುರಿಸುವುದ ಮೊದಲೆ ಎ ಬಿ ಸಿ ಡಿ ಎಂದು ಹೇಳುವ ಪರಿಸ್ಥಿತಿ ಉದ್ಭವವಾಗಿದೆ. ಈ ಬಗ್ಗೆ ಸರ್ಕಾರ ದಿಟ್ಟವಾದ ನಿಲುವನ್ನು ತಾಳದಿದ್ದರೆ ಕನ್ನಡಕ್ಕೆ ಖಂಡಿತವಾಗಿಯೂ ಉಳಿಗಾಲವಿರುವುದಿಲ್ಲ. ಏಕೆಂದರೆ ನಾನು ಮೊದಲೇ ತಿಳಿಸಿರುವ ಹಾಗೆ ಈಗ ಕನ್ನಡ ಉಳಿದಿರುವುದೇ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಿಯೇ ಈ ರೀತಿಯ ಬದಲಾವಣೆ ಕಂಡುಬಂದರೆ ಕನ್ನಡಕ್ಕೆಲ್ಲಿ ಬೆಲೆ.

ನಮಗೆ ರಾಜಕೀಯ ಸ್ವಾತಂತ್ರ್ಯ ಬಂದು ೫೦ ವರ್ಷಗಳು ತುಂಬಿದ್ದರೂ ನಮ್ಮ ನಮ್ಮಲ್ಲಿನ ದಾಸ್ಯಮನೋಭಾವನೆ ತೊಲಗಿಲ್ಲದಿರುವುದರ ಜೊತೆಗೆ ಇನ್ನೊಬ್ಬರ ಅನುಕರಣ ಪ್ರವೃತ್ತಿಯು ಮರೆಯಾಗಿಲ್ಲ. ವಿದೇಶಿಯರ ಮುಂದೆ ಅಂಗಲಾಚುವ ಹೀನ ಪ್ರವೃತ್ತಿ ಕೊನೆಯಾಗಿಲ್ಲ. ಆತ್ಮ ಗೌರವವಂತು ಮೊದಲೇ ಇಲ್ಲದಂತಾಗಿದೆ. ಪ್ರತಿಷ್ಠಿತರ ಸಭೆ ಸಮಾರಂಭಗಳಲ್ಲಿರಲಿ, ಗ್ರಾಮೀಣ ಪ್ರದೇಶದ ಸಾಮಾನ್ಯರು ತುಂಬಿರುವ ಸಮಾರಂಭ ಗಳಲ್ಲಿಯೂ ಆಂಗ್ಲ ಭಾಷೆಯಲ್ಲಿಯೇ ಕಾರ್ಯಕ್ರಮ ನಡೆಸುವ ಹೀನ ಸಂಪ್ರದಾಯ ಬೇರು ಬಿಟ್ಟಿದೆ. ಬೇರೆ ಬೇರೆ ರಾಜ್ಯಗಳ ಅಥವಾ ರಾಷ್ಟ್ರಗಳ ವಿದ್ವಾಂಸರುಗಳು ಪಾಲ್ಗೊಳ್ಳುವ

ಸಮಾರಂಭದಲ್ಲಿ ಆಂಗ್ಲ ಭಾಷೆಯ ಬಳಕೆ ಸರಿಯಾದದ್ದು, ಆದರೆ ನೂರಾರು, ಸಾವಿರಾರು ಮಂದಿ ಕನ್ನಡಿಗರು ನೆರೆದಿರುವ ಸಭೆಯಲ್ಲಿ ಅಲ್ಲಿರುವ ಕನ್ನಡ ಬಾರದ ಒಬ್ಬರೋ ಇಬ್ಬರೋ ಪ್ರತಿಷ್ಠಿತ ವ್ಯಕ್ತಿಗಳಿಗಾಗಿ ಆಂಗ್ಲಭಾಷೆಯನ್ನು ಬಳಸುವುದು ನಾಚಿಕೆಗೇಡು. ಇದು ಇಂದು ಸರ್ವೇಸಾಮಾನ್ಯವಾಗಿದೆ. ಈ ಹಿನ್ನಲೆಯಲ್ಲೇ ನಮಗೆ ಆತ್ಮಗೌರವ ವಿಲ್ಲವೆಂದು ಹೇಳಿರುವುದು. ನಮ್ಮ ರಾಜಕೀಯ ಮುಖಂಡರಿಗೆ ಮೊದಲು ಬರುವುದು ಆಂಗ್ಲಭಾಷೆಯೇ. ಅವರಿಗೆ ಕನ್ನಡದ ಪದಗಳು ಜ್ಞಾಪಕಕ್ಕೆ ಬರುವುದಿಲ್ಲ. ಆದರೆ ಆಂಗ್ಲಭಾಷೆಯ ಪದಗಳು ತಟ್ಟನೆ ಜ್ಞಾಪಕಕ್ಕೆ ಬರುತ್ತವೆ. ನಮ್ಮ ರಾಜಕೀಯ ಧುರೀಣರನ್ನೇ ನೋಡಿ ಯಾವುದೇ ಸನ್ನಿವೇಶದಲ್ಲಿಯೂ ಅವರು ಮಾತನಾಡುವುದು ಆಂಗ್ಲಭಾಷೆಯಲ್ಲಿಯೇ. ಇದರಿಂದ ಅವರ ಆಲೋಚನೆಗಳು, ಅವರ ನಿರ್ಣಯಗಳನ್ನು ಎದುರುನೋಡುತ್ತಿರುವಂತಹ ಯುವ ಪೀಳಿಗೆ ಮಾತೃಭಾಷೆ ಚಿಂತನಾ ಕ್ರಮದಿಂದ ವಂಚಿತರಾಗುತ್ತಿದ್ದಾರೆ.

ನಾನು ಮೊದಲೆ ಪ್ರಸ್ತಾಪಿಸಿರುವ ಹಾಗೆ, ಆತ್ಮಗೌರವವಿರುವ ಯಾವ ರಾಜ್ಯದಲ್ಲಿಯೂ ಸಹ ಇಂಥ ಅವಹೇಳನಕರವಾದ ಪ್ರಸಂಗ ಸಂಭವಿಸುವುದಿಲ್ಲ. ಇಂದು ಕರ್ನಾಟಕದ ಹೆಮ್ಮೆಯ ನಗರ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮವು ಮೂರನೇ ಸ್ಥಾನ ಪಡೆದಿದೆ. ಪ್ರತಿಷ್ಠಿತ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ವಿಷಯವಾಗಿ ಪಡೆದಿರುವ ವಿದ್ಯಾರ್ಥಿಯನ್ನು ಅಸ್ಪೃಶ್ಯನಂತೆ ನೋಡಲಾಗುತ್ತಿದೆ. ನಿಜ ಹೇಳಬೇಕೆಂದರೆ ಕನ್ನಡ ಭಾಷೆಯು ಇಂದು ಶಿಕ್ಷಣ ಮಟ್ಟದಲ್ಲಿ ಅಸ್ಪೃಶ್ಯವಾಗಿದೆ. ಉತ್ತಮ ಸ್ಥಾನದಲ್ಲಿ ಇಂಗ್ಲಿಷ್ ಇದೆ.

ಮೇಲಿನ ರೀತಿಯಲ್ಲಿ ಕನ್ನಡ ನಾಡಿನಲ್ಲಿ ಕನ್ನಡದ ಗಡಿಪ್ರದೇಶಗಳಲ್ಲಿ ಕನ್ನಡಕ್ಕಾಗುತ್ತಿರುವ ಅನ್ಯಾಯದ ಪಟ್ಟಿಯನ್ನು ಬೆಳೆಸಬಹುದು. ಕನ್ನಡಕ್ಕೆ ಕನ್ನಡ ನಾಡಿನಲ್ಲಿಯೇ ಈ ದುರ್ದೆಸೆ ಇರುವಾಗ ನೆರೆ ರಾಜ್ಯದಲ್ಲಿ ಕನ್ನಡಿಗರಿಗೆ, ಕನ್ನಡ ಭಾಷೆಗೆ ಸ್ಥಾನಮಾನ ದೊರೆತೀತೆ? ಈ ಅನ್ಯಾಯದ ಪರಂಪರೆಗೆ ಪರಕೀಯರಂತೂ ಕಾರಣವೇ ಅಲ್ಲ. ಕಾಸರಗೋಡು, ನೀಲಗಿರಿ, ಹೊಸೂರು, ಸೊಲ್ಲಾಪುರಗಳು ನಮಗೆ ದಕ್ಕದಿರುವುದಕ್ಕೆ ನಮ್ಮಲ್ಲಿ ತುಂಬಿ ತುಳುಕುತ್ತಿರುವ ಅನೈತಿಕತೆಯೇ ಕಾರಣ. ನಮ್ಮ ಭಾಷೆಗೆ ಸರಿಯಾದ ಸ್ಥಾನ ದೊರಕದಿದ್ದರೆ ನಮ್ಮಲ್ಲಿರುವ ಸ್ವಾಭಿಮಾನದ ವೈಫಲ್ಯವೇ ಕಾರಣ. ಕನ್ನಡವು ಶಿಕ್ಷಣ ಮಾಧ್ಯಮವಾಗದಿದ್ದಕ್ಕೆ, ಆಡಳಿತ ಭಾಷೆಯಾಗಿ ಹೊರ ಹೊಮ್ಮದಿದ್ದಕ್ಕೆ ನಮ್ಮ ದಾಸ್ಯ ಮನೋಭಾವವೇ ಕಾರಣ. ಇದಕ್ಕೆ ನಾವು ಷೈಲಾಕಿನ ಕತೆಯಲ್ಲಿ ರಕ್ತದಿಂದ ಮಾಂಸವನ್ನು ಬೇರ್ಪಡಿಸಲು ಹೇಗೆ ಸಾಧ್ಯವಾಗಲಿಲ್ಲವೂ ಹಾಗೆ ಕನ್ನಡ ನಾಡಿನಿಂದ ಒಂದು ಗೇಣು ಭೂಮಿಯನ್ನು ಬೇರ್ಪಡಿಸದೆ ಇನ್ನೂ ಸೇರಿಸಿಕೊಳ್ಳುವ ಕೆಲಸ ಮಾಡಬೇಕಾಗಿದೆ. ಹೀಗೆ ಉಳಿಸಕೊಳ್ಳಬೇಕಾದರೆ ಸಂಸ್ಕೃತಿಯೊಡನೆ ರಾಜಕೀಯವೂ ತಲೆ ಹಾಕಲೇಬೇಕು. ಒಟ್ಟು ಜನಾಂಗಕ್ಕೆ, ಜನಜೀವನಕ್ಕೆ ಸಂಬಂಧಿಸಿದ ನಿಲುವುಗಳನ್ನು ಕೈಗೊಳ್ಳುವ ಅಧಿಕಾರ ರಾಜಕೀಯಕ್ಕೆ ಹೆಚ್ಚಾಗಿ ಇರುವುದು. ನಂತರದ ಸ್ಥಾನ ಸಾಹಿತ್ಯಕ್ಕೆ, ಕಲೆಗೆ, ಎಂದು ಹೇಳಬಹುದು. ಅದ್ದರಿಂದ ಇಲ್ಲಿ ರಾಜಕಾರಣಿಗಳು ತಾಳ್ಮೆಯಿಂದ ವ್ಯವಹರಿಸಿ ನಾಡಿನ ಶ್ರೇಯಸ್ಸಿಗೆ ದುಡಿಯಬೇಕು.

ದಕ್ಷಿಣ ಭಾರತದ ನಾನಾ ಭಾಷೆ, ವರ್ಗಗಳ ಜನರೆನಿಸಿದ ನಾವೆಲ್ಲ ಒಂದೇ. ಒಂದೇಮನೆಯವರು. ಅಷ್ಟೆ ಅಲ್ಲ ಒಂದೇ ಆಚಾರ, ವಿಚಾರ, ನಡೆ, ನುಡಿ, ಉಡುಗೆ, ತೊಡುಗೆ, ಹೊಂದಿರುವವರುಗಳು ಅಂದ ಮೇಲೆ ಆಂಧ್ರ-ಕರ್ನಾಟಕದಲ್ಲಿ ಕಿರಿ ಕಿರಿಯಾಕೆ? ಕರ್ನಾಟಕ-ಮಹಾರಾಷ್ಟ್ರಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕದನಗಳೇಕೆ? ನಮ್ಮಲ್ಲಿರುವ ಸರ್ವರೀತಿಯ ಬೇಧ ಭಾವಗಳನ್ನು ಸಂಧಾನದ ಮೂಲಕ ಬಗೆಹರಿಸಿಕೊಂಡು ಶಾಂತಿಯುತವಾಗಿ ಒಟ್ಟಿಗೆ ಬದುಕಿ ರಾಷ್ಟ್ರದ ಅಭಿವೃದ್ಧಿಗೆ ನೆರವಾದರೆ ಒಳ್ಳೆಯದೆನಿಸುತ್ತದೆ.

ಗ್ರಂಥ ಋಣ

೧. ಕನ್ನಡ ಅಧ್ಯಯನ (ಅರ್ಧ ವಾರ್ಷಿಕ ಪತ್ರಿಕೆ) - ಕನ್ನಡ ವಿಶ್ವವಿದ್ಯಾಲಯ-ಹಂಪಿ, ೧, ೨, ೩

೨. ಕನ್ನಡ-ಕನ್ನಡಿಗ-ಕರ್ನಾಟಕ - ಕನ್ನಡ ಶಕ್ತಿಕೇಂದ್ರ, ಬೆಂಗಳೂರು - ೧೯೯೦

೩. ಕರ್ನಾಟಕ (ನಾಮಕರಣ ಮಹೋತ್ಸವ ಸಂಪುಟ) ಬೆಂ - ೧೯೭೩

೪. ಕರ್ನಾಟಕ ಏಕೀಕರಣ - ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಕಟಣೆ

೫. ಕರ್ನಾಟಕ ಏಕೀಕರಣದ ಕಥೆ - ರಂ. ರಾ. ದಿವಾಕರ, ಹುಬ್ಬಳ್ಳಿ, ೧೯೫೬

೬. ಕರ್ನಾಟಕ ಏಕೀಕರಣದ ಕೈಪಿಡಿ - ಭಾಗ ೧ ವಿವಿಧ ಲೇಖಕರು, ಧಾರವಾಡ, ೧೯೪೭

೭. ಕನ್ನಡದ ಹಿತ - ಡಾ. ಯು. ಆರ್. ಅನಂತಮೂರ್ತಿ ಬೆಂ. ೧೯೯೨

೮. ಕನ್ನಡಿಗರ ಕರ್ತವ್ಯ - ಕಡಪ ರಾಘವೇಂದ್ರ ರಾವ್

೯. ಕರ್ನಾಟಕದ ಏಕೀಕರಣದ ಹಾದಿಯಲ್ಲಿ - ಡಾ. ಪಾಟೀಲ ಕಲ್ಲಿನಗೌಡ, ಹುಬ್ಬಳ್ಳಿ, ೧೯೮೬

೧೦. ಕರ್ನಾಟಕದ ಗಡಿ ರೇಖೆಗಳು (ಪೂರ್ವಾರ್ಧ) - ಶಿಮಸುತ. ಸಂ. ತಲ್ಲೂರ ರಾಮನಗೌಡ ಪಾಟೀಲ್ (ಪೂರ್ವಾರ್ಧ) ಬೈಲಹೊಂಗಲ-೧೯೪೯

೧೧. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ - ಸಂ. ಡಾ. ಸೂರ್ಯನಾಥ್ ಕಾಮತ್ ಬೆಂಗಳೂರು, ೧೯೯೪

೧೨. ಕರ್ನಾಟಕ ಸರ್ಕಾರದ ವಾರ್ಷಿಕ ವರದಿ - ಕನ್ನಡ ಮತ್ತು ಸಂಸ್ಕೃತಿ ಇಲಾಖೆ (೧೯೯೪, ೯೫, ೯೬)

೧೩. ಕರ್ನಾಟಕಕ್ಕೆ ಶುಭವಾಗಲಿ - ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸ್‌ರವರ ಆಯ್ದ ೫೦ ಭಾಷಣಗಳು-೧೯೭೬

೧೪. ಕರ್ನಾಟಕದ ಕಥೆ - ಡಾ. ಪಾಟೀಲ ಪುಟ್ಟಪ್ಪ, ಬೆಂಗಳೂರು, ೧೯೯೧

೧೫. ಕಾಸರಗೋಡು ಕನ್ನಡಿಗರ ಸಮ್ಮೇಳನ - ಅಧ್ಯಕ್ಷಭಾಷಣ, ದೇ.ಜ.ಗೌ, ೧೯೭೩

೧೬. ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಕೈ ಹೊತ್ತಿಗೆ - ಕಯ್ಯಾರ ಕಿಞ್ಞಣ್ಣ ರೈ, ಕಾಸರಗೋಡು, ೧೯೫೯

೧೭. ಕೌಸ್ತುಬ - ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ನೆನಪಿನ ಸಂಚಿಕೆ, ೧೯೭೭

೧೮. ಗಡಿನಾಡಿನ ಕಿಡಿ (ಕಯ್ಯಾರ ಕಿಞ್ಞಣ್ಣ ರೈ, ಅಭಿನಂದನಾ ಗ್ರಂಥ) ಕಾಸರಗೋಡು, ೧೯೯೦

೧೯. ತೆಂಕನಾಡು (ಸ್ಮರಣ ಸಂಚಿಕೆ) ೨೧ನೇ ಸಾಹಿತ್ಯ ಸಮ್ಮೇಳನ, ಕಾಸರಗೋಡು, ೧೯೪೭

೨೦. ನನ್ನ ಜೀವನ ಸ್ಮೃತಿಗಳು - ಆಲೂರು ವೆಂಕಟರಾಯರು, ಧಾರವಾಡ, ೧೯೭೪

೨೧. ನಮಗೆ ಬೇಕಾದ ಸ್ವರಾಜ್ಯ ಹಾಗೂ ಹೊಸರಾಜ್ಯ ಘಟನೆ - ರಾ. ದಿವಾಕರ, ಧಾರವಾಡ, ೧೯೩೬

೨೨. ನಮ್ಮ ನಾಡು ಕರ್ನಾಟಕ - ಡಾ. ಹೆಚ್. ಎಸ್. ಗೋಪಾಲರಾವ್, ಬೆಂಗಳೂರು, ೧೯೯೩

೨೩. ಸುವಿಯೇ ನಾಡಿನ ಜೀವ - ಟಿ.ಹೆಚ್.ಎಂ. ಸದಾಶಿವಯ್ಯ (ಅಧ್ಯಕ್ಷರ ಭಾಷಣ - ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್), ೧೯೪೬

೨೪. ಪುಸ್ತಕ ಭಾಗ್ಯ - ಕನ್ನಡ ಸಾಹಿತ್ಯ ಪರಿಷತ್‌ನ ವಜ್ರಮಹೋತ್ಸವ ನೆನಪಿನ ಸಂಚಿಕೆ, ಬೆಂಗಳೂರು, ೧೯೭೭

೨೫. ಮಾತೃ ಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡಬೇಕು - ಸರ್ವೋನ್ನತ ನ್ಯಾಯಾಲಯದ ತೀರ್ಪು-ಮೈಸೂರು, ೧೯೯೭

೨೬. ರಾಜ್ಯದ ಹೆಸರು ಕರ್ನಾಟಕವೆಂದೇ ಆಗಬೇಕು - ಪೂಜಾರ ಶೀಲಗಂಗಯ್ಯ (ವಿವಿಧ ಮೂಲಗಳಿಂದ) ೧೯೭೨

೨೭. ಸಂಶೋಧನ (ಡಾ. ಎಂ. ಚಿದಾನಂದಮೂರ್ತಿ ಅಭಿನಂದನಾ ಗ್ರಂಥ) ಸಂ. ಪ್ರೊ. ಲಕ್ಷ್ಮಣ್ ತೆಲಗಾವಿ, ಬೆಂಗಳೂರು, ೧೯೯೧

೨೮. ವಿಶ್ವ ಕನ್ನಡ ಸಮ್ಮೇಳನಾಧ್ಯಕ್ಷರುಗಳ ಭಾಷಣಗಳು - ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೨೯. ಹಚ್ಚೇವು ಕನ್ನಡ ದೀಪ (ಸ್ಮರಣ ಸಂಚಿಕೆ) ಧಾರವಾಡ, ೧೯೯೦

೩೦. ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ಕೆ. ಹನುಮಂತಯ್ಯನವರು ಮೈಸೂರು ವಿಧಾನಮಂಡಲದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಆಯೋಗದ ವರದಿಯ ಮೇಲೆ ಮಾಡಿರುವ ಆಶು ಭಾಷಣಗಳು.

೩೧. ಚಿನ್ನದ ಬೆಳಕು (ಸುವರ್ಣ ಮಹೋತ್ಸವ ಸಂಪುಟ) - ಕನ್ನಡ ಸಾಹಿತ್ಯ ಪರಿಷತ್ತು

೩೨. ಕರ್ನಾಟಕ ಚರಿತ್ರೆ (ಸಮಗ್ರ ಕರ್ನಾಟಕ ಚರಿತ್ರೆಯ ಏಳು ಸಂಪುಟಗಳು) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೩೩. ನಮ್ಮ ಕರ್ನಾಟಕ - ಟಿ. ವಿ. ವೆಂಕಟಾಚಲಶಾಸ್ತ್ರಿ, ೧೯೮೬

೩೪. ಕನ್ನಡ ನಾಡಿನ ಚರಿತ್ರೆ - ಡಾ. ಎಂ. ಎಚ್. ಕೃಷ್ಣಯ್ಯ, ೧೯೯೭

೩೫. ಕರ್ನಾಟಕ - ಮಹಾರಾಷ್ಟ್ರ (ಮಹಾಜನ ವರದಿ ವಿಶ್ಲೇಷಣೆ), ಮಹದೇವ ಬಣಕಾರ

೩೬. "ಮಹಾಜನ ವರದಿ ಕಾರ್ಯಗತವಾಗದಿದ್ದರೂ ಕಾಸರಗೋಡು ಕೇರಳದಲ್ಲಿ ಉಳಿಯದು - ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗದು" - ಮಹಾದೇವ ಬಣಕಾರ

೩೭. ಮೈಸೂರು ಗೆಜೆಟಿಯರ್ - ಡಿಸೆಂಬರ್ ೩೧, ೧೯೧೧

೩೮. ನೆಹರು ಕಮಿಟಿ ರಿಪೋರ್ಟ್ - ೧೯೨೮

೩೯. ಲಿಂಗ್ವಿಸ್ಟಿಕ್ ಪ್ರಾವಿನ್ಸಿಯನ್ ಕಮಿಷನ್ ರಿಪೋರ್ಟ್ (ಎಸ್. ಕೆ. ಧರ್ ರಿಪೋರ್ಟ್) ೧೯೪೮


೪೦. ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ - ಡಾ. ಸಿ. ಆರ್. ಗೋವಿಂದರಾಜು, ಬೆಂಗಳೂರು, ೧೯೯೮

ಅನುಬಂಧಗಳು


ಪತ್ರಿಕೆ ಮತ್ತು ನಿಯತಕಾಲಿಕೆಗಳು

೧. ಸಾಧ್ವಿ
೨. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ
೩. ಕನ್ನಡ ನುಡಿ
೪. ಪ್ರಬುದ್ಧ ಕರ್ನಾಟಕ
೫. ಪ್ರಜಾಮತ (ಹಿಂದಿನ ಸಂಪುಟಗಳು)
೬. ವಿಶಾಲ ಕರ್ನಾಟಕ
೭. ಕರ್ಮವೀರ
೮. ಸಂಯುಕ್ತ ಕರ್ನಾಟಕ
೯. ಪ್ರಜಾವಾಣಿ
೧೦. ಕನ್ನಡ ಪ್ರಭ
೧೧. ಕಾಸರಗೋಡು ಮಿತ್ರ
೧೨. ಅಂಕಣ
೧೩. ಏಕೈಕ ಕರ್ನಾಟಕ
೧೪. ಅರಣೋದಯ
೧೫. ಶರಣ ಸಾಹಿತ್ಯ
೧೬. ಕನ್ನಡ ಕೇಸರಿ
೧೭. ರಾಜ ಹಂಸ
೧೮. ಕರ್ನಾಟಕ ಪತ್ರ
೧೯. ಬಿಂದು
೨೦. ಸುಗ್ಗಿಯ ಮೈಸೂರು - ದೂರದರ್ಶನದಲ್ಲಿ ಪ್ರಕಟವಾದ
ಕೆಲವು ಸಾಕ್ಷ್ಯ ಚಿತ್ರಗಳು


ನಕ್ಷೆಗಳು




ಹಂಚಿಹೋದ ಕರ್ನಾಟಕ



೧. ಮುಂಬಯಿ
೨. ಮದ್ರಾಸು
೩. ಕೊಡಗು
೪. ಮೈಸೂರು
೫. ಹೈದರಾಬಾದು
೬. ಕೊಲ್ಹಾಪುರ
೭. ಸಾಂಗ್ಲಿ
೮. ಮಿರ್ಜ (ಹಿ)
೯. ಮಿರ್ಜ (ಕಿ)
೧೦. ಕುರಂದವಾಡ (ಹಿ)
೧೧. ಕುರಂದವಾಡ (ಕಿ)
೧೨. ಜಮಖಂಡಿ
೧೩. ಮುಧೋಳ
೧೪. ರಾಮದುರ್ಗ
೧೫. ಜತ್ತ
೧೬. ಅಕ್ಕಲಕೋಟೆ
೧೭. ಔಂಧ (ಗುಡ್ಡಾಪುರ)
೧೮. ಸವಣೂರು
೧೯. ಸೊಂಡೂರು

ಬ್ರಿಟಿಷ್ ಕರ್ನಾಟಕ ಮತ್ತು ಸಂಸ್ಥಾನಗಳು






ಮುಂಬಯಿ ಕರ್ನಾಟಕ




ಹೈದರಾಬಾದ್ (ನಿಜಾಂ) ಕರ್ನಾಟಕ



ಮೈಸೂರು ಸಂಸ್ಥಾನ


ಮಹಾರಾಷ್ಟ್ರ
ಆಂಧ್ರ ಪ್ರದೇಶ
ಅರಬ್ಬೀ ಸಮುದ್ರ
ತಮಿಳುನಾಡು
ಬೀದರ್
ಗುಲ್ಬರ್ಗಾ
ಬಿಜಾಪುರ
ಬೆಳಗಾವಿ
ರಾಯಚೂರು
ಧಾರವಾಡ
ಬಳ್ಳಾರಿ
ಉತ್ತರ ಕನ್ನಡ
ಚಿತ್ರದುರ್ಗ
ಶಿವಮೊಗ್ಗ
ಚಿಕ್ಕಮಗಳೂರು
ತುಮಕೂರು
ಕೋಲಾರ
ದಕ್ಷಿಣ ಕನ್ನಡ
ಹಾಸನ
ಬೆಂಗಳೂರು
ಮಂಡ್ಯ
ಕೊಡಗು
ಮೈಸೂರು
ಉ
ಪ
ಪೂ
ದ

ಏಕೀಕೃತ ಕರ್ನಾಟಕ



ಪ್ರಸ್ತುತ ಕರ್ನಾಟಕ (ಏಳು ಹೊಸ ಜಿಲ್ಲೆಗಳೊಂದಿಗೆ)

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹ ಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂಥ ಜೀವನಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ–ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕು ಮಾಡಿದೆ. ಹಿಂದಿನದು ಕನ್ನಡ ಸಂಸ್ಕೃತ ದ್ವಿಭಾಷಾ ಸಂದರ್ಭ. ಇಂದಿನದು ಕನ್ನಡ–ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿ ಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿ ಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶಿ ಚಳವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶಿಸತ್ಯ'ಗಳನ್ನು ಶೋಧಿಸುವುದು.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, ಅದನ್ನು ತನ್ನ ಪ್ರಸಾರಾಂಗದ ಮೂಲಕ ಪ್ರಧಾನವಾಗಿ ಪೂರೈಸುತ್ತಲಿದೆ. ಈ ನಿಟ್ಟಿನಲ್ಲಿ ಪ್ರಕಟವಾದ ಇತ್ತೀಚಿನ ಪುಸ್ತಕ, 'ಗಡಿ ಚಳವಳಿಗಳು'.

ಅನ್ಯಾಯವನ್ನು ಸಹಿಸಿಕೊಂಡು ಹೋಗುತ್ತಲಿರುವ ಸ್ವಭಾವದ ಭಾರತೀಯರು ಇತ್ತೀಚೆ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಮನೋಧರ್ಮವನ್ನು ರೂಢಿಸಿಕೊಂಡಿರುವ ಫಲ 'ಚಳವಳಿ'. ಏಕೀಕರಣೋತ್ತರ ಕರ್ನಾಟಕದಲ್ಲಿ ತಲೆದೋರಿದ ಇಂಥ ಆರು ಮುಖ್ಯ ಚಳವಳಿಗಳನ್ನು ಕುರಿತು ಚರಿತ್ರೆ ವಿಭಾಗ ಯೋಜನೆ ಯೊಂದನ್ನು ಕೈಗೆತ್ತಿಗೊಂಡಿದೆ. ಇದರ ಅಂಗವಾಗಿ ಪ್ರಕಟವಾಗು ತ್ತಲಿರುವ ಆರು ಕೃತಿಗಳಲ್ಲಿ 'ಗಡಿ ಚಳವಳಿಗಳು' ಒಂದು. ಇದನ್ನು ರಚಿಸಿದ ಶ್ರೀ ಎನ್. ಚಿನ್ನಸ್ವಾಮಿ ಸೋಸಲೆ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಎಂ. ಎಂ. ಕಲಬುರ್ಗಿ
ಕುಲಪತಿಗಳು